Swabhimani Sahakari

# ಸ್ವಾಭಿಮಾನಿ ಸಹಕಾರಿ

Pages : 36 / 12₹

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 16
Issue - 10
October- 2019


ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ




ಜ್ಯೋತಿಯ ಬಲದಿಂದ
ತಮಂಧದ ಕೇಡು ನೋಡಯ್ಯಾ...
–ಬಸವಣ್ಣ



ಮಹಾತ್ಮಾ ಗಾಂಧಿ
150ನೇ
ಜನ್ಮದಿನಾಚರಣೆ

ಲಾಲ್ ಬಹದ್ದೂರ್ ಶಾಸ್ತ್ರಿ
115ನೇ
ಜನ್ಮದಿನಾಚರಣೆ





ಶ್ರೀ ಬಸವರಾಜ ಬೊಮ್ಮಾಯಿ
ಗೃಹ ಹಾಗೂ ಸಹಕಾರ ಸಚಿವರು

ಇಂದಿನ 21ನೇ ಶತಮಾನದಲ್ಲಿ
ಹೇಗೆ ಪ್ರಭಾವ ಬೀರಬೇಕು ಎಂಬ
ಯುಗದಲ್ಲಿ ಬದುಕುತ್ತಿದ್ದೇವೆ
ಆದರೆ ಗಾಂಧೀಜಿಯವರ ದೃಷ್ಟಿ
ಹೇಗೆ ಸ್ಫೂರ್ತಿ ನೀಡುವುದು ಎಂಬುದಾಗಿತ್ತು.
–ಪ್ರಧಾನಿ ನರೇಂದ್ರ ಮೋದಿ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 4789

ಇ–ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1291



ಶ್ರೀ ಎನ್.ಎಸ್. ಪ್ರಸನ್ನಕುಮಾರ್ ಐ.ಎ.ಎಸ್.
ಸಹಕಾರಿಗಳ ನಿಬಂಧಕರು



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

“ ಸಂಯುಕ್ತ ಸಹಕಾರಿಯ 18ನೇ ವಾರ್ಷಿಕ ಸಾಮಾನ್ಯ ಸಭೆ ದಿನಾಂಕ ಸೆಪ್ಟೆಂಬರ 18ರಂದು ನಗರದ ಸುಜ್ಞಾನ ಮಂಟಪದಲ್ಲಿ ಅತ್ಯಂತ ವೈಭವೋಪೇತವಾಗಿ ಸಂಭ್ರಮ ಸಡಗರದಿಂದ ನಡೆದಿದೆ. 3554 ಅರ್ಹ ಸದಸ್ಯರ ಸಂಖ್ಯೆಯಲ್ಲಿ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಿಂದ 1133 ಪ್ರತಿನಿಧಿಗಳು ಭಾಗವಹಿಸಿ ಸಾಮಾನ್ಯ ಸಭೆಯನ್ನು ಯಶಸ್ವಿಗೊಳಿಸಿರುವುದು ಸ್ವಾಗತಾರ್ಹ. ಸಂತೋಷಕರ. “

# ಸಂಯುಕ್ತ ಸಹಕಾರಿಯ 18ನೇ ವಾರ್ಷಿಕ ಸಾಮಾನ್ಯ ಸಭೆ ಯಶಸ್ಸಿಗೆ ಸಹಕರಿಸಿದ ಸೌಹಾರ್ದ ಸಹಕಾರಿಗಳಿಗೆ ಕೃತಜ್ಞತೆಗಳು ಸದಸ್ಯರ ಭಾಗವಹಿಸುವಿಕೆ ಪ್ರೋತ್ಸಾಹದಾಯಕ : ಚರ್ಚೆಗಳು ಅರ್ಥಪೂರ್ಣ : ಪ್ರಗತಿಗೆ ಪೂರಕ.

**ಆತ್ಮೀಯ ಸಹಕಾರಿ ಬಂಧುಗಳೇ**

ಸಮಸ್ತ ಸಹಕಾರಿಗಳಿಗೆ ನವರಾತ್ರಿ (ದಸರಾ), ಮಹರ್ಷಿ ವಾಲ್ಮೀಕಿ ಜಯಂತಿ ಹಾಗೂ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು. ದೀಪಾವಳಿ ಹಬ್ಬವು ಪ್ರತಿಯೊಬ್ಬರ ಮನೆ ಹಾಗೂ ಮನಗಳಲ್ಲಿ ದೀಪದಿಂದ ದೀಪ ಬೆಳಗಿಸುವುದರ ಮೂಲಕ ಅಂಧಕಾರವನ್ನು ಓಡಿಸಿ ಜ್ಞಾನಜ್ಯೋತಿಯನ್ನು ಬೆಳಗಿಸುವ, ಸಮಾಜದಲ್ಲಿ ದೇಶದಲ್ಲಿ ಪ್ರೀತಿ ವಿಶ್ವಾಸ ಸುಖ ಸಂತೋಷಗಳನ್ನು ಹೆಚ್ಚಿಸುವ ಹಾಗೂ ಏಕತೆಯನ್ನು ಸಂಭ್ರಮಿಸುವ ಹಬ್ಬವಾಗಿದೆ. ಈ ಶುಭ ಸಂದರ್ಭದಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಒಂದಾಗಿ ಸ್ನೇಹಭಾವದಿಂದ ಸಹಕಾರ ತತ್ವಗಳ ಅಡಿಯಲ್ಲಿ ಸಮಾಜದ ಅಭಿವೃದ್ಧಿಗಾಗಿ ಕಾರ್ಯಗಳನ್ನು ಹಮ್ಮಿಕೊಂಡು ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿಯ ವೇಗವನ್ನು ಗುಣಮಟ್ಟದ ಆಶಯವನ್ನು ಸಾಧಿಸೋಣ ಎಂದು ಹಾರೈಸುತ್ತೇನೆ.

ಸಂಯುಕ್ತ ಸಹಕಾರಿಯ 18ನೇ ವಾರ್ಷಿಕ ಸಾಮಾನ್ಯ ಸಭೆ ದಿನಾಂಕ ಸೆಪ್ಟೆಂಬರ್ 18ರಂದು ನಗರದ ಸುಜ್ಞಾನ ಮಂಟಪದಲ್ಲಿ ಅತ್ಯಂತ ವೈಭವೋಪೇತವಾಗಿ ಸಂಭ್ರಮ ಸಡಗರದಿಂದ ನಡೆದಿದೆ. 3554 ಅರ್ಹ ಸದಸ್ಯರ ಸಂಖ್ಯೆಯಲ್ಲಿ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಿಂದ 1133 ಪ್ರತಿನಿಧಿಗಳು ಭಾಗವಹಿಸಿ ಸಾಮಾನ್ಯ ಸಭೆಯನ್ನು ಯಶಸ್ವಿಗೊಳಿಸಿರುವುದು ಸ್ವಾಗತಾರ್ಹ, ಸಂತೋಷಕರ.

ಸಹಕಾರಿ ತತ್ವಗಳ ಅಡಿಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯದಂತೆ ಕಾರ್ಯನಿರ್ವಹಿಸುತ್ತಿರುವ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ ರಾಜ್ಯದ ಎಲ್ಲ ಮಹಾಮಂಡಳಗಳ ಸಾಮಾನ್ಯ ಸಭೆಗಿಂತ ಭಿನ್ನ, ವೈಶಿಷ್ಟ ಪೂರ್ಣ, ಅರ್ಥಪೂರ್ಣ ಹಾಗೂ ಅನುಕರಣಿಯ ರೀತಿಯಲ್ಲಿ ನಡೆದಿರುವುದು ಸೌಹಾರ್ದ ಸಹಕಾರಿಗಳು ಹೆಮ್ಮೆ ಪಡುವಂತಹದ್ದಾಗಿದೆ ಎಂದು ನನ್ನ ಅಭಿಪ್ರಾಯ.

ಈ ಸಾಮಾನ್ಯ ಸಭೆ ಕೇವಲ ಒಂದು ವಾರ್ಷಿಕ ಮಹಾಸಭೆಯಾಗಿರದೇ ತಂತ್ರಜ್ಞಾನ ಮೇಳ, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಪ್ರದರ್ಶನ, ಪ್ರಕಟಣೆಗಳ ಮಾರಾಟ, ವಿವಿಧ ವಿಷಯಗಳ ಬಗ್ಗೆ ತಜ್ಞರಿಂದ ಉಪನ್ಯಾಸಗಳ, ಸದಸ್ಯರೊಡನೆ ವಿಚಾರ ವಿನಿಮಯ, ಸೌಹಾರ್ದ ಸಹಕಾರಿ ಕ್ಷೇತ್ರದ ಸಂಬಂಧವಿರುವ ಸಚಿವರಿಗೆ ಹಾಗೂ ಶಾಸಕರಿಗೆ, ಸೌಹಾರ್ದ ಸಹಕಾರಿಗಳಿಗೆ ಹಾಗೂ ಶ್ರೇಷ್ಠ ಸಹಕಾರಿಗಳಿಗೆ ಅಭಿನಂದಿಸುವ ಮೂಲಕ ಸೌಹಾರ್ದ ಸಹಕಾರಿಗಳಲ್ಲಿ ಶಿಸ್ತು ಸಮಯಪಾಲನೆ, ಕರ್ತವ್ಯ ಪ್ರಜ್ಞೆ, ಪ್ರಗತಿಪರ ಚಿಂತನೆ ಅಭಿವೃದ್ಧಿ ಕ್ರಿಯಾಯೋಜನೆಯತ್ತ ಪ್ರಜ್ಞೆಯನ್ನು ಹಾಗು ಉತ್ಸಾಹವನ್ನು ಇಮ್ಮಡಿಗೊಳಿಸುವ ಪ್ರಯತ್ನ ಈ ಸಭೆಯ ಮೂಲಕ ಆಗಿದೆ ಎಂದು ಸಂಯುಕ್ತ ಸಹಕಾರಿ ಭಾವಿಸಿದೆ. ಸಹಕರಿಸಿದ ಎಲ್ಲ ಸಹಕಾರಿಗಳಿಗೆ ಕೃತಜ್ಞತೆಗಳು.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್: souharda@souharda.coop
swabhimani@souharda.coop
ವೆಬ್‌ಸೈಟ್: www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ....................................... 2
ಸಂಪಾದಕೀಯ....................................... 3
ಜ್ಞಾನ ಜ್ಯೋತಿ....................................... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ....................................................... 5–23
ಸೌಹಾರ್ದ ಸಹಕಾರಿಗಳ ಸಮಾಚಾರಗಳು ... ....................................................... 24–26
ನಿಮ್ಮ ಪ್ರಶ್ನೆ ನಮ್ಮ ಉತ್ತರ.......................27
ಲೇಖನ.......................................... 28–36

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳಿಗೆ ವಿವಿಧ ಕಾನೂನುಗಳ ಅರಿವು

ಸಂಯುಕ್ತ ಸಹಕಾರಿಯ 18ನೇ ವಾರ್ಷಿಕ ಸಾಮಾನ್ಯ ಸಭೆಯ ನಂತರ ಸದಸ್ಯ ಸಹಕಾರಿಗಳ ಮಾಹಿತಿಗಾಗಿ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಕಾಯ್ದೆ 2019 ಹಾಗೂ ಆದಾಯ ತೆರಿಗೆ ಕಾಯ್ದೆ ಮೂಲದಲ್ಲಿ ತೆರಿಗೆ ಕಡಿತ ವಿಷಯಗಳ ಬಗ್ಗೆ ಉಪನ್ಯಾಸ ಹಾಗೂ ವಿಚಾರ ವಿನಿಮಯ ಸಂವಾದ ಕಾರ್ಯಕ್ರಮವನ್ನು ನಿಯೋಜಿಸಿದ್ದು ಸಮಯೋಚಿತ.

ಸಹಕಾರ ಕ್ಷೇತ್ರದಲ್ಲಿ ಸಾಧನೆ ಅಪಾರವಾಗಿದೆ. ಈ ಸಾಧನೆಯ ಹಾದಿಯಲ್ಲಿ ಜೊತೆಗೆ ಸವಾಲುಗಳನ್ನು ಎದುರಿಸುವುದು ಸಹಜ. ಸವಾಲುಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಈ ಕ್ಷೇತ್ರಕ್ಕೆ ಸಂಬಂಧಿಸಿದ ಸಮಗ್ರ ಕಾನೂನುಗಳ ಪರಿಚಯ ಸಹಕಾರ ಕ್ಷೇತ್ರದ ನಾಯಕರುಗಳಿಗೆ ಹಾಗೂ ಸಿಬ್ಬಂದಿಗಳಿಗೆ ಅವಶ್ಯಕವಾಗುತ್ತದೆ. ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳು ಪಾರದರ್ಶಕವಾಗಿ ಹಾಗೂ ವೃತ್ತಿಪರತೆಯಿಂದ ನಡೆಯಲು ಸಮಗ್ರ ಕಾನೂನುಗಳ ಮಾಹಿತಿ ಪಡೆದುಕೊಳ್ಳುವ ಪ್ರಯತ್ನ ಸಹಕಾ–ರಿಗಳದ್ದಾಗಬೇಕು.

ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿ ಆಯೋಜಿಸಿದ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಅಧಿನಿಯಮ 2019 ಹಾಗೂ 1 ಕೋಟಿ ನಗದು ಆದಾಯ ತೆರಿಗೆ ಕಾಯ್ದೆ ಮೂಲದಲ್ಲಿ ತೆರಿಗೆ ಕಡಿತ ವಿಷಯಗಳ ಬಗ್ಗೆ ಚಾರ್ಟರ್ಡ್ ಅಕೌಂಟಂಟ್ ಶ್ರೀ ಬಿ.ವಿ.ರವೀಂದ್ರನಾಥ ಹಾಗೂ ಚಾರ್ಟರ್ಡ್ ಅಕೌಂಟಂಟ್ ಶ್ರೀ ಮಧುಕರ ಹೆಗಡೆಯವರು ಕೆಲವು ಕಾನೂನು ವಿಷಯಗಳ ಬಗ್ಗೆ ಹಿರಿಯ ವಕೀಲ ಶ್ರೀ ಮಲ್ಲಾರೆಡ್ಡಿಯವರು ಬಹಳ ವಿವರವಾಗಿ ಮಾಹಿತಿ ನೀಡಿರುವುದು ಸಹಕಾರಿಗಳ ಕಾರ್ಯದಕ್ಷತೆ ಅಭಿವೃದ್ಧಿಗೆ ಪೂರಕ ಎಂದು ವಿಶ್ಲೇಷಿಸಬಹುದು.

ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸುವ ಅನೇಕ ಕಾನೂನುಗಳಿವೆ. ಸಹಕಾರಿಗಳು ಈ ಎಲ್ಲ ಕಾನೂನುಗಳ ಬಗ್ಗೆ ಮಾಹಿತಿ ಪಡೆದು ಕಾರ್ಯನಿರ್ವಹಿಸುವುದು ಕಷ್ಟವೆನಿಸಬಹುದು ಆದಾಗ್ಯೂ ಅತ್ಯಂತ ಅವಶ್ಯಕವೆನಿಸಿರುವ ಆದಾಯ ತೆರಿಗೆ, ಜೆ.ಎಸ್.ಟಿ, ಅನಿಯಂತ್ರಿತ ಠೇವಣಿಯೋಜನೆಗಳ ನಿಷೇಧಿಸುವಿಕೆ ಕಾಯ್ದೆ, ವೃತ್ತಿ ತೆರಿಗೆ ಕಾಯ್ದೆ, ಸಹಕಾರಿ ಸಂಘಗಳ ಕಾಯ್ದೆ, ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ನಿಯಮಗಳ ಬಗ್ಗೆ ಮಾಹಿತಿ ಹೊಂದುವುದು ಅತ್ಯವಶ್ಯಕ. ಕಾಯ್ದೆ ಪುಸ್ತಕಗಳನ್ನು ಸಹಕಾರಿ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಇಡುವುದರ ಜೊತೆಗೆ, ಸಂಯುಕ್ತ ಸಹಕಾರಿಯು ಏರ್ಪಡಿಸುವ ಕಾರ್ಯಾಗಾರಗಳಲ್ಲಿ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಾಹಿತಿ ಸಂಗ್ರಹಿಸುವ ಕಾರ್ಯವನ್ನು ಸಹಕಾರಿಗಳು ನಿರಂತರವಾಗಿ ಮಾಡುವುದು ಅವಶ್ಯಕ. ಅವಕಾಶವಿರುವಾಗಲೆಲ್ಲ ಕಾನೂನು ತಜ್ಞರನ್ನು ಆಹ್ವಾನಿಸಿ ತಮ್ಮ ತಮ್ಮ ಸಹಕಾರಿಯಲ್ಲಿ ವಿಚಾರ ವಿನಿಮಯ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರಿಂದ ಕಾನೂನು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಕ್ಷಣ ಕ್ಷಣ ಶಿಕ್ಷಣ ಎಂಬ ಸಂದೇಶವನ್ನು ಸಹಕಾರಗಳು ಪಾಲಿಸುವುದರಿಂದ ಸಂಸ್ಥೆಗಳ ಕಾರ್ಯದಕ್ಷತೆ ಬೆಳೆಯುತ್ತದೆ. ಸಹಕಾರಿಗಳಲ್ಲಿ ವಿಶ್ವಾಸಾರ್ಹತೆ ಹೆಚ್ಚಿ ಸಹಕಾರಿಯ ಪ್ರಗತಿಗೆ ಪೂರಕವಾಗುತ್ತದೆ.

# "ಭಗವಂತನ ಸೃಷ್ಠಿಯಲ್ಲಿ ವ್ಯರ್ಥವೆಂಬುದಿಲ್ಲ. ಭರವಸೆಯೊಂದಿದ್ದರೆ ಸರ್ವವೂ ಸುಖಾಂತ್ಯ"



## ಜ್ಞಾನ ಜ್ಯೋತಿ

ಎಂ .ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

ಸಮಾಜದತ್ತ ಕಣ್ಣು ಹಾಯಿಸಿದಾಗ ವೈವಿದ್ಯ ರೀತಿಯ ಮನೋಭಾವದ ಜನರನ್ನು ನಾವು ನೋಡುತ್ತೇವೆ, ಕೆಲವರು ಸುರ ದ್ರೂಪಿಗಳು ಮತ್ತೆ ಕೆಲವರು ವಿಕಾರಿಗಳು, ಮತ್ತೆ ಕೆಲವರು ಜಿಪುಣರು ಇನ್ನು ಕೆಲವರು ದುಂದು ವೆಚ್ಚದವರು. ದುಂದು ವೆಚ್ಚ ಮಾಡುವವನು ಜಿಪುಣನನ್ನು ಜರಿಯುತ್ತಾನೆ, ಯಾವ ಪುರುಷಾರ್ಥಕ್ಕಾಗಿ ಅಷ್ಟೋಂದು ಉಳಿಸಬೇಕೆಂಬ ಪ್ರಶ್ನೆ ಮಾಡುತ್ತಾನೆ. ಅದೇ ಜಿಪುಣನಾದವನು ಉದಾರಿಯ ವೆಚ್ಚವನ್ನು ಕೆಲವು ಸಾರಿ ಸಾಧಾರಣ, ಅನವಶ್ಯಕವಾದ ಖರ್ಚಗಳೆಂದು ಉಪೇಕ್ಷಿಸುತ್ತಾನೆ. ಅಂತಹದೊಂದು ಸಂದರ್ಭದಲ್ಲಿ ನಮ್ಮ ಜನರು ದೇವರು ಮಾಡಿರುವ ಸೃಷ್ಠಿ ಕಾರ್ಯವನ್ನು ನೊಡಿ ಇಷ್ಟೊಂದು ಕ್ರಿಮಿ ಕೀಟಕಗಳು, ಪ್ರಾಣಿ ಪಕ್ಷಿಗಳು, ಕ್ರೂರ ಪ್ರಾಣಿಗಳು ಏಕೆ ಬೇಕಿದ್ದವು, ದಾರಿಯಲ್ಲಿ ಹೋಗುವಾಗ ಕೆಲವೊಂದು ಮರಗಳ ಕೆಳಗೆ ಬಿದ್ದಿರುವ ಹೂವು ರಾಶಿಯನ್ನು ನೋಡಿದಾಗಲೂ ಹೀಗೆಯೇ ತಾತ್ಸಾರಪೂರ್ವಕ ಮಾತುಗಳನ್ನು ಹೇಳುವ ಜನರಿದ್ದಾರೆ. ಇಂಥವರನ್ನು ಗಮನಿಸಿಯೇ ಡಿ.ವಿ.ಜಿ.ಯವರು ಈ ಮುಂದಿನ ಪದ್ಯವನ್ನು ಬರೆದಿದ್ದಾರೆ.

ವ್ಯರ್ಥವೆಂದನಿಪುದು ಸೃಷ್ಠಿಯ ಬಹುಭಾಗ
ಅರ್ಥವೇಂ ಕ್ರಿಮಿಕೀಟ ಕೋಟಿ ರಚನೆಯಲಿ
ಕರ್ತನಾಂಲೋಚಿಸದ ದುಂದಿನವನೆಂಬ ನುಡಿ
ಯರ್ಥ ದೃಷ್ಠಿಯ ವಿವರ । ಮಂಕುತಿಮ್ಮ।

ಆ ಸೃಷ್ಠಿ ಕರ್ತನು ಈ ಸೃಷ್ಠಿಯನ್ನು ರಚಿಸಿದಾಗ ತನ್ನ ಶಕ್ತಿಯನ್ನು ದುರ್ವ್ಯಯ ಮಾಡಿದ್ದಾನೆಂಬ ಆರೋಪವನ್ನು ತಿಳುವಳಿಕೆ ಇಲ್ಲದವರ ಅರ್ದಂಬರ್ದ ತಿಳುವಳಿಕೆಯುಳ್ಳ ಜನಗಳ ಜ್ಞಾನವೆನ್ನುತ್ತಾರೆ. ಅತಳ, ವಿತಳ, ಸುತಲ, ಪಾತಾಳಗಳನ್ನು ಸೃಷ್ಠಿಸಿದ ಅಪ್ರಮೇಯ ಸೃಷ್ಠಿ ಸ್ಥಿತಿಲಯ ಕರ್ತನು ತುಂಬಾ ಯೋಚನೆ ಮಾಡಿ ಎಲ್ಲ ಜೀವಿಗಳಿಗೂ ಅವಶ್ಯಕವಾದಂತೆ ಸೃಷ್ಠಿಸಿರುವ ಔಧಾರ್ಯ ಸರ್ವೋತ್ತಮನದ್ದು. ಆದರೆ ಏನೂ ಅರಿಯದ ನಾವುಗಳು ದೇವರಿಗೆ ಬೇರೆ ಕೆಲಸವಿಲ್ಲವೆಂದು ಕಾಣುತ್ತೆ, ಬೇಕಿಲ್ಲವಾದುದ್ದನ್ನು ಬಹಳ ಸೃಷ್ಠಿಸಿದ್ದಾನೆ ಬೇಕಾದಕ್ಕಿಂತ ಬೇಡವಾದ್ದುದನ್ನು ಬಹಳವಾಗಿ ಸೃಷ್ಠಿಸಿದ್ದಾನೆಂದು ಜ್ಞಾನಿಗಳಂತೆ ವಿಮರ್ಶೆ ಮಾಡುತ್ತೇವೆ.

ವಿಮಾನ ಪ್ರಾಯಾಣದಲ್ಲಿ ಓರ್ವ ಹಿರಿಯರು ತನ್ನ ಪಕ್ಕದ ಬಾಲಕನ ಮುಗ್ದತೆಯನ್ನು ಗಮನಿಸಿ ಆ ಹುಡುಗನು ಭಗದ್ಗೀತೆಯ ಓದಿನಲ್ಲಿ ತಲ್ಲೀನನಾಗಿರುವುದನ್ನು ಕಂಡು ನಂತರ ಗಗನ ಸಖಿಯರು ತಂದುಕೊಟ್ಟ ತಿಂಡಿ ತಿನಿಸುಗಳನ್ನು ತಿಂದು ಮತ್ತೆ ತಕ್ಷಣವೇ ಓದಿನಲ್ಲಿ ಮಗ್ನನಾಗುತ್ತಾನೆ. ಪ್ರಯಾಣ ಮುಂದುವರೆಯುತ್ತಿದ್ದಂತೆ, ಪ್ರಕಟಣೆಯೊಂದು ಬಂದು ವಿಮಾನ ಸ್ವಲ್ಪ ಹವಾಮಾನ ವ್ಯತ್ಯಯದಿಂದ ವಿಮಾನ ದಿಕ್ಕು ತಪ್ಪುತ್ತಿದೆ ಪ್ರಕಾಣಿಕರು ಸೀಟ್ ಬೆಲ್ಟ್ ಹಾಕಿಕೊಳ್ಳಿ ಎಂದು ತಿಳಿಸಿದರೂ ಬಹಳಷ್ಟು ಜನ  ಸೂಚನೆಗೆ ಬೆಲೆಕೊಡಲಿಲ್ಲ. ಸ್ವಲ್ಪ ಸಮಯದಲ್ಲಿಯೇ ಮತ್ತೊಂದು ಪ್ರಕಟಣೆ ಬಂದು ವಿಮಾನ ದುರಂತದತ್ತ ಸಾಗುತ್ತಿದೆ ನಿಮ್ಮ ನಿಮ್ಮ ಮನದಲ್ಲಿ ನಿಮ್ಮ ದೇವರನ್ನು ಪ್ರಾರ್ಥಿಸಿ ಒಳ್ಳೆಯದಾಗಬಹುದೆಂದು ಎಚ್ಚೆರಿಸುತ್ತಾರೆ, ಆಗ ಎಲ್ಲರ ಮನದಲ್ಲಿ ತವಕ, ಭಯ, ತಾಂಡವವಾಡುತ್ತಿದ್ದರೂ ಆ ಹುಡುಗ ಮಾತ್ರ ಸ್ಥಿತ ಪ್ರಜ್ಞನಂತೆ ಇದ್ದ ಮತ್ತೆ ಸ್ವಲ್ಪ ಹೊತ್ತಿನಲ್ಲಿ ವಿಮಾನ ಸುಖಕರವಾಗಿ ನಿಲ್ದಾಣದಲ್ಲಿ ಇಳಿಯಿತು ಆಗ ಎಲ್ಲರ ಮನಸ್ಸಿನಲ್ಲಿ ಸಂತಸ. ಹಿಗ್ಗು ಹಿರಿಯರು ತಮ್ಮ ಪಕ್ಕದಲ್ಲಿದ್ದ ಹುಡುಗನ್ನು ಗಮನಿಸಿ ಮೆಚ್ಚುಗೆಯಿಂದ ಕೇಳಿದರು, "ಏನು ನೀನು ತುಸು ಮಟ್ಟಿಗೆಯಾದರೂ ಗಾಬರಿಯಾಗಲ್ಲಿಲ್ಲ ಏಕೆ" ಎಂದುದಕ್ಕೆ ,ಅವನು ನನಗೇಕೆ ಗಾಬರಿ  ಚಾಲಕನು ನನ್ನ ತಂದೆ, ನನ್ನ ತಂದೆ ಸಾಮಥ್ಯ, ಶಕ್ತಿಗಳು ನನಗೆ ಗೊತ್ತಿದೆ ಎನ್ನುತ್ತಾನೆ, ಹಿರಿಯರು ಮುಂದುವರೆದು ಏನು ಚಾಲಕರು ನಿಮ್ಮ ತಂದಯೆ ಎಂದು ಕೇಳಿದ್ದಕ್ಕೆ , ಹೌದು ವಿಶ್ವದ ತಂದೆ ಭಗವಂತ ನನ್ನ ತಂದೆ, ನಮ್ಮ ನಿಮ್ಮೆಲರ ತಂದೆ, ಎಲ್ಲರನೂ ಉಳಿಸುವವನೂ, ಅಳಿಸುವವನೂ ಅವನೇ, ಆದರೆ ಅವನ್ನಲ್ಲಿ ಇರಬೇಕಾದ ಭರವಸೆಯೊಂದಿದ್ದರೆ ಸರ್ವವೂ ಸುಖಾಂತ್ಯವೆನಿಸುತ್ತದೆ.

ಇತ್ತೀಚಿನ ವೈಜ್ಞಾನಿಕ ಸಂಶೋಧನೆಗಳಿಂದ ಈ ಮನುಕುಲದ ಸಂರಕ್ಷಣೆಗೆ ಈ ಕ್ರಿಮಿಕೀಟಗಳು ಅವಶ್ಯಕ ಎನ್ನುವ ಅಂಶ ಪ್ರಕಟವಾಗುತ್ತಿರುವ ಸಂಶೋಧನಾ ವರದಿಗಳಿಂದ ತಿಳಿದು ಬರುತ್ತಿವೆ. ಭಗವಂತನು ಅಪ್ರಮೇಯ ಸ್ವಪ್ರಕಾಶ, ಸರ್ವಾಂತರ್ಯಾಮಿ ಸರ್ವಶಕ್ತ, ಸರ್ವಜ್ಞ, ಎಂಬುದನ್ನು ಅರಿಯದೇ ಅಲ್ಪಮತಿಗಳು ಮಾತಾಡುತ್ತೇವೆ ಇದನ್ನು ಬಿಟ್ಟು ಭಗವಂತನನ್ನು ಸರ್ವಜ್ಞ ಎಂಬುದನ್ನ ಅರಿಯಿರಿ ಎಂಬುದೇ ಈ ಪದ್ಯದ ಸಾರಾಂಶ.

## ಸೌಹಾರ್ದ ಸಹಕಾರಿಗಳ ಗಮನಕ್ಕೆ

### ಸೌಹಾರ್ದ ಸಹಕಾರಿಗಳ ಸಾಮಾನ್ಯ ಸಭೆಯ ವರದಿ ಹಾಗೂ ಛಾಯಾ ಚಿತ್ರಗಳನ್ನು ಹಾಗೂ ನೆರೆ ಸಂತ್ರಸ್ತರ ಪರಿಹಾರ ನಿಧಿಗೆ ಕೊಡುಗೆ ನೀಡಿದ ಛಾಯಾ ಚಿತ್ರಗಳನ್ನು ಡಿಜಿಟಲ್ ಸ್ವಾಭಿಮಾನಿ ಸಹಕಾರಿ (e-magazine) ಪತ್ರಿಕೆಯಲ್ಲಿ ಪ್ರಕಟಿಸಲು ಕ್ರಮ

ರಾಜ್ಯದ ಹಲವಾರು ಸೌಹಾರ್ದ ಸಹಕಾರಿಗಳು ತಮ್ಮ ಸಾಮಾನ್ಯ ಸಭೆಯ ಸುದ್ದಿ ಹಾಗೂ ಛಾಯಾ ಚಿತ್ರಗಳನ್ನು ಹಾಗೂ ನೆರೆ ಸಂತ್ರಸ್ತರ ಪರಿಹಾರ ನಿಧಿಗೆ ವಂತಿಗೆ ನೀಡಿದ ಛಾಯಚಿತ್ರಗಳನ್ನು ರಾಷ್ಟೀಯ ಹಬ್ಬಗಳ ಆಚರಣೆ, ವಿವಿಧ ಕಾರ್ಯಚಟುವಟಿಕೆಗಳ ಮಾಹಿತಿಗಳನ್ನು ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು ಕಳುಹಿಸುತ್ತಿರುವುದು ಸಂತೋಷದ ವಿಷಯ. ಸ್ವಾಭಿಮಾನಿ ಸಹಕಾರಿ ಪತ್ರಿಕೆಯಲ್ಲಿ ಇವುಗಳನ್ನು ಪ್ರಕಟಿಸುವುದರಿಂದ ಸ್ವಾಭಿಮಾನಿ ಪತ್ರಿಕೆಯು ಪತ್ರಿಕೆಯಾಗಿ ಉಳಿಯದೆ ಕೇವಲ ಪೋಟೋಗಳ ಸಂಗ್ರಹ ಮಾಹಿತಿ ಪುಸ್ತಕ ಆಗುತ್ತದೆ ಎಂಬ ಮಾತು ಅನೇಕ ಸಹಕಾರಿಗಳು ಬೇರೆ ಬೇರೆ ಸಂದರ್ಭಗಳಲ್ಲಿ ತಿಳಿಸಿರುತ್ತಾರೆ. ಹೀಗಾಗಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ತಾವು ಕಳುಹಿಸುತ್ತಿರುವ ವಾರ್ಷಿಕ ಮಹಾಸಭೆಯ ಛಾಯಾಚಿತ್ರಗಳನ್ನು ಸಂಯುಕ್ತ ಸಹಕಾರಿಯ **www.Souharda.coop** ವೆಬ್‌ಸೈಟ್‌ನಲ್ಲಿ ಮತ್ತು **whatsapp** ಮೂಲಕ ಡಿಜಿಟಲ್ ಸ್ವಾಭಿಮಾನಿ ಪತ್ರಿಕೆಯಲ್ಲಿ (e-magazine) ಸಂಪಾದಕರು ಸಂಪೂರ್ಣವಾಗಿ ಪ್ರಕಟಿಸಲು ಕ್ರಮವಿಡಲಾಗುವುದು. ಸೌಹಾರ್ದ ಸಹಕಾರಿಗಳು ಸಹಕರಿಸಲು ಕೋರಿದೆ.

# ಸಂಯುಕ್ತ ಸಹಕಾರಿಯ 18ನೇ ವಾರ್ಷಿಕ ಸಾಮಾನ್ಯ ಸಭೆ





**ಬೆಂಗಳೂರು :** ಸಂಯುಕ್ತ ಸಹಕಾರಿಯ 18ನೇ ವಾರ್ಷಿಕ ಸಾಮಾನ್ಯ ಸಭೆ ದಿನಾಂಕ ಸೆಪ್ಟಂಬರ್ 18 ರಂದು ಬೆಂಗಳೂರಿನ ವಿಜಯನಗರದ ಶ್ರೀ ಬಸವೇಶ್ವರ ಸುಜ್ಞಾನ ಮಂಟಪದಲ್ಲಿ ಬೆಳಿಗ್ಗೆ 10:30 ಕ್ಕೆ ಸರಿಯಾಗಿ ಶ್ರೀ ರಾಮಾನುಜಂ ಹಾಗೂ ತಂಡದವರಿಂದ ನಾಡಗೀತೆಯೊಂದಿಗೆ ಪ್ರಾರಂಭವಾಯಿತು.

ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳನ್ನು, ಅತಿಥಿಗಣ್ಯರನ್ನು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರನ್ನು ಪರಿಚಯಿಸಿ ಸ್ವಾಗತಿಸಿದರು.

## ಅಭಿನಂದನೆ





ವಾರ್ಷಿಕ ಸಾಮಾನ್ಯ ಸಭೆಯ ವಿಷಯಗಳ ಪ್ರಾರಂಭದ ಪೂರ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಶ್ರೀಮತಿ ಶಶಿಕಲಾ ಜೊಲ್ಲೆ ಮಾನ್ಯ ಸಚಿವರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರಕಾರ ಹಾಗೂ ವಿಧಾನ ಪರಿಷತ್ ಸದಸ್ಯರಾದ ಶ್ರೀ ವೇಣುಗೋಪಾಲ, ಅಧ್ಯಕ್ಷರು, ಯಶಸ್ವಿನಿ ಸೌಹಾರ್ದ ಸಹಕಾರಿ ನಿ., ಇವರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಶಾಸಕರುಗಳಾದ ಶ್ರೀ ಅರಗ ಜ್ಞಾನೇಂದ್ರ, ಶ್ರೀ ಬಸನಗೌಡ.ಪಾಟೀಲ್ ಯತ್ನಾಳ, ಮಾಜಿ ಶಾಸಕರುಗಳಾದ ಶ್ರೀ ಬಿ.ಆರ್.ಪಾಟೀಲ, ಶ್ರೀ ನಂಜಯ್ಯನ ಮಠ, ಶ್ರೀಮತಿ ಶಕುಂತಲ ಶೆಟ್ಟಿಯವರುಗಳು ಕ್ಯಾಂಪ್ಕೋ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶ್ಚಂದ್ರ ಇವರುಗಳು ಉಪಸ್ಥಿತರಿದ್ದರು.



## ಸೌಹಾರ್ದ ಸಹಕಾರ ಕಾಯ್ದೆ ತಿದ್ದುಪಡಿ ಕ್ರಮಕ್ಕೆ ಪೂರ್ಣ ಸಹಕಾರ - ಶಶಿಕಲಾ ಜೊಲ್ಲೆ.

ಸೌಹಾರ್ದ ಸಹಕಾರಿ ಕ್ಷೇತ್ರ ಅಭಿವೃದ್ಧಿಗೆ ಪೂರಕವಾದ ಸೌಹಾರ್ದ ಸಹಕಾರಿ ಕಾಯ್ದೆಗೆ ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿಗಳಿಂದ ಕಳೆದ ಹಲವು ದಿನಗಳಿಂದ ಒತ್ತಾಯ ಇದೆ. ಈ ತಿದ್ದುಪಡಿ ಕಾರ್ಯದಲ್ಲಿ ಸರಕಾರ ಶೀಘ್ರವಾಗಿ ಕ್ರಮವಿಡುವಂತೆ ಒತ್ತಾಯಿಸುವ ಕಾರ್ಯವನ್ನು ಮಾಡುತ್ತೇನೆ. ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸರಕಾರ ಬದ್ಧವಾಗಿದೆ ಎಂದು ತಿಳಿಸಿದರು.

## ಸೌಹಾರ್ದ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತೀವೆ. - ಶ್ರೀ ವೇಣುಗೋಪಾಲ



ನಂತರ ಶ್ರೀ ವೇಣುಗೋಪಾಲರವರು ಮಾತನಾಡಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತೀವೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಸಮಾಜಮುಖಿಯಾಗಿ ದುರ್ಬಲರ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಪ್ರೇರಣ ಶಕ್ತಿಯಾಗಿ ಕಾರ್ಯನಿರ್ವಹಿಸಬೇಕು ಎಂದರು. ಇದಕ್ಕೆ ಪೂರಕವಾಗಿ ರಾಜ್ಯ ಸರಕಾರ ಸೌಹಾರ್ದ ಸಹಕಾರಿ ಕಾಯ್ದೆಯನ್ನು ತಿದ್ದುಪಡಿಮಾಡಿಕೊಡಬೇಕೆಂದು ಸರಕಾರವನ್ನು ಒತ್ತಾಯಿಸಿದರು.

## ಉತ್ತಮ ಸೌಹಾರ್ದ ಸಹಕಾರಿಗಳಿಗೆ ಹಾಗೂ ಶ್ರೇಷ್ಠ ಸಹಕಾರಿಗಳಿಗೆ ಸನ್ಮಾನ



ಇದೇ ಸಂದರ್ಭದಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಸಹ ರಾಜ್ಯದ 2018–19ನೇ ಸಾಲಿನಲ್ಲಿ 5 ಉತ್ತಮ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರನ್ನು ಅಭಿನಂದಿಸಲಾಯಿತು. ಹಾಗೂ 5 ಶ್ರೇಷ್ಠ ಸಹಕಾರಿಗಳನ್ನು ಸನ್ಮಾನಿಸಲಾಯಿತು.

### ಸನ್ಮಾನಿತರಾದ ಶ್ರೇಷ್ಠ ಸಹಕಾರಿಗಳು

- **ಡಾ. ಆರ್. ಬಿ. ಪಾಟೀಲ, ಮಾನ್ಯ ಅಧ್ಯಕ್ಷರು,** ವೀರರಾಣಿ ಮಲ್ಲಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳವಾಡಿ,
- **ಶ್ರೀ ಜಿ.ಜಿ.ಶಂಕರ, ಅಧ್ಯಕ್ಷರು,** ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ನಿ., ಹೊನ್ನಾವರ
- **ಶ್ರೀ ಉಮೇಶ ಶೆಟ್ಟಿ, ಅಧ್ಯಕ್ಷರು,** ಕರಾವಳಿ ಸೌಹಾರ್ದ ಪತ್ತಿನ ಸಹಕಾರಿ ನಿ.,
- **ಶ್ರೀ ದೇವೇಂದ್ರಕುಮಾರ ಸೋನಿ, ಅಧ್ಯಕ್ಷರು,** ಆರ್.ಡಿ.ಸೋನಿ. ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಹೊಸಪೇಟೆ
- **ಶ್ರೀ ಎಸ್.ಬಾಲಸುಬ್ರಹ್ಮಣ್ಯಂ ಅಧ್ಯಕ್ಷರು,** ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ

## ಸನ್ಮಾನಿತರಾದ ಉತ್ತಮ ಸೌಹಾರ್ದ ಸಹಕಾರಿಗಳು











- **ಶ್ರೀ ಶ್ರದ್ಧಾ ಪತ್ತಿನ ಸೌಹಾರ್ದ ಸಹಕಾರಿ ನಿ.,** – ನಂ. 1266, 67, ದಲಾಲ ಪೇಟ, ನಿಪ್ಪಾಣಿ, ಬೆಳಗಾವಿ – 591237
- **ಕೋಲ್ಹಾರ ಶ್ರೀ ಬಸವೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,** ಶಿವಾಜಿ ಸರ್ಕಲ್ ಹತ್ತಿರ, ಕೋಲ್ಹಾರ, ಬಸವನ ಬಾಗೇವಾಡಿ, ವಿಜಯಪುರ – 586210
- **ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,** – ಪುಣ್ಯಕೋಟಿ, ನಂ.1587, 3ನೇ ಮುಖ್ಯರಸ್ತೆ, ಚಂದ್ರ ಬಡಾವಣೆ, ಬೆಂಗಳೂರು–560040
- **ಕಲಬುರಗಿ ಸೌಹಾರ್ದ ಸಹಕಾರಿ ನಿ.,** – ಅಂಗಡಿ ಸಂಖ್ಯೆ 10–2/7 ಮತ್ತು 8, ಶಿವರಾಜ ಪಾಟೀಲ ಸಂಕೀರ್ಣ, ಸಂಗಮೇಶ್ವರ ನಗರ, ಕಲಬುರಗಿ - 585102
- **ಒಡಿಯೂರು ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,** – ಶ್ರೀ ಭಗವತಿ ಕಾಂಪ್ಲೆಕ್ಸ್, ಕಪಿತಾನಿಯೋ ಶಾಲೆಯ ಎದುರು,, ಪಂಪ್ ವೆಲ್, ದಕ್ಷಿಣ ಕನ್ನಡ – 575002

## ಅಧ್ಯಕ್ಷರ ಭಾಷಣ :



ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಭಾಷಣಮಾಡಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರ ಪ್ರಗತಿ 2018–19 ನೇ ಸಾಲಿನ ಶಾಸನ ಬದ್ಧ ಹಾಗೂ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳು, ಸಂಪರ್ಕ ಸಭೆಗಳು, ಪತ್ರಿಕಾಗೋಷ್ಠಿಗಳು, ಜಿಲ್ಲಾ ಸಂಪರ್ಕ ಕಚೇರಿಗಳು, ಆದಾಯ ತೆರಿಗೆ ವಿಷಯದಲ್ಲಿ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ವಿಚಾರಗಳಲ್ಲಿ ನಡೆಸುತ್ತಿರುವ ಕೆಲಸ ಕಾರ್ಯಗಳ ವಿವರಗಳು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ ಕಟ್ಟಡ, ಬೆಳಗಾವಿ ವಿಭಾಗೀಯ ಕಛೇರಿ ಕಟ್ಟಡದ ಪ್ರಗತಿಗಳ ವಿವರಗಳು ಕಲಬುರಗಿ ಹಾಗೂ ಮೈಸೂರಿನಲ್ಲಿ ಖರೀದಿಸಿರುವ ಹಾಗೂ ಖರೀದಿಸಲು ಕ್ರಮವಿಡುತ್ತಿರುವ ಬಗ್ಗೆ ಹಾಗೂ ಸೌಹಾರ್ದ ಸಹಕಾರಿಗಳ ಶ್ರೇಣೀಕರಣ ಹೀಗೆ ಎಲ್ಲ ವಿಷಯಗಳನ್ನು ಸಾಮಾನ್ಯ ಸಭೆಯ ಗಮನಕ್ಕೆ ತಂದು ಎಲ್ಲ ಕಾರ್ಯಗಳಿಗೆ ಪ್ರೋತ್ಸಾಹ ನೀಡುತ್ತಿರುವ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದರು.

ನಂತರದಲ್ಲಿ ಸಂಯುಕ್ತ ಸಹಕಾರಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ವಾರ್ಷಿಕ ಸಾಮಾನ್ಯ ಸಭೆಯ ವಿಷಯ ಪಟ್ಟಿಯಂತೆ ವಿಷಯಗಳ ಪ್ರಸ್ತಾವನೆ ಮಾಡಿದಾಗ ಸಭೆಯು ಅರ್ಥಪೂರ್ಣ ಚರ್ಚೆ ನಡೆಸಿ ಸರ್ವಾನುಮತದಿಂದ ಅನುಮೋದನೆ ನೀಡಿತು. ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಜಿ.ಎನ್.ಪಾಟೀಲರವರು ವಂದನಾರ್ಪಣೆ ಮಾಡಿದರು.

## ಕಾನೂನು ಅರಿವು ಸಂವಾದ ಕಾರ್ಯಕ್ರಮ.



ಮಧ್ಯಾಹ್ನ 3:00 ಘಂಟೆಗೆ ವಿವಿಧ ಕಾನೂನುಗಳ ಬಗ್ಗೆ ಅರಿವು ಮೂಡಿಸುವ ವಿಶೇಷವಾಗಿ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಅಧ್ಯಾದೇಶ 2019 ಹಾಗೂ ಆದಾಯ ತೆರಿಗೆ ಕಾಯ್ದೆ ಮೂಲದಲ್ಲಿ ತೆರಿಗೆ ಕಡತ ವಿಷಯಗಳ ಬಗ್ಗೆ ಚಾರ್ಟರ್ಡ ಅಕೌಂಟಂಟ್ ಶ್ರೀ ಬಿ.ವಿ.ರವೀಂದ್ರನಾಥ ಹಾಗೂ ಚಾರ್ಟರ್ಡ ಅಕೌಂಟಂಟ್ ಶ್ರೀ ಮಧುಕರ ಹೆಗಡೆಯವರಿಂದ ಹಾಗೂ ಕಾನೂನು ವಿಷಯಗಳ ಬಗ್ಗೆ ಹಿರಿಯ ವಕೀಲ ಶ್ರೀ ಮಲ್ಲಾರೆಡ್ಡಿಯವರಿಂದ ಮಾಹಿತಿ ನೀಡುವ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ವೇದಿಕೆಯಲ್ಲಿ ಚಾರ್ಟರ್ಡ ಅಕೌಂಟಂಟ ಶ್ರೀ ಎಸ್.ಜಿ.ಹೆಗಡೆ, ಶ್ರೀ ಉಮೇಶ ಶೆಟ್ಟಿ, ಶ್ರೀ ನಂಜನಗೌಡ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ನಿರ್ದೇಶಕರುಗಳಾದ ಶ್ರೀ ಗುರುನಾಥ ಜಾಂತಿಕರ, ಶ್ರೀ ಹೆಚ್.ರಾಜೀವ, ಶ್ರೀ ವಿಶ್ವನಾಥ ಹಿರೇಮಠ, ಬಿ. ರಾಜಶೇಖರ, ವೈಟಿ.ಪಾಟೀಲ್, ಶ್ರೀ ತಿಮ್ಮಯ್ಯ ಶೆಟ್ಟಿ, ಶ್ರೀ ಬಿ.ಎಸ್.ಗುಂಡೂರಾವ ಶ್ರೀ ಸಂಜೀವ ಮಹಾಜನ, ಶ್ರೀಮತಿ ಸರಸ್ವತಿ, ಶ್ರೀ ಶ್ರೀಧರ, ಮುಂತಾದವರು ಉಪಸ್ಥಿತರಿದ್ದು ಪ್ರತಿನಿಧಿಗಳ ಪ್ರಶ್ನೆಗಳಿಗೆ ಸ್ಪಂದಿಸಿದರು.

## ತಾಂತ್ರಿಕ ಮೇಳ




ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದ ಪ್ರತಿನಿಧಿಗಳಿಗೆ ವಿವಿಧ ರೀತಿಯ ತಂತ್ರಜ್ಞಾನಗಳ ಮಾಹಿತಿಗಾಗಿ ತಂತ್ರಜ್ಞಾನ ಮೇಳವನ್ನು ಏರ್ಪಡಿಸಲಾಗಿತ್ತು. 19 ಕಂಪನಿಗಳು ತಮ್ಮ ತಮ್ಮ ಕಂಪನಿಗಳು ಉತ್ಪಾದಿಸುವ ಅಥವಾ ಮಾರಾಟ ಮಾಡುವ ಸೌಹಾರ್ದ ಸಹಕಾರಿಗಳಿಗೆ ಉಪಯೋಗವಾಗಬಹುದಾದ ವಿವಿಧ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ವ್ಯವಸ್ಥೆಯನ್ನು ಮಾಡಲಾಗಿತ್ತು.

## ನೆರೆ ಸಂತ್ರಸ್ತರಿಗೆ ಸೌಹಾರ್ದ ಸಹಕಾರಿಗಳಿಂದ 50 ಲಕ್ಷ ರೂಗಳ ದೇಣಿಗೆ.

ನೆರೆ ಸಂತ್ರಸ್ತರ ಪರಿಹಾರ ನಿಧಿ ಸಂಗ್ರಹ ವಿಷಯದಲ್ಲಿ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಮಾತನಾಡಿ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಿಂದ ಕನಿಷ್ಟ 50.00 ಲಕ್ಷದಿಂದ 1 ಕೋಟಿ ರೂಗಳ ವರೆಗೆ ಸಂಗ್ರಹಿಸಿ ದೇಣಿಗೆ ನೀಡಲು ನಿರ್ಣಯಿಸಲಾಗಿದೆ. ರಾಜ್ಯದ ಸೌಹಾರ್ದ ಸಹಕಾರಿಗಳು ಉದಾರವಾಗಿ ದೇಣಿಗೆಯನ್ನು ಸಭೆಯಲ್ಲಿ ಭಾಗವಹಿಸಿದ ವಿವಿಧ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ತಮ್ಮ ಸಹಕಾರಿಗಳ ಪರವಾಗಿ ಚೆಕ್‌ಗಳನ್ನು ಮಾನ್ಯ ಅಧ್ಯಕ್ಷರಿಗೆ ಸಲ್ಲಿಸಿದರು.

## ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗೆ ಕೃತಜ್ಞತೆ.




ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ಎಲ್ಲ ಅಧಿಕೃತ ಕಾರ್ಯಕ್ರಮಗಳು ಮುಗಿದ ನಂತರ ಸಿಬ್ಬಂದಿ ಸಭೆ ನಡೆಸಿದ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಸಿಬ್ಬಂದಿಯವರುಗಳಿಗೆ ವಹಿಸಿದ ಎಲ್ಲ ವಿಭಾಗಗಳ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಸಾಮಾನ್ಯ ಸಭೆಯನ್ನು ಅಚ್ಚುಕಟ್ಟಾಗಿ ನಡೆಸಲು ಸಹಕರಿಸಿರುವುದಕ್ಕೆ ಸಿಬ್ಬಂದಿಯವರಿಗೆ ಕೃತಜ್ಞತೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ನಿರ್ದೇಶಕರುಗಳಾದ ಶ್ರೀ ಗುರುನಾಥ ಜಾಂತಿಕರ, ಶ್ರೀ ಬಿ.ಎಸ್.ಗುಂಡೂರಾವ, ಶ್ರೀ ಬಿ.ರಾಜಶೇಖರ, ಶ್ರೀ ಸಂಜೀವ ಮಹಾಜನ, ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲ್ ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿಗೆ ಲೆಕ್ಕಪರಿಶೋಧನಾ ವರದಿ ಸಲ್ಲಿಸಲು ಸೂಚನೆ

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿಗಳ ಲೆಕ್ಕಪರಿಶೋಧನಾ ವರದಿಯನ್ನು ಕಾಯ್ದೆ ಕಲಂ 33(10)ರಂತೆ, ರಿಜಿಸ್ಟ್ರಾರನಿಗೆ, ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಮತ್ತು ಸಂಯುಕ್ತ ಸಹಕಾರಿಗೆ ವರದಿಯನ್ನು ಸಲ್ಲಿಸಲು ಕ್ರಮವಿಡಲು ಸೂಚಿಸಿದೆ.

### ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಕಲಂ 34ರ ಅಡಿಯಲ್ಲಿ ಶಾಸನಬದ್ಧ ಕ್ರಮಗಳ ಪಾಲನೆಗೆ ಸೂಚನೆ

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಈ ಮೂಲಕ ಗಮನ ಹರಿಸಲು ಕೋರುವುದೇನೆಂದರೆ, ತಮ್ಮ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 25ನೇ ಸೆಪ್ಟೆಂಬರ್ 2019ರ ಒಳಗಾಗಿ ನಡೆಸಿರುವುದು ಸರಿಯಷ್ಟೆ.

ಕಾಯ್ದೆ ಕಲಂ 34ರ ಅಡಿಯಲ್ಲಿ ಪ್ರತಿಯೊಂದು ಸಹಕಾರಿಯು ಸಹಕಾರಿ ವರ್ಷ ಮುಗಿದ ಆರು ತಿಂಗಳೊಳಗಾಗಿ ವಿದ್ಯುಕ್ತ ವರದಿಯನ್ನು ಮತ್ತು ಮಾಹಿತಿಯನ್ನು ರಿಜಿಸ್ಟ್ರಾರ್‌ಗೆ ಹಾಗೂ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು ಆದ್ದರಿಂದ ಎಲ್ಲಾ ಸೌಹರ್ದ ಸಹಕಾರಿಗಳು ತಮ್ಮ ಈ ಕೆಳಕಂಡ ವಾರ್ಷಿಕ ಮಾಹಿತಿಗಳನ್ನು ರಿಜಿಸ್ಟ್ರಾರ್‌ಗೆ, ಸಂಯುಕ್ತ ಸಹಕಾರಿಗೆ, ಸಹಕಾರಿ ಬ್ಯಾಂಕುಗಳ ವಿಷಯದಲ್ಲಿ ಆರ್.ಬಿ.ಐ.ಗೆ ಕಳುಹಿಸಲು ಕ್ರಮವಿಡುವುದು.

**ಎ. ಹಿಂದಿನ ಸಹಕಾರಿ ವರ್ಷದ ಕಾರ್ಯಚಟುವಟಿಕೆಗಳ ವಾರ್ಷಿಕ ವರದಿ ಮತ್ತು ಮುಂಬರುವ ಸಹಕಾರಿ ವರ್ಷದ ಬಗ್ಗೆ ಕಾರ್ಯಕ್ರಮ.**

**ಬಿ. ಲೆಕ್ಕ ಪತ್ರಗಳ ಲೆಕ್ಕಪರಿಶೋಧಿತ(ಆರ್ಥಿಕ ತಃಖ್ತೆಗಳು)**

**ಸಿ. ಸಾಮಾನ್ಯ ನಿಕಾಯವು ಅನುಮೋದಿಸಿದಂತೆ, ಹೆಚ್ಚುವರಿಯನ್ನು ವಿಲೆಮಾಡುವ ಬಗ್ಗೆ ಯೋಜನೆ.**

**ಡಿ. ನಿರ್ದೇಶಕರುಗಳ ಪಟ್ಟಿ ಹಾಗೂ ಅವರ ಪದಾವಧಿ.**

**ಇ. ಸಹಕಾರಿಯ ಉಪವಿಧಗಳ ತಿದ್ದುಪಡಿಗಳ ಪಟ್ಟಿ ಮತ್ತು**

**ಎಫ್. ಸಾಮಾನ್ಯ ನಿಕಾಯದ ಸಭೆಯನ್ನು ಮತ್ತು ಚುನಾವಣೆಗಳೇನಾದರೂ ಇದ್ದಲ್ಲಿ ಅವುಗಳನ್ನು ನಡೆಸಿ ದಿನಾಂಕದ ಬಗ್ಗೆ ಘೋಷಣೆ**

**ಜಿ. ಈ ಅಧಿನಿಯಮದ ಉಪನಿಬಂಧಕರುಗಳಡಿ ರಿಜಿಸ್ಟ್ರಾರನು ಹಾಗೂ ಸಂಯುಕ್ತ ಸಹಕಾರಿಯು ಅಪೇಕ್ಷಿಸುವ ಇತರೆ ಯಾವುದೇ ಮಾಹಿತಿ.**

# ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ 3ನೇ ವಾರ್ಷಿಕ ಮಹಾ ಸಭೆ

## ಸಹಕಾರ ಕ್ಷೇತ್ರದ ಸಮಗ್ರ ಬೆಳವಣಿಗೆಯನ್ನು ನೀಡಲಿರುವ ಸಹಕಾರಿ ವೆಬ್ ಟಿ.ವಿ. ಚಾನಲ್ ಪ್ರಾರಂಭಕ್ಕೆ ಚಾಲನೆ ನೀಡಿದ ಡಾ. ಎಮ್.ಎನ್. ರಾಜೇಂದ್ರಕುಮಾರ್



**ಬೆಂಗಳೂರು :** ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ 3ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 19ನೇ ಸೆಪ್ಟಂಬರ್ 2019ರಂದು ಸುದ್ದಿ ಮಾಧ್ಯಮ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರ ಮಾರಾಟ ಮಹಾಮಹಾಮಂಡಳದ ಅಧ್ಯಕ್ಷರಾದ ಹಾಗೂ ಸುದ್ದಿ ಮಾಧ್ಯಮ ಮಹಾಮಂಡಳದ ನಿರ್ದೇಶಕರಾದ ಡಾ ಎಮ್.ಎನ್.ರಾಜೇಂದ್ರಕುಮಾರರವರು ಸುದ್ದಿ ಮಾಧ್ಯಮ ಮಹಾಮಂಡಳದ ಮಹಾ ಪ್ರೋತ್ಸಾಹಕರಾದ ಈ ಬಗ್ಗೆ ಮಹಾತ್ವಾಕಾಂಕ್ಷೆಯನ್ನು ಹೊಂದಿರುವ ಮಾಜಿ ಸಹಕಾರ ಸಚಿವರಾದ ಶ್ರೀ ಎಸ್.ಎಸ್.ಪಾಟೀಲರವರು ದೀಪ ಬೆಳಗಿಸುವುದರ ಮೂಲಕ ವಾರ್ಷಿಕ ಮಹಾಸಭೆಗೆ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಸಹಕಾರಿ ವೆಬ್ ಟಿ.ವಿ. ಚಾನಲ್ ಅನಾವರಣಗೊಳಿಸಲಾಯಿತು.

### ಸಹಕಾರ ಕ್ಷೇತ್ರದಲ್ಲಿ ಮಹತ್ವದ ಸಾಧನೆ - ಡಾ. ರಾಜೇಂದ್ರಕುಮಾರ

ಸಹಕಾರ ಕ್ಷೇತ್ರದ ಆರೋಗ್ಯಕರ ಬೆಳವಣಿಗೆ ಇದೊಂದು ಮಹತ್ವದ ಕಾರ್ಯವನ್ನು ಮಾನ್ಯ ಶ್ರೀ ಎಸ್.ಎಸ್.ಪಾಟೀಲ ಇವರ ನೇತೃತ್ವದಲ್ಲಿ ಹಮ್ಮಿಕೊಂಡಿರುವುದು ಶ್ಲಾಘನೀಯ. ಶ್ರೀ ಎಸ್.ಎಸ್.ಪಾಟೀಲರವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ರಾಜ್ಯದ ಎಲ್ಲ ಸಹಕಾರಿ ಸಂಸ್ಥೆಗಳು ಈ ಸುದ್ದಿಮಹಾಮಂಡಳದ ಶೇರು ಖರೀದಿಸುವುದುರ ಮೂಲಕ ಈ ಪ್ರಯತ್ನಕ್ಕೆ ಸಹಕರಿಸಿದಲ್ಲಿ ಬರುವ ವರ್ಷದೊಳಗಾಗಿ ಸ್ಯಾಟಲೈಟ್ ಸಹಕಾರಿ ಟಿ.ವಿ.ಚಾನೆಲ್ ಪ್ರಾರಂಭಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಎಲ್ಲ ಸಹಕಾರಿ ಸಂಸ್ಥೆಗಳು ಸುದ್ದಿಮಹಾಮಂಡಳದ ಷೇರು ಖರೀದಿಸಲು ಮನವಿ ಮಾಡಿದರು.

## ಸಹಕಾರ ಕ್ಷೇತ್ರದ ಸಾಧನೆಗಳನ್ನು ಹಾಗೂ ಸಕಾರಾತ್ಮಕ ಪ್ರಚಾರ ನೀಡುವುದಕ್ಕಾಗಿ ಸಹಕಾರಿ ಟಿ.ವಿ. ಚಾನೆಲ್ ಅಗತ್ಯ. - ಎಸ್.ಎಸ್.ಪಾಟೀಲ್




ರಾಜ್ಯದ ಹಾಗೂ ದೇಶದ ಸಹಕಾರ ಚಳುವಳಿ ಗಣನೀಯ ಸಾಧನೆಗಳನ್ನು ಮಾಡಿದೆ. ಈ ದೇಶದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಸಹಕಾರ ಕ್ಷೇತ್ರ ಮಹತ್ತರ ಕಾಣಿಕೆ ನೀಡಿದೆ. ಈ ಕ್ಷೇತ್ರದ ಸಾಧನೆಗಳನ್ನು ಸಾರ್ವಜನಿಕರಿಗೆ, ಸಹಕಾರಿಗಳಿಗೆ ಮನದಟ್ಟಾಗುವಂತೆ ಪ್ರಚಾರ ನೀಡುವುದು ಸುದ್ದಿ ಮಾಧ್ಯಮ ಮಹಾಮಂಡಳದ ಮಹಾತ್ವಾಕಾಂಕ್ಷೆಯಾಗಿದೆ. ಈ ಮಹತ್ವದ ಪ್ರಯತ್ನಕ್ಕೆ ರಾಜ್ಯದ ಎಲ್ಲ ಸಹಕಾರಿ ಸಂಸ್ಥೆಗಳು ಕೈಜೊಡಿಸುವುದು ಅಗತ್ಯ ಎಂದು ಹೇಳಿದರು. ಸುದ್ದಿ ಮಾಧ್ಯಮ ಮಹಾಮಂಡಳದ ಈ ಪ್ರಯತ್ನದಲ್ಲಿ ಸಹಕಾರ ನೀಡುವಂತೆ ಕರ್ನಾಟಕ ಸರಕಾರದ ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಸಹಕಾರ ಇಲಾಖೆಯ ಅಧಿಕಾರಿಗಳ ಮೂಲಕ ರಾಜ್ಯದ ಎಲ್ಲ ಸಹಕಾರ ಸಂಸ್ಥೆಗಳು ಸುದ್ದಿಮಹಾಮಂಡಳದ ಷೇರು ಖರೀದಿಸುವಂತೆ ಕ್ರಮವಿಡಲಾಗುತ್ತಿದೆ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಸುದ್ದಿ ಮಾಧ್ಯಮ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ. ಸತೀಶರವರು ಅತಿಥಿ ಗಣ್ಯರನ್ನು ಹಾಗೂ ಸದಸ್ಯರನ್ನು ಸ್ವಾಗತಿಸಿ ಪರಿಚಯಿಸಿದರು. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಪ್ರಾಸ್ತಾವಿಕವಾಗಿ ಮಾತನಾಡಿದರು.

ನಂತರದಲ್ಲಿ ಸುದ್ದಿ ಮಾಧ್ಯಮ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿ ಸುದ್ದಿ ಮಹಾಮಂಡಳದ ಇದು ವರೆಗಿನ ಕಾರ್ಯಚಟುವಟಿಕೆಗಳ ಬಗ್ಗೆ ಸಂಕ್ಷಿಪ್ತವಾಗಿ ಮಾತನಾಡಿ ಈಗ ಸಹಕಾರಿ ಟಿ.ವಿ. ವೆಬ್‌ಸೈಟ್ ಪ್ರಾರಂಭಿಸಲಾಗಿದೆ. ಇನ್ನು ಕೆಲವೇ ದಿನಗಳಲ್ಲಿ ಸಹಕಾರ ವಾಣಿ

ಮಾಸ ಪತ್ರಿಕೆಯನ್ನು ಪ್ರಾರಂಭಿಸಲಾಗುತ್ತದೆ ರಾಜ್ಯದ ಜನತೆ ಹಾಗೂ ಸಹಕಾರಿ ಬಂಧುಗಳು ತಮ್ಮ ತಮ್ಮ ಮನೆಗಳಲ್ಲಿ ಕುಳಿತು ದೇಶದ ಸಮಗ್ರ ಸಹಕಾರ ಚಳುವಳಿಯ ವಿರಾಟ ಸ್ವರೂಪವನ್ನು ನೋಡುವಂತಾಗಲು ಮುಂಬರುವ ವರ್ಷದ ಒಳಗಾಗಿ ಸ್ಯಾಟಲೈಟ್ ಸಹಕಾರಿ ಟಿ.ವಿ. ಪ್ರಾರಂಭಿಸಲಾಗುತ್ತದೆ. ರಾಜ್ಯದ ಎಲ್ಲ ಸಹಕಾರ ಸಂಸ್ಥೆಗಳು ಸುದ್ದಿ ಮಹಾಮಂಡಳದ ಶೇರು ಖರೀದಿಸುವುದರ ಜೊತೆಗೆ ತಮ್ಮ ಸಹಕಾರಿ ಸಂಸ್ಥೆಗಳ ಸುದ್ದಿಗಳನ್ನು ಕಳುಹಿಸಲು ಕೋರಿದರು.

## ಡಾ. ಎಮ್. ಎನ್. ರಾಜೇಂದ್ರಕುಮಾರರವರಿಗೆ ಅಭಿನಂದನೆ



ಇದೇ ಸಂದರ್ಭದಲ್ಲಿ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷರಾಗಿ ಆಯ್ಕೆಯಾಗಿರುವುದಕ್ಕೆ ಹಾಗೂ ಸತತವಾಗಿ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿ ಆಯ್ಕೆಯಾಗಿರುವುದಕ್ಕೆ ಮತ್ತು ಸಹಕಾರ ಕ್ಷೇತ್ರದಲ್ಲಿ ಡಾಕ್ಟರೇಟ್ ಪಡೆದಿರುವುದಕ್ಕಾಗಿ ಡಾ. ಎಮ್.ಎನ್. ರಾಜೇಂದ್ರಕುಮಾರರವರನ್ನು ಅಭಿನಂದಿಸಲಾಯಿತು.

ನಂತರ ವ್ಯವಸ್ಥಾಪಕ ನಿರ್ದೇಶಕರು ಸಾಮಾನ್ಯ ಸಭೆಯ ವಿಷಯಗಳನ್ನು ಮಂಡಿಸಿದರು ಸಭೆಯು ಸರ್ವಾನುಮತದಿಂದ ಎಲ್ಲ ವಿಷಯಗಳನ್ನು ಅನುಮೋದಿಸಿತು.

ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲರವರು ವಂದನಾರ್ಪಣೆ ಸಲ್ಲಿಸಿದರು. ಒಟ್ಟಾರೆಯಾಗಿ ಸಭೆಯು ಸಫಲವಾಯಿತೆಂದು ತಿಳಿಸಲು ಹರ್ಷವಾಗುತ್ತದೆ.

## ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆ



**ಕಲಬುರಗಿ :** ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯ ನಿರ್ದೇಶಕರಿಗೆ ಮತ್ತು ಮುಖ್ಯಕಾರ್ಯನಿರ್ವಾಹಕರಿಗಾಗಿ ಹಮ್ಮಿಕೊಂಡ "ಸಂಪರ್ಕ ಸಭೆಯನ್ನು" ದಿನಾಂಕ 12.09.2019ರಂದು ಕಲಬುರಗಿ ನಗರದ ಜಿಲ್ಲಾ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಭೆಯ ಉದ್ಘಾಟಕರಾಗಿ ಹಾಗೂ ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಾನ್ಯ ಅಧ್ಯಕ್ಷರಾದ ಬಿ.ಹೆಚ್.ಕೃಷ್ಣಾರೆಡ್ಡಿಯವರು ಈ ಸಭೆಯನ್ನು ಉದ್ಘಾಟಿಸಿದರು. ನಂತರ ಮಾತನಾಡಿ ಸೌಹಾರ್ದ ಚಳುವಳಿವು ಕರ್ನಾಟಕ ಸಹಕಾರ ಕ್ಷೇತ್ರವನ್ನು ಬಲಗೊಳಿಸುತ್ತಿರುವುದು ತುಂಬಾ ಸಂತೋಷವಾಗಿದೆ, ಇದರಿಂದಾಗಿ ರಾಜ್ಯದಲ್ಲಿ ಕೇವಲ ಒಂದು ವಯೋಮಾನಕ್ಕೆ ಸಿಮಿತವಾಗಿದ್ದ ಸಹಕಾರ ಚಳುವಳಿವು ಇಂದು ಯುವಕರು ಸಹ ಈ ಚಳುವಳಿಯಲ್ಲಿ ತೊಡಗಿಸಿಕೊಳ್ಳಲು ಅನುಕೂಲಕರವಾಗಿದೆ ಆದ್ದರಿಂದ ಅವರ ಕ್ರಿಯಾತ್ಮಕ ಯೋಚನೆ/ಆಲೋಚನೆಯಿಂದಾಗಿ ಸಹಕಾರ ಚಳುವಳಿಯಲ್ಲಿ ಹೊಸ ಆಯಾಮವನ್ನು ನೀಡುವ ಮುಖಾಂತರ ಸದ್ಯಸ ಸಹಕಾರಿಗಳಿಗೆ ಸುಲಭ ರೀತಿಯಲ್ಲಿ ಸೇವೆಯನ್ನು ಒದಗಿಸುತ್ತಿರುವುದು, ಇಂದು ನಾವು ಕಾಣುತ್ತಿದ್ದೇವೆ ಆದರು ಸಹ ಸಹಕಾರ ಚಳುವಳಿಯಲ್ಲಿ ಪ್ರಸ್ತುತ ಅನೇಕ ಕಾನೂನು ತೊಡಕುಗಳು ಸಹ ಎದುರಾಗುತ್ತಿವೆ, ಇಂತಹ ತೊಡಕುಗಳು ನಿವಾರಿಸಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸತತ ಪ್ರಯತ್ನವನ್ನು ನಡೆಸುತ್ತಿದ್ದು ಆದರಿಂದ ತಮ್ಮ ಸಲಹೆ ಹಾಗೂ ಸೂಚನೆಗಳು,ತೊಂದರೆಗಳನ್ನು ಆಲಿಸಲು ಈ ಒಂದು ಸಂಪರ್ಕ ಸಭೆಯ ಉದ್ದೇಶವಾಗಿದೆ. ಆದ್ದರಿಂದ ತಾವೆಲ್ಲಾ ಸಕ್ರೀಯವಾಗಿ ಭಾಗವಹಿಸಿ ಈ ಸಹಕಾರಿ ಚಳುವಳಿಯನ್ನು ಬಲಪಡಿಸಲು ಕಾರಣಬೂತರಾಗಬೇಕಾಗಿ ಎಂದು ವಿನಂತಿಸಿದರು, ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಸಂಜೀವ ಮಹಾಜನ, ಶ್ರೀ ವಾಯ್.ಟಿ.ಪಾಟೀಲ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ.ಜಿ.ಪಾಟೀಲ, ಹಾಗೂ ಕಲಬುರಗಿ ಸೌಹಾರ್ದ ಸಹಕಾರಿಗಳ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಪರಸರೆಡ್ಡಿ, ಹಾಗೂ ಸಂಯುಕ್ತ ಸಹಕಾರಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಉಪಸ್ಥಿತರಿದ್ದರು. ಪ್ರಾಸ್ತಾವಿಕ ನುಡಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಹೇಳಿದರು, ಸ್ವಾಗತವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್, ನಿರೂಪಣೆಯನ್ನು ಶ್ರೀ ಸೂರ್ಯಕಾಂತ ರ‍್ಯಾಕಲೆ, ಕಾನೂನು ವ್ಯವಸ್ಥಾಪಕರು, ಹಾಗೂ ವಂದನಾರ್ಪನೆಯನ್ನು ಶ್ರೀ ಓಂಕಾರ ಧರಣಿ. ಜಿಲ್ಲಾ ಸಂಯೋಜಕರು, ಕಲಬುರಗಿ ಇವರು ನೇರವೆರಿಸಿದರು. ಈ ಸಭೆಯಲ್ಲಿ 122 ಸೌಹಾರ್ದ ಸಹಕಾರಿಗಳಿಂದ 168 ಪ್ರತಿನಿಧಿಗಳು ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಿದರು.



**ಬೀದರ :** ದಿನಾಂಕ 13.09.2019ರ ಶುಕ್ರವಾರದಂದು ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರ ಅಧ್ಯಕ್ಷತೆಯಲ್ಲಿ ನಗರದ ಸಹದರ್ಾ ತರಬೇತಿ ಸಂಸ್ಥೆ ಬೀದರನಲ್ಲಿ ಜರುಗಿಸಲಾಯಿತು.

ಸೌಹಾರ್ದ ಕಾಯ್ದೆಯು ಸಹಕಾರಿ ಚಳುವಳಿಗೆ ಒಂದು ಹೊಸ ಆಯಾಮ ನೀಡಿದೆ, ದಿನೇ ದಿನೇ ಸೌಹಾರ್ದ ಸಹಕಾರಿಗಳ ಸಂಖ್ಯೆ ಬೆಳೆಯತೊಡಗಿದೆ ಮುಂಬರುವ ದಿನಗಳಲ್ಲಿ ಸೌಹಾರ್ದ ಸಹಕಾರಿಗಳ ಗುಣಮಟ್ಟದ ಕಡೆಗೆ ಗಮನಹರಿಸಿ ಉತ್ತಮ ಸಹಕಾರಿಗಳಿಗೆ ಪ್ರೋತ್ಸಾಹಿಸಬೇಕಾಗಿದೆ ಎಂದು ನುಡಿದರು. ಸಂಯುಕ್ತ ಸಹಕಾರಿ ಮುಂಬರುವ ದಿನಗಳಲ್ಲಿ ಈ ನಿಟ್ಟಿನಲ್ಲಿ ಕಾರ್ಯಚಟುವಟಿಕೆ ಕೈಗೊಳ್ಳಲಿದೆ ಎಂದರು. ಸಹಕಾರಿಗಳಿಗೆ ಅನೇಕ ಸವಾಲುಗಳಿವೆ ಪ್ರಮುಖವಾಗಿ ಕೇಂದ್ರ ಸರ್ಕಾರದ ಆದಾಯ ತೆರಿಗೆ ಇಲಾಖೆ, ರಾಜ್ಯ ಸರ್ಕಾರ ಕಾಯ್ದೆಯಲ್ಲಿ ಹಸ್ತಕ್ಷೇಪ ಮುಂತಾದವುಗಳ ವಿರುದ್ಧ ಹೋರಾಟದ ಅಗತ್ಯವಾಗಿದೆ ಎಂದು ನುಡಿದರು. ಸಹಕಾರಿಗಳು ಸ್ವತಂತ್ರ್ಯವಾಗಿ ಕಾರ್ಯನಿರ್ವಹಿಸಬೇಕು ಅವುಗಳ ಅಧಿಕಾರ ಅಧಿಕಾರಿಗಳಿಗೆ ನೀಡದೆ ಸಹಕಾರಿಗೆ ಸಿಗುವಂತೆ ಆಗಬೇಕು ಅದೇ ರೀತಿ ಸೌಹಾರ್ದ ಸಹಕಾರಿಗಳು ಕೂಡ ಕಾಯ್ದೆ, ನಿಯಮ ಬೈಲಾಗಳಲ್ಲಿರುವಂತೆ ಕಾರ್ಯನಿರ್ವಹಿಸುವ ಮೂಲಕ ಸಹಕಾರಿಗಳಿಗೆ ಮತ್ತು ಸರ್ಕಾರಕ್ಕೆ ಮಾದರಿಯಾಗಿರಬೇಕು ಎಂದು ತಿಳಿಸಿದರು. ಬೀದರ ಜಿಲ್ಲೆಯಲ್ಲಿ ಸಹಕಾರಿಗಳಿಗೆ ಉತ್ತಮ ಅವಕಾಶಗಳಿದು ಜಿಲ್ಲೆಯ ನಿರ್ದೇಶಕರ ಮತ್ತು ಜಿಲ್ಲಾ ಸಂಯೋಜಕರ ಮಾರ್ಗದರ್ಶನ ಪಡೆದು ಸಹಕಾರಿ ಚಳುವಳಿ ಕಟ್ಟುವ ಕೆಲಸವಾಗಲಿ ಎಂದು ಶುಭ ಹಾರೈಸಿದರು.

ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ್ ಅವರು ಮಾತನಾಡಿ ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ, ಆದರು ಸಹಕಾರಿಗಳಿಗೆ ಇಲಾಖೆಯಿಂದ ಚುನಾವಣೆ, ಉಪವಿಧಿ ತಿದ್ದುಪಡಿ ಮುಂತಾದವುಗಳಲ್ಲಿ ತೊಂದರೆಯಾಗುತ್ತಿದೆ ಅವುಗಳಿಗೆ ಪರಿಹಾರಗಳನ್ನು ಕಾಯ್ದೆಯಲ್ಲಿ ಕಂಡುಕೊಳ್ಳುವ ಅಗತ್ಯವಿದೆ ಎಂದು ನುಡಿದರು. ಇಲ್ಲಿಗೆ ರಾಜ್ಯಾಧ್ಯಕ್ಷರು ಪ್ರವಾಸ ಕೈಗೊಂಡಿರುವುದು ವೈಯಕ್ತಿಕವಾಗಿಯು ಎಲ್ಲಾ ಸಹಕಾರಿಗಳಿಗೂ ಹರ್ಷತಂದಿದೆ ಜಿಲ್ಲೆಯ ಎಲ್ಲಾ ಸಹಕಾರಿಗಳ ಪರವಾಗಿ ಕೃತಜ್ಞತೆ ಸಲ್ಲಿಸಿದರು.

ಸಭೆಯಲ್ಲಿ ಉಪಸ್ಥಿತರಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಮಾತನಾಡಿ ಸೌಹಾರ್ದ ಸಹಕಾರಿಗಳು ಕಾಲ, ಕಾಲಕ್ಕೆ ಕಾಯ್ದೆ ಮತ್ತು ನಿಯಮಗಳಲ್ಲಿ ಸೂಚಿಸಲಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಬೇಕು. ಆಡಳಿತ ಮಂಡಳಿ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕರು ಕಾಲ ಕಾಲಕ್ಕೆ ಸಂಯುಕ್ತ ಸಹಕಾರಿಯ ತರಬೇತಿಗೆ ಹಾಜರಾಗಿ ಮಾಹಿತಿ ಪಡೆದುಕೊಳ್ಳಲು ಸೂಚಿಸಿದರು.

ಪ್ರಾಸ್ತಾವಿಕ ಮತ್ತು ಸ್ವಾಗತವನ್ನು ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್, ನಡೆಸಿಕೊಟ್ಟರು, ವೇದಿಕೆಯ ಮೇಲೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ್, ಬೀದರ ಜಿಲ್ಲೆಯ ಒಕ್ಕೂಟ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ್ ಪಾಟೀಲ್ ಉಪ್ಥಿತರಿದರು. ಸಂಪರ್ಕ ಸಭೆಯಲ್ಲಿ ಒಕ್ಕೂಟ ಸಹಕಾರಿಯ ನಿರ್ದೇಶಕರು, ಜಿಲ್ಲೆಯ ವಿವಿಧ ಸೌಹಾರ್ದ ಸಹಕಾರಿಗಳಿಂದ ಆಗಮಿಸಿದ ಅಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು, ಸಿಬ್ಬಂದಿಗಳು ಸಂಯುಕ್ತ ಸಹಕಾರಿಯ ಸಿಬ್ಬಂದಿಗಳು ಭಾಗವಹಿಸಿದರು. ಕಾರ್ಯಕ್ರಮವನ್ನು ಪ್ರಾಂತೀಯ ಕಛೇರಿಯ ಕಾನೂನು ಅಧಿಕಾರಿಗಳಾದ ಶ್ರೀ ಸೂರ್ಯಕಾಂತ ರ್‍ಯಾಕಲೆ, ನಡೆಸಿಕೊಟ್ಟರು. ಜಿಲ್ಲಾ ಸಂಯೋಜಕರಾದ ಶ್ರೀ ವೀರಶಟ್ಟಿ ಇವರು ವಂದಿಸಿದರು.

ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ ಮಾನ್ಯ ಅಧ್ಯಕ್ಷರಿಗೆ ಸನ್ಮಾನಿಸಲಾಯಿತ್ತು. ಹಾಗೂ ಭಾರತ ಪತ್ತಿನ ಸೌಹಾರ್ದ ಸಹಕಾರಿಯ ವತಿಯಿಂದ ಆಡಳಿತ ಮಂಡಳಿಯ ನಿರ್ದೇಶಕರು ಸೇರಿ ಮಾನ್ಯ ಅಧ್ಯಕ್ಷರಿಗೆ ಉತ್ತರ ಕರ್ನಾಟಕ ನೆರೆ ಸಂತ್ರಸ್ತ ನಿಧಿಗೆ ರೂ. 11000/–ಗಳ ಚೆಕ್ ವಿತರಿಸಿದರು.

## ಕ್ಲಸ್ಟರ್ ತರಬೇತಿ ಕಾರ್ಯಕ್ರಮ



**ಮಂಗಳೂರು :** ಸ್ವಾಭಿಮಾನಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳಿಗಾಗಿ ಕ್ಲಸ್ಟರ್ ತರಬೇತಿ ಕಾರ್ಯಕ್ರಮ ನೀಡಲಾಯಿತು.




**ಉಡುಪಿ:** ಸ್ವರ್ಣ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಪಡುಬಿದ್ರೆ ಇಲ್ಲಿ ಕ್ಲಸ್ಟರ್ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.



**ರಾಯಚೂರು:** ರಾಯಚೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಗೆ ಪಾವತಿಸಬೇಕಾದ ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿಗಳ ಬಗ್ಗೆ ಆನ್‌ಲೈನ್ ನಲ್ಲಿ ಪಾವತಿಸುವ ಬಗ್ಗೆ ಮಾಹಿತಿ ಮತ್ತು ಸಹಕಾರಿಯು ಸಲ್ಲಿಸಬೇಕಾದ ಶಾಸನತ್ಮಾಕ ಮಾಹಿತಿಗಳ ಕುರಿತು ತರಬೇತಿಯನ್ನು ನೀಡಲಾಯಿತು. ಒಟ್ಟು 14 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.

## ಪತ್ರಿಕಾ ಗೋಷ್ಠಿ




**ಬೀದರ:** ದಿನಾಂಕ 13–09–2019ರಂದು ಬೀದರ ನಗರದ ಬರಿದ ಶಹಿ ಹೋಟಲ್ ನಲ್ಲಿ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಮಾನ್ಯ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಅವರ ನೇತೃತ್ವದಲ್ಲಿ ಪತ್ರಿಕಾ ಗೋಷ್ಠಿ ಜರುಗಿಸಲಾಯಿತ್ತು. ಮಾನ್ಯ ಅಧ್ಯಕ್ಷರು ಪತ್ರಿಕಾ ಗೋಷ್ಠಿಯಲ್ಲಿ ಪ್ರಮುಖವಾಗಿ ಸಹಕಾರಿಗಳಿಗೆ ಆಗುತ್ತಿರುವ ಆದಾಯ ತೆರಿಗೆ ಇಲಾಖೆಯ ತೊಂದರೆಗಳು, ಸೌಹಾರ್ದ ಕಾಯ್ದೆಯ ಮೂಲ ಆಶೆಯದ ಕುರಿತು ಮಾಹಿತಿ ನೀಡಿದರು. ರಾಜ್ಯದಲ್ಲಿ ಸೌಹಾರ್ದ ಚಳುವಳಿ ಸಹಕಾರಿಗಳ ಕಾರ್ಯಚಟುವಟಿಕೆಯ ಕುರಿತು ವಿಷಯಗಳನ್ನು ಪ್ರಸ್ತಾಪಿಸಿದರು. ರಾಜ್ಯದಲ್ಲಿ ಉಂಟಾಗುವ ನೆರೆ ಬರ ಸಂದರ್ಭದಲ್ಲಿ ರಾಜ್ಯ ಸರ್ಕಾರದೊಂದಿಗೆ ಸಹಕರಿಸಲಿದ್ದು ನೆರೆ ಸಂತ್ರಸ್ತರಿಗಾಗಿ ಸಹಕಾರಿಗಳಿಂದ ಹಣವನ್ನು ಸಂಗ್ರಹಿಸಲಾಗಿದೆ ಅದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ನೀಡಲಾಗುವುದು ಎಂದು ತಿಳಿಸಿದರು. ಪತ್ರಕರ್ತರ ಅನೇಕ ಪ್ರಶ್ನೆಗಳಿಗೆ ಉತ್ತರಿಸಿದರು. ಈ ಪತ್ರಿಕಾ ಗೋಷ್ಠಿಯಲ್ಲಿ ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ್, ಶ್ರೀ ಸಂಜೀವ ಮಹಾಜನ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ., ಪಾಟೀಲ್ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್. ಕಾನೂನು ಅಧಿಕಾರಿ ಶ್ರೀ ಸೂರ್ಯಕಾಂತ ರ್‍ಯಾಕಲೆ, ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ್, ನಿರ್ದೇಶಕರಾದ ಶ್ರೀ ಶ್ರೀಕಾಂತ ಸ್ವಾಮಿ, ಸಂ–ಜಯ ಕ್ಯಾಸಾ,ಶಿವಬಸಪ್ಪ ಚನ್ನಮಲ್ಲೆ, ಜಿಲ್ಲಾ ಸಂಯೋಜಕರಾದ ಶ್ರೀ ವೀರಶಟ್ಟಿ, ಜಿಲ್ಲೆಯ ಸೌಹಾರ್ದ ಸಹಕಾರಿಗಳು ಉಪಸ್ಥಿತರಿದ್ದರು.




**ಕಲಬುರಗಿ:** ದಿನಾಂಕ 12.09.2019ರಂದು ಕಲಬುರಗಿಯ ಪತ್ರಿಕಾ ಭವನದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ಪತ್ರಿಕಾಗೋಷ್ಠಿಯನ್ನು ನೇರವೆರಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಸಂಜೀವ ಮಹಾಜನ, ಶ್ರೀ ವಾಯ್.ಟಿ.ಪಾಟೀಲ ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ.ಜಿ.ಪಾಟೀಲ ಮತ್ತು ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಮಾನ್ಯ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಪರಸರೆಡ್ಡಿ ಇವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಸಹಕಾರಿಗಳ ಚುನಾವಣಾ ಆಯುಕ್ತರ ಭೇಟಿ

ಮಾನ್ಯ ಸಹಕಾರ ಚುನಾವಣಾ ಪ್ರಾಧಿಕಾರದ ಆಯುಕ್ತರು ದಿನಾಂಕ 11 ಸಪ್ಟೆಂಬರ್ 2019 ರಂದು ಬೆಳಗಾವಿ ಜಿಲ್ಲೆಗೆ ಭೇಟಿ ನೀಡಿದ್ದು, ಈ ಸಂದರ್ಭದಲ್ಲಿ ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಇವರು ಆಯುಕ್ತರನ್ನು ಭೇಟಿ ಮಾಡಿ ಸೌಹಾರ್ದ ಸಹಕಾರಿಗಳ ಚುನಾವಣೇ ಕುರಿತು ಚರ್ಚಿಸಿದರು.

# “ಸಹಕಾರ ಹಾಗೂ ಬ್ಯಾಂಕಿಂಗ್ ಮೆನೇಜಮೆಂಟ ಡಿಪ್ಲೋಮಾ” 2ನೇ ತಂಡದ ಪ್ರವೇಶ ಅರ್ಜಿಗಳ ಆಹ್ವಾನ ಸೌಹಾರ್ದ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವಿದ್ಯಾರ್ಥಿಗಳಿಗೆ, ಸಹಕಾರಿಗಳಿಗೆ 6 ತಿಂಗಳ ದೂರ ಶಿಕ್ಷಣ ಕೋರ್ಸ” 1ನೇ ಜನವರಿ 2020 ರಿಂದ ಪ್ರಾರಂಭ

## Applications called for 2nd Batch of “Diploma in Cooperation and Banking Management”(DCBM) 6 Months Distance Education Course starts from 1st January 2020

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ 6 ತಿಂಗಳ ದೂರ ಶಿಕ್ಷಣ “ಡಿಪ್ಲೋಮಾ ಇನ್ ಕೋ–ಆಪರೇಶನ್ & ಬ್ಯಾಂಕಿಂಗ ಮೆನೇಜಮೆಂಟ”ನ 2ನೇ ತಂಡದ ಕೋರ್ಸ್‌ನ್ನು ಇದೇ ಜನವರಿ 2020 ರಿಂದ ಪ್ರಾರಂಭಿಸಲಾಗುತ್ತದೆ.

ಈ ಕೋರ್ಸ 6 ತಿಂಗಳು ಅವಧಿಯದ್ದಾಗಿದೆ. 6 ವಿಷಯಗಳಿರುತ್ತವೆ. ಒಂದು ಕೇಸ್‌ಸ್ಟಡಿ ಇರುತ್ತದೆ. ಪ್ರತಿ ವಿಷಯಕ್ಕೆ ತಲಾ 100 ಅಂಕಗಳು, ಕೇಸ್‌ಸ್ಟಡಿಗೆ 40 ಅಂಕಗಳು ಹಾಗೂ ಕಂಟ್ಯಾಕ್ಟ ಕ್ಲಾಸ್‌ಗಳಿಗೆ 60 ಅಂಕಗಳು (ಒಟ್ಟು 100 ಅಂಕಗಳು) ಒಟ್ಟು 700 ಅಂಕಗಳು. ಪ್ರತಿ 2 ತಿಂಗಳಿಗೆ ಒಂದು ಬಾರಿ 2 ದಿನಗಳ ಒಂದು ಕಂಟ್ಯಾಕ್ಟ ಕ್ಲಾಸ್ ನಡೆಸಲಾಗುವುದು. 6 ತಿಂಗಳ ಕೊನೆಯಲ್ಲಿ ಪರೀಕ್ಷೆ ನಡೆಸಲಾಗುವುದು. ನಂತರ ಫಲಿತಾಂಶ ಪ್ರಕಟಿಸಲಾಗುವುದು. ಅಂಕಪಟ್ಟಿ ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.

ಈ ಕೋರ್ಸನ್ನು 1997 ರ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯವರು, ವಿದ್ಯಾರ್ಥಿಗಳು, ಸಹಕಾರಿಗಳು ಹಾಗೂ ಯುವಕ ಯುವತಿಯರು ಮಾಡಬಹುದಾಗಿದೆ.

**ಕನಿಷ್ಠ ವಿದ್ಯಾರ್ಹತೆ ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) ಪೂರ್ಣಗೊಂಡಿರಬೇಕು.**

ಕೋರ್ಸ್ ಫೀ : ರೂ. 5000/–(ಪ್ರವೇಶ ಹಾಗೂ ವ್ಯವಸ್ಥಾಪನಾ ಶುಲ್ಕ ರೂ 2000/– ಕೋರ್ಸ ಮೆಟಿರಿಯಲ್ ರೂ 2000/– ಪರೀಕ್ಷಾ ಫೀ 1000/–) ಅಧ್ಯಯನ ಸಾಹಿತ್ಯ ಕಲಿಕೆ ಹಾಗೂ ಪರೀಕ್ಷೆಗಳನ್ನು ಕನ್ನಡ ಅಥವಾ ಇಂಗ್ಲಿಷ್ ಭಾಷೆಯ ಆಯ್ಕೆಗೆ ಅವಕಾಶವಿರುತ್ತದೆ. ಅರ್ಜಿಯ ಜೊತೆಗೆ ಕೋರ್ಸ ಫೀರೂ 5,000/– (18% ಜಿಎಸ್‌ಟಿ ರೂ.1170/–) ಗಳು ಸೇರಿದಂತೆ ಒಟ್ಟು ರೂ. 6170/– ನ್ನು ಕಳುಹಿಸುವುದು.

2 ದಿನಗಳ 3 ಕಂಟ್ಯಾಕ್ಟ ತರಗತಿಗಳ ವೆಚ್ಚ ತಲಾ ರೂ 500 ಗಳಂತೆ ಒಟ್ಟು ರೂ 1500/– ಕಂಟ್ಯಾಕ್ಟ ತರಗತಿಗಳನ್ನು ಶಿಬಿರಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗೀಯ ಕೇಂದ್ರಗಳಲ್ಲಿ ಮತ್ತು ಸಂಯುಕ್ತ ಸಹಕಾರಿಯು ನಿಗದಿಪಡಿಸುವ ರಾಜ್ಯದ ಇತರೆ ಕೇಂದ್ರಗಳಲ್ಲಿಯೂ ಸಹ ನಡೆಸಲಾಗುವುದು. ಕಂಟ್ಯಾಕ್ಟ ತರಗತಿ ಸಮಯದಲ್ಲಿ ಅಭ್ಯರ್ಥಿಗಳ ಊಟ, ವಸತಿ ವ್ಯವಸ್ಥೆಯನ್ನು ಮಾಡಲಾಗುವುದು. 3 ಕಂಟ್ಯಾಕ್ಟ ತರಗತಿಗಳ ವೆಚ್ಚ ರೂ 1500/– ಪ್ರತೇಕ.

**ಡಿಸೆಂಬರ 31 ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.**

ಅರ್ಜಿ ಫಾರ್ಮ ಹಾಗೂ ಕೋರ್ಸ ವಿವರಣಾ ಪತ್ರ ಪಡೆಯಲು ಸ್ವವಿವರ ಹಾಗೂ ರೂ. 100 ಗಳನ್ನು ಪೋಸ್ಟಲ್ ಆರ್ಡರ್‌ನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿ., ಬೆಂಗಳೂರು ಇವರ ಹೆಸರಿಗೆ ಪಡೆದು ಕೇಂದ್ರ ಕಛೇರಿಗೆ ಅಥವಾ ಪ್ರಾಂತೀಯ ಕಛೇರಿಗಳಿಗೆ ಕಳುಹಿಸುವುದು.

ಹೆಚ್ಚಿನ ವಿವರಗಳಿಗೆ ಜಿಲ್ಲಾ ಸಂಪರ್ಕ ವ್ಯಕ್ತಿಗಳ ಹೆಸರುಗಳ ನಂಬರ್‌ಗಳನ್ನು www.souharda.coop ಹಾಗೂ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳನ್ನು ಸಂಪರ್ಕಿಸಬಹುದಾಗಿದೆ.

ಕೇಂದ್ರ ಕಛೇರಿ :080–23378375–80, 23474408, 23573291, ಬೆಂಗಳೂರು ಪ್ರಾಂತೀಯ ಕಛೇರಿ: 080–23525546, ಮೈಸೂರು ಪ್ರಾಂತೀಯ ಕಛೇರಿ: 0821–2332299, ಬೆಳಗಾವಿ ಪ್ರಾಂತೀಯ ಕಛೇರಿ: 0831–2401551, ಕಲಬುರಗಿ ಪ್ರಾಂತೀಯ ಕಛೇರಿ: 08472–270222.

ಸಹಿ/–
(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು

# ಭಾರತದ ರಾಷ್ಟ್ರೀಯ ಸಹಕಾರಿ ಒಕ್ಕೂಟದ 66ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸುತ್ತೋಲೆ

## भारतीय राष्ट्रीय सहकारी संघ

(भारतीय सहकारी आंदोलन की शीर्षस्थ संस्था)

## NATIONAL COOPERATIVE UNION OF INDIA

(APEX ORGANISATION OF THE INDIAN COOPERATIVE MOVEMENT)

**Ref. No. :** NCUI/PR/66th-AICW/2019 **Dated :** 17.09.2019

– MDs/CEs of National level Fedns./State Coop. Unions.

– Director, VAMNICOM/Director, RICM/ICMs

– Other National and State level Cooperative Fedns.

**Subject : Celebration of 66th All India Cooperative Week Celebrations—reg.**

Dear Sir/Madam,

National Cooperative Union of India (NCUI) will be organizing 66th All India Cooperative Week 14th – 20th November, 2019. The objective of the Cooperative Week celebrations is to generate awareness about the achievements and success stories of the cooperative movement, and chalk out effective action-plan for strengthening the cooperative movement. The week-long celebrations consist of organizing various events like seminars, workshops, debate, quiz competition for youth, and other events.

As per the approval of the Governing Council of NCUI, the main theme and sub-themes of Cooperative Week Celebrations for various days are as under :

***Main theme :*** **Role of Cooperatives in New India**

***Namenclature of Various Days :***

| | | |
|---|---|---|
| 14-11-2019 | : | Innovation Through Rural Cooperatives. |
| 15-11-2019 | : | Enabling Legislation for Cooperatives. |
| 16-11-2019 | : | Re-orienting Training and Education Through Success Stories. |
| 17-11-2019 | : | Strengthening Cooperation Among Cooperatives. |
| 18-11-2019 | : | New Initiatives of Government Through Cooperatives. |
| 19-11-2019 | : | Cooperatives for Youth, Women and Weaker Sections. |
| 20-11-2019 | : | Financial Inclusion, Technology Adoption and Digitalisation Through Cooperatives. |

You are requested to initiate the celebrations at your end, and disseminate this information for wider publicity.

Thanking you,

Yours faithfully,

(N. Satya Narayana)
Chief Executive, NCUI

3, सीरी इंस्टीट्यूशनल एरिया, अगस्त क्रांति मार्ग, नई दिल्ली–110016. 3, Siri Institutional Area, August Kranti Marg, New Delhi-110 016
दूरभाष / Phones : 26681472, 26565146, 26512474 फैक्स / Fax : 011-26863248

# 66ನೇ ಅಖಿಲ ಭಾರತ ಸಹಕಾರ ಸಪ್ತಾಹ 2019

ರಾಷ್ಟ್ರೀಯ ಸಹಕಾರ ಯೂನಿಯನ್ ನವದೆಹಲಿಯವರು 66ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯ ವಿವರಗಳನ್ನು ಸಿದ್ದಪಡಿಸಿದ್ದು ವಿವರಗಳು ಈ ಕೆಳಕಂಡಂತೆ ಇದೆ. ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಅವಗಾಹನೆಗಾಗಿ ವಿವರ ಪ್ರಕಟಿಸಲಾಗಿದೆ.

## ಧ್ಯೇಯ : "ನವಭಾರತ ನಿರ್ಮಾಣದಲ್ಲಿ ಸಹಕಾರಿಗಳ ಪಾತ್ರ"

## Theme : "Role of Cooperatives in New India"

**ಸಪ್ತಾಹದ 7 ದಿನಗಳ ವಿವರಗಳು :**

| | |
|---|---|
| 14.11.2019 | ಗ್ರಾಮೀಣ ಸಹಕಾರಿಗಳಿಂದ ಸಹಕಾರ ಕ್ಷೇತ್ರದಲ್ಲಿ ಆವಿಷ್ಕಾರ / Innovation Through Rural Cooperatives |
| 15.11.2019 | ಸಹಕಾರಿಗಳಿಗೆ ಸಧೃಡ ಕಾನೂನು/ Enabling Legislation for Cooperatives. |
| 16.11.2019 | ಸಹಕಾರ ಶಿಕ್ಷಣ ತರಬೇತಿಗಳನ್ನು ಯಶೋಗಾಥೆಗಳ ಮೂಲಕ ಪುನರ್ ಸಂಘಟಿಸುವುದು/ Re-orienting Training and Education Through Success Stories |
| 17.11.2019 | ಸಹಕಾರಿಗಳ ಮಧ್ಯ ಪರಸ್ಪರ ಸಹಕಾರವನ್ನು ಬಲಪಡಿಸುವುದು/ Strengthening Cooperation among Cooperatives. |
| 18.11.2019 | ಸಹಕಾರ ಕ್ಷೇತ್ರದ ಬಲಸಂವರ್ಧನೆಗೆ ಸಹಕಾರಿಗಳ ನೂತನ ಕ್ರಮಗಳು / New Initiatives of Government Through Cooperatives. |
| 19.11.2019 | ಯುವಜನ, ಅಬಲ ಹಾಗೂ ಮಹಿಳಾ ಸಹಕಾರಿಗಳಿಗಾಗಿ ಸಹಕಾರಿ ಸಂಸ್ಥೆಗಳು / Cooperatives for Youth, Women and Weaker Sections. |
| 20.11.2019 | ಸಹಕಾರಿ ಸಂಸ್ಥೆಗಳಲ್ಲಿ ಆರ್ಥಿಕ ಸೇರ್ಪಡೆ, ತಂತ್ರಜ್ಞಾನ ಹಾಗೂ ಡಿಜಿಟಲೈಜೇಷನ್ ಅಳವಡಿಸುವುದು /Financial Inclusion, Technology Adoption and Digitalisation Through Cooperatives. |



ಮಂಗಳೂರು: ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ಇವರು ಬಿಜೆಪಿಯ ಕರ್ನಾಟಕ ರಾಜ್ಯ ಅಧ್ಯಕ್ಷರಾದ ಶ್ರೀ ನಳಿನ್ ಕುಮಾರ್ ಕಟೀಲು ಇವರನ್ನು ಭೇಟಿ ಮಾಡಿದರು. ಕಾಂಪ್ಕೋ ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್ಚಂದ್ರ ಇವರು ಉಪಸ್ಥಿತರಿದ್ದರು.





ಮಂಗಳೂರು : ತೊಕ್ಕೋಟಿನ ಜನ್ಮಭೂಮಿ ಸ್ವ ಸಹಾಯ ಸೌಹಾರ್ದ ಸಹಕಾರಿಯ ಕೇಂದ್ರ ಕಛೇರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ಇವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಯ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

ಮಂಗಳೂರು : ದೇರಳಕಟ್ಟೆಯ ಮಾತ್ರಭೂಮಿ ಸೌಹಾರ್ದ ಸಹಕಾರಿಯ ಜನೌಷಧಿ ಕೇಂದ್ರಕ್ಕೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಸ್ಕರ್ ದೇವಸ್ಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಕೃಷ್ಣ ಕೋಂಪದವು ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ನಿರ್ದೇಶಕರುಗಳು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ



ಬೀದರ: ಶ್ರೀ ಮಣಿಕ ಪ್ರಭು ಪತ್ತಿನ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ, ಸಂಜೀವ ಮಹಾಜನ, ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಭೇಟಿ ನೀಡಿದಾಗ ಸನ್ಮಾನಿಸಿದರು.




ಬೀದರ: ಬೀದರ ಜಿಲ್ಲಾ ಸಂಪರ್ಕ ಕಛೇರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ, ಸಂಜೀವ ಮಹಾಜನ, ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಭೇಟಿ ನೀಡಿದರು.



ಬೀದರ: ಚಿಟಗುಪ್ಪ ಪತ್ತಿನ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಭೇಟಿ ನೀಡಿದಾಗ ಸನ್ಮಾನಿಸಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ, ಸಂಜೀವ ಮಹಾಜನ, ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಉಪಸ್ಥಿತರಿದ್ದರು.



ಕಲಬುರಗಿ: ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ಸಿದ್ಧಶ್ರೀ ಸೌಹಾರ್ದ ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಯ ಬಗ್ಗೆ ಚರ್ಚಿಸಿ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲರವರು ಉಪಸ್ಥಿತರಿದ್ದರು.




ದಿನಾಂಕ 13.09.2019ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಮತ್ತು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ.ಜಿ.ಪಾಟೀಲ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಇವರುಗಳು ಮಾಹಗಾಂವ ಸೌಹಾರ್ದ ಪತ್ತಿನ ಸಹಕಾರಿ ನಿ., ಮಾಹಗಾಂವ ಈ ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಆರ್ಥಿಕ ಚಟುವಟಿಕೆಗಳನ್ನು ಪರಿಶೀಲಿಸಿ ಸೂಕ್ತ ಸಲಹೆ ಮಾರ್ಗದರ್ಶನವನ್ನು ನೀಡಿರುತ್ತಾರೆ.



ಕಲಬುರಗಿ: ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ಗುರು ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಯ ಬಗ್ಗೆ ಚರ್ಚಿಸಿ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲರವರು ಉಪಸ್ಥಿತರಿದ್ದರು.



ಕಲಬುರಗಿ: ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ಅಣ್ಣ ಬಸವಣ್ಣ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಯ ಬಗ್ಗೆ ಚರ್ಚಿಸಿ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲರವರು ಉಪಸ್ಥಿತರಿದ್ದರು.



ಮಂಡ್ಯ: ಮಂಡ್ಯದಲ್ಲಿ ಜರುಗಿದ ಪ್ರವರ್ತಕರ ಸಭೆ.




ಚಾಮರಾಜನಗರ : ಸಿರಿ ವಿವಿದ್ದೋದ್ದೇಶ ಸಹಕಾರ ಸಂಘ ಚಾಮರಾಜನಗರ ಇದರ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಬಗ್ಗೆ ಮಾಹಿತಿಯನ್ನು ನೀಡಿ ಪರಿವರ್ತನೆಗಾಗಿ ಹಾಜರಿದ್ದ ಸದಸ್ಯರಿಂದ ಅನುಮೋದನೆ ಪಡೆಯಲಾಯಿತು.



ದಾವಣಗೆರೆ : ದಿನಾಂಕ 06.09.2019ರಂದು ದಾವಣಗೆರೆ ನಗರದ ಅಪೂರ್ವ ರೆಸ್ಟೋರೆಂಟ್ ಹೋಟೆಲ್ ನಲ್ಲಿ ನಡೆದ ಪ್ರವರ್ತಕರ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಭಾಗವಹಿಸಿ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಬಗ್ಗೆ ಅಗತ್ಯ ಮಾಹಿತಿ ನೀಡಿದರು.



ಬೀದರ: ಶ್ರೀ ರೇಣುಕ ಮಾಹೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ., ಬೀದರ ಸದರಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಇವರು ಭೇಟಿ ನೀಡಿದಾಗ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಹೇಶ್ವರ್ ಸ್ವಾಮಿ ಇವರು ರೇಣುಕಾಚಾರ್ಯ ಭಾವಚಿತ್ರ ನೀಡಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಗುರುನಾಥ ಜಾಂತಿಕರ, ಸಂಜಯ ಮಹಾಜನ್, ಇವರು ಉಪಸ್ಥಿತರಿದ್ದರು.



ಬೆಳಗಾವಿ: ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಮತ್ತು ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರು ಶ್ರೀ ಶ್ರೀಕಾಂತ ಬರುವೆ ಇವರು ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು ಬೆಳಗಾವಿ ಇವರನ್ನು ಭೇಟಿ ಮಾಡಿ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆ ಮತ್ತು ಸೌಹಾರ್ದ ನ್ಯಾಯಾಲಯಕ್ಕೆ ಮಾನ್ಯ ಪೀಠಾಧಿಕಾರಿಗಳ ನೇಮಕ ಮಾಡುವ ಕುರಿತು ಹಾಗೂ ಸೌಹಾರ್ದ ಸಹಕಾರಿಗಳ ಠೇವಣಿದಾರರ ವಿಮೆ ಯೋಜನೆ ಮತ್ತು ಸಮಾಪನೆ ಹಂತದಲ್ಲಿ ಇರುವ ಸೌಹಾರ್ದ ಸಹಕಾರಿಗಳ, ಗ್ರಾಹಕ ನ್ಯಾಯಾಲಯದಲ್ಲಿ ಸಂಯುಕ್ತ ಸಹಕಾರಿಗಳ ಸಿಬ್ಬಂದಿಗಳ ಮೇಲೆ ಇರುವ ಪ್ರಕರಣಗಳ ಬಗ್ಗೆ ಚರ್ಚೆ ಮಾಡಿರುತ್ತಾರೆ. ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿ ವತಿಯಿಂದ ಪ್ರಕಟಣೆ ಆಗಿರುವ ಪುಸ್ತಕಗಳನ್ನು ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರಿಗೆ ನೀಡಲಾಯಿತು.



ದಿನಾಂಕ 22.09.2019 ರಂದು ಸಿರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸಹಕಾರಿಗೆ ಸಂಯುಕ್ತ ಸಹಕಾರಿಯ ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ವರು ಭೇಟಿ ನೀಡಿ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕರೊಂದಿಗೆ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಚರ್ಚಿಸಿ ಅಗತ್ಯ ಮಾಹಿತಿ ನೀಡಿದರು, ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ರವರು ಉಪಸ್ಥಿತರಿದ್ದರು.

# ನೆರೆ ಸಂತ್ರಸ್ತರಿಗೆ ಪರಿಹಾರ ನಿಧಿಗೆ ಸೌಹಾರ್ದ ಸಹಕಾರಿಗಳ ಕೊಡುಗೆ

| SL.No. | Code | Subscriber | Amount |
|---|---|---|---|
| Brought Froward Amount | | | 8,97,004.00 |
| 1 | KLR-0011 | The Pavagada Souharda Multipurpose Cooperative Ltd., | 1,15,000.00 |
| 2 | BEL-0007 | Navakarnataka Souharda Credit Co-Operative Ltd., | 1,00,000.00 |
| 3 | BGM-0372 | Sri Sai Credit Souharda Sahakari Ltd. | 1,00,000.00 |
| 4 | BGU-0142 | Spandana Credit Souharda Sahakari Ni., | 1,00,000.00 |
| 5 | GLB-0017 | Siddivinayaka Souharda Sahakari Ni., | 1,00,000.00 |
| 6 | MNG-0001 | Sri Saraswati Credit Souharda Sahakari Ni., | 1,00,000.00 |
| 7 | RCR-0009 | Sri Bhramaramba Pattina Souharda Sahakari Ni., | 1,00,000.00 |
| 8 | RCR-0076 | Lingasgur Taluk Radder Pattina Souharda Sahakari Ni., | 1,00,000.00 |
| 9 | SMG-0098 | Prathamika Shala Shikshakara Souharda Sahakari Ni., | 1,00,000.00 |
| 10 | BEL-0116 | Ahana Souharda Credit Co-operative Ltd., | 51,000.00 |
| 11 | GLB-0036 | Gulbarga Mahila Souharda Sahakari Ni., | 51,000.00 |
| 12 | BGU-0309 | Karnataka Veerashaiva Souharda Cooperative Ltd., | 51,000.00 |
| 13 | BGM-0351 | Sri Basaveshwara Urban Credit Souharda Sahakari Ni., | 50,000.00 |
| 14 | BGM-0761 | Shivashankara Multipurpose Souharda Sahakari Ni., | 50,000.00 |
| 15 | BGU-0132 | Mahayogi Vemana Souharda Pattina Sahakari Ni., | 50,000.00 |
| 16 | BGU-0189 | Yashaswini Mahila Souharda Credit Sahakari Ni., | 50,000.00 |
| 17 | RCR-0010 | Sri Basaveshwara Pattina Souharda Sahakari Ni., | 50,000.00 |
| 18 | RCR-0073 | Laxmi Pattina Souharda Sahakari Ni. | 50,000.00 |
| 19 | RCR-0099 | Neeladri Pattina Souharda Sahakari Ni., | 50,000.00 |
| 20 | UDP-0032 | Sri Gurunarasimha Vividoddesha Souharda Sahakari Ni., | 50,000.00 |
| 21 | RCR-0192 | Sri Shivasharane Sajjalasri Souharda Sahakari Ni., | 50,000.00 |
| 22 | BGU-0163 | Flow serve Employees Souharda Credit Cooperative Ltd., | 45,000.00 |
| 23 | RCR-0052 | Sri Kannika Parameshwari Pattina Souharda Ni., | 41,000.00 |
| 24 | RCR-0105 | Siri Sanjivini Pattina Souharda Sahakari Ni., | 36,000.00 |
| 25 | RCR-0095 | Sindhu Credit Souharda Sahakari Ni., | 30,000.00 |
| 26 | DVG-0018 | Jangama Souharda Sahakari Ni., | 25,000.00 |
| 27 | GLB-0123 | Om Sri Veerabhadreshwara Souharda Pattina Sahakari Ni., | 25,000.00 |
| 28 | RCR-0004 | Sri Guru Ramalingeshwara Souharda Pattina Sahakari Ni., | 25,000.00 |

| | | | |
|---|---|---|---|
| 29 | RCR-0072 | Sri Chennabasava Pattina Souharda Sahakari Ni., | 25,000.00 |
| 30 | RCR-0077 | Sri Maruthi Pattina Souharda Sahakari Ni. | 25,000.00 |
| 31 | RCR-0078 | Sri Sai Channabasaveshwara Pattina Souharda Sahakari Ni. | 25,000.00 |
| 32 | RCR-0089 | Muktha Pattina Souharda Sahakari Ni. | 25,000.00 |
| 33 | RCR-0122 | Shivapriya Pattina Souharda Sahakari Ni., | 25,000.00 |
| 34 | TMK-0068 | Sri Vasavi Souharda Pattina Sahakari Ni. | 25,000.00 |
| 35 | RCR-0151 | Sri Gururaghavendra Pattina Souharda Sahakari Ni., | 25,000.00 |
| 36 | GLB-0153 | Kalaburagi Souharda Pattina Sahakari Ni., | 25,000.00 |
| 37 | DVG-0057 | Sri Anjaneya Souharda Sahakari Ni., | 25,000.00 |
| 38 | RMN-0013 | Sri Nirvaaneshwara Hiriya Vidhyarthigala Matthu Noukarara Souharda Sahakari Ni., | 25,000.00 |
| 39 | BEL-0151 | Milana Credit Souharda Sahakari Ni., | 25,000.00 |
| 40 | UDP-0098 | Sarvodaya Credit Souharda Sahakari Ni., | 25,000.00 |
| 41 | KWR-0098 | Scodves Mahila Souharda Sahakari Ni., | 24,925.00 |
| 42 | RCR-0060 | Rani Chennamma Pattina Souharda Sahakari Ni. | 21,500.00 |
| 43 | RCR-0007 | Sapthagiri Pattina Souharda Sahakari Ni., | 21,000.00 |
| 44 | BGU-0022 | Ashwathapura Pattina Souharda Sahakari Ni., | 20,000.00 |
| 45 | HVR-0003 | Adishakti Pattina Souharda Sahakari Ni., | 20,000.00 |
| 46 | MNG-0040 | Sri Shankara Bharathi Vividoddesha Souharda Sahakari Ni., | 20,000.00 |
| 47 | RCR-0093 | Asare Vividoddesha Souharda Sahakari Ni., | 18,000.00 |
| 48 | BGM-0003 | Shivabasava Credit Souharda Sahakari Ltd., | 15,000.00 |
| 49 | BGM-0816 | Sri Balaganapathi Vividha Uddeshagala Souharda Sahakari Ni., | 15,000.00 |
| 50 | BGU-0160 | Sri Mathaji Vividoddesha Souharda Sahakari Ni., | 15,000.00 |
| 51 | BJP-0028 | Sri Basaveshwara Souharda Pattina Sahakari Ni. | 15,000.00 |
| 52 | MNG-0048 | Mudubidare Vividoddesha Souharda Sahakari Ni., | 15,000.00 |
| 53 | RCR-0084 | Vijayamitra Vividoddesha Souharda Sahakari Ni., | 15,000.00 |
| 54 | RCR-0123 | Panchamukhi Souharda Pattina Sahakari Ni., | 15,000.00 |
| 55 | RCR-0125 | Sri Kanakalaxmi Pattina Souharda Sahakari Ni., | 15,000.00 |
| 56 | RCR-0191 | Shiva Parvathi Ganesha Pattina Souharda Sahakari Ni., | 15,000.00 |
| 57 | HVR-0121 | Sri Sharipa Shivayogishwara Kshemabhivruddhi Souharda Sahakari Ni., | 15,000.00 |
| 58 | RCR-0188 | Sri Halli Basaveshwara Pattina Souharda Sahakari Ni., | 13,700.00 |
| 59 | RCR-0224 | Veerashaiva Vikas Credit Souharda Sahakari Ni., | 12,000.00 |

| | | | |
|---|---|---|---|
| 60 | RCR-0185 | City Merchants Pattina Souharda Sahakari Ni., | 11,116.00 |
| 61 | HVR-0106 | Sri Guru Markandeshwara Pattina Souharda Sahakari Ni., | 11,100.00 |
| 62 | GLB-0075 | Sri Veera Ganesha Souharda Pattina Sahakari Ni., | 11,000.00 |
| 63 | KPL-0027 | Sri Neelakanteshwar Souharda Pattina Sahakari Ni., | 11,000.00 |
| 64 | RCR-0005 | SnehaSagara Souharda Sahakari Ni., | 11,000.00 |
| 65 | RCR-0008 | Mahalakshmi Souharda Co-operative Ltd., | 11,000.00 |
| 66 | RCR-0085 | Sri Bhagavan Mahaveera Pattina Souharda Sahakari Ni., | 11,000.00 |
| 67 | RCR-0115 | Yuva Shakti Souharda Pattina Sahakari Ni., | 11,000.00 |
| 68 | RCR-0137 | Sajjalasri Souharda Pattina Sahakari Ni., | 11,000.00 |
| 69 | RCR-0155 | Sri Veereswara Tata Pattina Souharda Sahakari Ni., | 11,000.00 |
| 70 | BDR-0108 | Bharath Credit Souharda Cooperative Ltd., | 11,000.00 |
| 71 | RCR-0197 | Devanampriya Pattina Souharda Sahakari Ni., | 11,000.00 |
| 72 | HSN-0010 | Sai Siri Souharda Pattina Sahakari Ni., | 10,001.00 |
| 73 | BGM-0089 | The Plus Urban Credit Souharda Sahakari Ni., | 10,000.00 |
| 74 | BGU-0127 | Aacharya Souharda Credit Co-operative Ltd., | 10,000.00 |
| 75 | BGU-0179 | Sri Chidambara Souharda Pattina Sahakari Ni., | 10,000.00 |
| 76 | BJP-0107 | Navajeevan Vividoddesha Souharda Sahakari Ni., | 10,000.00 |
| 77 | CKB-0002 | Sri Vasavi Vartakara Souharda Sahakari Ni. | 10,000.00 |
| 78 | HSN-0011 | Sri Vasavi Vividoddesha Pattina Souharda Sahakari Ni., | 10,000.00 |
| 79 | KWR-0034 | Ambika Pattina Souharda Sahakari Ni., | 10,000.00 |
| 80 | MYS-0005 | Padaki Souharda Credit Co-operative Ltd., | 10,000.00 |
| 81 | RCR-0012 | Chinna Pattina Souharda Sahakari Ni., | 10,000.00 |
| 82 | RCR-0050 | Poojya Sharanabasaveshwara Souharda Pattina Sahakari Ni., | 10,000.00 |
| 83 | RCR-0102 | Sri Aditya Narayana Pattina Souharda Sahakari Ni., | 10,000.00 |
| 84 | RCR-0116 | Sri Basavalinga Pattina Souharda Sahakari N., | 10,000.00 |
| 85 | SMG-0078 | Stree Bandhu Vividoddesha Souharda Sahakari Ni., | 10,000.00 |
| 86 | TMK-0034 | Sri Udaya Ravi Souharda Pattina Sahakari Ni., | 10,000.00 |
| 87 | TMK-0090 | Janaraksha Souharda Pattina Sahakari ni. | 10,000.00 |
| 88 | RCR-0149 | Sri Parameshwari Pattina Souharda Sahakari Ni., | 10,000.00 |
| 89 | RCR-0157 | Prakruti Pattina Souharda Sahakari Ni., | 10,000.00 |
| 90 | BEL-0204 | Veerashaiva Panchamasali Souharda Pattina Sahakari Ni., | 10,000.00 |
| 91 | RCR-0169 | Pavamana Pattina Souharda Sahakari Ni., | 10,000.00 |

| | | | |
|---|---|---|---|
| 92 | RCR-0179 | Sri Lakshmi Pragathi Pattina Souharda Sahakari Ni., | 10,000.00 |
| 93 | CTG-0082 | davanagere Sri Haalumatha Souharda Pattina Sahakari Ni., | 10,000.00 |
| 94 | BEL-0029 | Pragathi Pattina Souharda Sahakari Ni., | 5,000.00 |
| 95 | BGM-0050 | Sri Jagadguru Adi Renukacharya Rural Credit Souharda Sahakari Ni., | 5,000.00 |
| 96 | BGM-0616 | Basavashree Vividha Uddheshagala Souharda Sahakari Ni., | 5,000.00 |
| 97 | BGU-0059 | Anyonya Souharda Pattina Sahakari Ni., | 5,000.00 |
| 98 | BJP-0100 | Sri Daneshwari Souharda Pattina Sahakari Ni., | 5,000.00 |
| 99 | CKB-0009 | Sri Ganapati Souharda Vividoddesha Sahakari Ni., | 5,000.00 |
| 100 | GDG-0036 | Shivasangama Vividoddeshagala Souharda Sahakari Ni., | 5,000.00 |
| 101 | GDG-0042 | Suvidha Pattina Souharda Sahakari Ni., | 5,000.00 |
| 102 | GLB-0018 | Sri Mahadeva Souharda Pattina Sahakari Ni., | 5,000.00 |
| 103 | GLB-0063 | Sri Srishaila Pattina Souharda Sahakari Ni., | 5,000.00 |
| 104 | GLB-0076 | Jewargi Souharda Pattina Sahakari Ni., | 5,000.00 |
| 105 | HVR-0026 | Shiva Pattina Souharda Sahakari Ni., | 5,000.00 |
| 106 | HVR-0058 | Sri Ramalingeshwara Pattina Souharda Sahakari Ni., | 5,000.00 |
| 107 | KPL-0044 | Sri Basaveshwara Vividoddesha Souharda Sahakari Ni., | 5,000.00 |
| 108 | KPL-0112 | Sri Kamakshi Vividoddesha Souharda Sahakari Ni., | 5,000.00 |
| 109 | KWR-0025 | Adarsha Souharda Sahakari Ni., | 5,000.00 |
| 110 | KWR-0056 | Sri Venkateshwara Vividoddeshagala Souharda Sahakari Ni., | 5,000.00 |
| 111 | MNG-0008 | Ashwini Credit Souharda Sahakari Ni., | 5,000.00 |
| 112 | MNG-0026 | Skanda Souharda Credit Co-operative Ltd., | 5,000.00 |
| 113 | RCR-0006 | Kirana Swasahaya Souharda Sahakari Ni., | 5,000.00 |
| 114 | RCR-0053 | Kammavari Pattina Souharda Sahakari Ni. | 5,000.00 |
| 115 | RCR-0090 | Appaji Vividoddesha Souharda Sahakari Ni., | 5,000.00 |
| 116 | RCR-0103 | Shivayogi Pattina Souharda Sahakari Ni., | 5,000.00 |
| 117 | RCR-0106 | Sri Guru Annadatha Pattina Souharda Sahakari Ni., | 5,000.00 |
| 118 | RCR-0118 | Sri Jeevanajyothi Pattina Souharda Sahakari Ni., | 5,000.00 |
| 119 | RCR-0129 | Shivachethana Pattina Souharda Sahakari Ni., | 5,000.00 |
| 120 | RCR-0132 | Namma Manavi Souharda Pattina Sahakari Ni., | 5,000.00 |
| 121 | RCR-0135 | Neelambika Souharda Sahakari Ni., | 5,000.00 |
| 122 | SMG-0001 | Krishik Souharda Sahakari Niyamita | 5,000.00 |
| 123 | SMG-0004 | Siri Souharda Credit Co-Operative Ltd., | 5,000.00 |

| | | | |
|---|---|---|---|
| 124 | SMG-0023 | Jeevan Souharda Vividoddesha Sahakari Ni., | 5,000.00 |
| 125 | SMG-0087 | Sri Branthesh Vividoddesha Souharda Sahakari Ni., | 5,000.00 |
| 126 | TMK-0058 | Sneha Souharda Pattina Sahakari Ni., | 5,000.00 |
| 127 | TMK-0069 | Sri Matha Vividoddesha Pattina Souharda Sahakari Ni., | 5,000.00 |
| 128 | TMK-0134 | Nolamba Mithrakuta Pattina Souharda Sahakari Ni., | 5,000.00 |
| 129 | UDP-0005 | Ganguli Town Souharda Sahakari Ni., | 5,000.00 |
| 130 | UDP-0051 | Sahaya Souharda Sahakari Ni., | 5,000.00 |
| 131 | UDP-0069 | Adwe Vividoddesha Souharda Sahakari Ni., | 5,000.00 |
| 132 | RCR-0140 | Sri Sameera Sanmitra Pattina Souharda Sahakari Ni., | 5,000.00 |
| 133 | RCR-0145 | Ghanasri Souharda Sahakari Ni., | 5,000.00 |
| 134 | RCR-0152 | Sri Sugureshwara Pattina Souharda Sahakari Ni., | 5,000.00 |
| 135 | TMK-0167 | Sri Vinayaka Vividhoddesha Souharda Sahakari Ni., | 5,000.00 |
| 136 | BEL-0141 | Varshini Pattina Souharda Sahakari Ni., | 5,000.00 |
| 137 | DWD-0090 | Kumbakalpa Souharda Sahakari Ni., | 5,000.00 |
| 138 | KWR-0104 | Sri Maruti Souharda Sahakari Ni., | 5,000.00 |
| 139 | RCR-0171 | Sanvi Souharda Pattina Sahakari Ni., | 5,000.00 |
| 140 | RCR-0177 | Yuva Bharatha Souharda Sahakari Ni., | 5,000.00 |
| 141 | RCR-0181 | Vishwasa Grameena Pattina Souharda Sahakari Ni., | 5,000.00 |
| 142 | YDG-0042 | Shahapura Samruddhi Souharda Sahakari Ni., | 5,000.00 |
| 143 | HVR-0115 | Suvarna Karnataka Pattina Souharda Sahakari Ni., | 5,000.00 |
| 144 | BDR-0121 | Sri Renuka Maaheshwara Pattina Souharda Sahakari Ni., | 5,000.00 |
| 145 | RCR-0216 | Mudgul Pattina Souharda Sahakari Ni., | 5,000.00 |
| 146 | RCR-0228 | Bhoomin Pattina Souharda Sahakari Ni., | 5,000.00 |
| 147 | RCR-0164 | Aniketana Pattina Souharda Sahakari Ni., | 4,000.00 |
| 148 | BGK-0171 | Ranna Alpasankhyathara Souharda Pattina Sahakari Ni., | 3,000.00 |
| 149 | RCR-0189 | Sneha Mahila Souharda Sahakari Ni., | 3,000.00 |
| 150 | MNG-0088 | Grama Samruddhi Souharda Sahakari Ni., | 2,500.00 |
| 151 | BGK-0072 | Sri Rameshwara Souharda Pattina Sahakari Ni., | 2,000.00 |
| 152 | GLB-0058 | Sri Shankar Souharda Pattina Sahakari Ni. | 2,000.00 |
| 153 | KWR-0010 | Modern Education Society Vidyarthi Souharda Sahakari Ltd., | 2,000.00 |
| 154 | KWR-0048 | Vishwakarma Souharda Sahakari Ni., | 2,000.00 |
| 155 | RCR-0136 | Hadapada Rechanna Souharda Pattina Sahakari Ni., | 2,000.00 |

| | | | |
|---|---|---|---|
| 156 | TMK-0033 | Sri Ganga Souharda Credit Cooperative Ltd., | 2,000.00 |
| 157 | UDP-0030 | Vandemataram Vividoddesha Souharda Sahakari Ni., | 2,000.00 |
| 158 | BGM-0985 | Shivayogi Siddeshwara Souharda Sahakari Ni., | 2,000.00 |
| 159 | RCR-0200 | Sri Gangothri Pattana Souharda Sahakari Ni., | 2,000.00 |
| 160 | RCR-0211 | Vivek Pattina Souharda Sahakari Ni., | 2,000.00 |
| 161 | MNG-0085 | B.M.S. Auto Riksha Chaalakara Maalakara Souharda Sahakari Ni., | 2,000.00 |
| 162 | DWD-0093 | Sattura Sri Basaveshwara Souharda Sahakari Ni., | 1,500.00 |
| 163 | BGK-0105 | Tharunasagara Alpasankyathara Vividoddeshagala Souharda Sahakari Ni., | 1,100.00 |
| 164 | BEL-0055 | Swathi Pattina Souharda Sahakari Ni., | 1,000.00 |
| 165 | MNG-0024 | K V G Vividoddesha Souharda Sahakari Ni., | 1,000.00 |
| 166 | KPL-0167 | Sri Shivakrupa Pattina Souharda Sahakari Ni., | 1,000.00 |
| 167 | UDP-0092 | Nethravathi Credit Souharda Sahakari Ni., | 1,000.00 |
| 168 | MNG-0069 | Anugraha Credit Souharda Sahakari Ni., | 500.00 |
| | | | 39,21,946.00 |
| | | By NEFT Amount | 2,19,625.00 |
| | | Grand Total | 41,41,571.00 |


## ಬೇಕಾಗಿದ್ದಾರೆ

ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು ಇದರ ಸುದ್ದಿ ಸಂಗ್ರಹಣೆಗಾಗಿ ಈ ಕೆಳಕಂಡ ಹುದ್ದೆಗಳಿಗೆ ಅರ್ಹ ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ತಮ್ಮ ವಿದ್ಯಾರ್ಹತೆ ಹಾಗೂ ಅನುಭವಗಳೊಂದಿಗೆ ತಮ್ಮ ಅರ್ಜಿಗಳನ್ನು ದಿನಾಂಕ 20ನೇ ಅಕ್ಟೋಬರ್ 2019ರ ಒಳಗಾಗಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು ಕೇರ್ ಆಫ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ನಿರ್ಮಾಣ ಭವನ, ಡಾ. ರಾಜ್ ಕುಮಾರ್ ರಸ್ತೆ, 1ನೇ ಬ್ಲಾಕ್ ರಾಜಾಜಿನಗರ, ಬೆಂಗಳೂರು – 560010, ಇವರಿಗೆ ಆ ಕ್ಷೇತ್ರದ ಅನುಭವ ಹಾಗೂ ಸ್ವ–ವಿವರಗಳೊಂದಿಗೆ ಅರ್ಜಿ ಸಲ್ಲಿಸಲು ತಿಳಿಸಿದೆ.

ಹುದ್ದೆಗಳ ವಿವರಗಳು

1. ಛಾಯಾ ಗ್ರಾಹಕ (Cameramen) - 01 ಹುದ್ದೆ
2. ನಿರೂಪಕ / ವರದಿಗಾರ ( Anchor / Reporter) - 01 ಹುದ್ದೆ
3. ಸಂಕಲನಕಾರರು (Editor) - 01 ಹುದ್ದೆ
4. ಸಹಾಯಕರು (Assistant) - 01 ಹುದ್ದೆ

ಸಹಿ/–
ವ್ಯವಸ್ಥಾಪಕ ನಿರ್ದೇಶಕರು (ಅಧಿಕ ಪ್ರಭಾರ)
ಕ,ರಾ.ಬ.ಸು.ಮಾ.ಸ.ಮ.ನಿ., ಬೆಂಗಳೂರು.

## ಇ–ಸ್ಟಾಂಪಿಂಗ್ ಉದ್ಘಾಟನಾ ಕಾರ್ಯಕ್ರಮ




**ಉತ್ತರ ಕನ್ನಡ:** ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ನಿಯಮಿತ, ಶಿರಸಿ ಇದರ ಹಾವೇರಿ ಶಾಖೆಯಲ್ಲಿ ದಿನಾಂಕ 23.08.2019 ರಂದು ಸಹಕಾರಿಯ ಮೊದಲ ಇ–ಸ್ಟಾಂಪಿಂಗ್ ಸೇವೆಯ ಸೌಲಭ್ಯವನ್ನು ಪ್ರಾರಂಭಿಸಲಾಯಿತು. ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ,. ಬೆಂಗಳೂರು ಇದರ ನಿರ್ದೇಶಕರು ಹಾಗೂ ಹಿರಿಯ ಸಹಕಾರಿ ಧುರೀಣರಾದ ಹಾನಗಲ್‌ನ ಶ್ರೀ ಮಾರುತಿ ಬಿ ಕಲಾಲ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಬಹಳಷ್ಟು ಸಹಕಾರಿಗಳು ಇ–ಸ್ಟಾಂಪಿಂಗ್ ಕೇಂದ್ರವನ್ನು ಕೇವಲ ಲಾಭದ ಉದ್ದೇಶದಿಂದ ಮಾತ್ರ ನೋಡುತ್ತವೆ. ಕೇವಲ ಲಾಭಗಳಿಸುವುದೊಂದೇ ಸೌಹಾರ್ದ ಸಹಕಾರಿಗಳ ಉದ್ದೇಶವಾಗಿರದೆ ಸದಸ್ಯರಿಗೆ ಪರಿಣಾಮಕಾರಿಯಾಗಿ ಸೇವೆ ಒದಗಿಸುವುದಾಗಿರಬೇಕು. ಉತ್ತಮ ಗುಣಮಟ್ಟದ ಸೇವೆಯನ್ನು ನೀಡುವ ಮೂಲಕ ಲಾಭದತ್ತ ಮುನ್ನಡೆಯಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ,. ಬೆಂಗಳೂರು ಇದರ ಉತ್ತರ ಕನ್ನಡ ಜಿಲ್ಲಾ ನಿರ್ದೇಶಕರು ಹಾಗೂ ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ನಿ,. ಶಿರಸಿ ಇದರ ಅಧ್ಯಕ್ಷರಾದ ಶ್ರೀಮತಿ ಸರಸ್ವತಿ ಎನ್ ರವಿ ವಹಿಸಿದ್ದರು. ನಂತರ ಮಾತನಾಡಿ ಈ ಭಾಗದಲ್ಲಿ ಸದಸ್ಯರಿಗೆ ಇ–ಸ್ಟಾಂಪಿಂಗ್ ಹೆಚ್ಚು ಅವಶ್ಯಕತೆಯಿದೆ ಎಂಬ ಹಿನ್ನೆಲೆಯಲ್ಲಿ ಹಾವೇರಿ ಶಾಖೆಯಲ್ಲಿ ಪ್ರಥಮ ಬಾರಿಗೆ ಇ–ಸ್ಟಾಂಪಿಂಗ್ ಸೇವೆಯನ್ನು ನೀಡುವ ಪ್ರಯತ್ನಕ್ಕೆ ಕೈಹಾಕಿದ್ದೇವೆ. ಸದಸ್ಯರ ಅಗತ್ಯತೆಯನ್ನು ಪೂರೈಸುವುದು ಸಹಕಾರಿಯ ಮೊದಲ ಜವಾಬ್ದಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ ನಮ್ಮ ಸಹಕಾರಿ ಇದನ್ನು ಒಂದು ಸೇವೆಯೆಂದು ಪರಿಗಣಿಸಿ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಲಿದೆ. ಇದಕ್ಕೆ ತಮ್ಮೆಲ್ಲರ ಸಹಕಾರ ಅಗತ್ಯ ಎಂದರು. ಪ್ರಾರಂಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀಮತಿ ಹೇಮಲತಾ ಚೌಗಲೆ ಅತಿಥಿಗಳನ್ನು ಸ್ವಾಗತಿಸಿದರು. ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಗಣಪತಿ ನಾಯ್ಕ ಪ್ರಾಸ್ತವಿಕವಾಗಿ ಮಾತನಾಡಿದರು.

## ಸನ್ಮಾನ



**ವಿಜಯಪುರ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರಿನ ನಿರ್ದೇಶಕರಾದ ವಿಶ್ವನಾಥ ಹಿರೇಮಠ ರವರನ್ನು ವೀರಶೈವ ಲಿಂಗಾಯತ ಸೌಹಾರ್ದ ಸಹಕಾರಿ ನಿಯಮಿತ, ಜಲನಗರ, ಇವರು ಸನ್ಮಾನವನ್ನು ನೆರವೇರಿಸಿದರು.

ಸನ್ಮಾನವನ್ನು ಸಹಕಾರಿಯ ಉಪಾಧ್ಯಕ್ಷರಾದ ಚನ್ನಬಸವಯ್ಯ ಸಿದ್ರಾಮಯ್ಯ ಹಿರೇಮಠ ನಿರ್ದೇಶಕರುಗಳಾದ ಅರುಣಕುಮಾರ ಮಠ, ಶಾತಯ್ಯ ಡೋಣೋರಮಠ, ಮಹಾದೇವಯ್ಯ ಗಚ್ಚಿನಮಠ ಹಾಗೂ ಗೌರವ ಅಧ್ಯಕ್ಷರಾದ ಬಸವರಾಜ ಚೌಕಿಮಠ, ಮುಖ್ಯ ಕಾರ್ಯನಿರ್ವಾಹಕ ಗುರುನಾಥ ಅಂಗಡಿ, ಬಗಳಾಮುಖಿದೇವಿ ಮಹಿಳಾ ಪತ್ತಿನ ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಾಹಕರಾದ ಸುರೇಶ ಬಡಿಗಾರ ಇತರರು ಉಪಸ್ಥಿತರಿದ್ದರು.



**ಬ್ರಹ್ಮಾವರ:** ಮಾತೃಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿಗೆ 2018–19ನೇ ಸಾಲಿನ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಸಾಧನಾ ಪ್ರಶಸ್ತಿ ಲಭಿಸಿದೆ. ಅವಿಭಜಿತ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಒಟ್ಟು 206 ಸೌಹಾರ್ದ ಸಹಕಾರಿಗಳ ಪೈಕಿ ಇತಿಹಾಸದಲ್ಲಿ ಮೊದಲ ಬಾರಿಗೆ ಮಾತೃಶ್ರೀ ಸೌಹಾರ್ದ ಸಹಕಾರಿಯು ಈ ಪ್ರಶಸ್ತಿಗೆ ಭಾಜನವಾಯಿತು. ಬ್ಯಾಂಕಿಂಗ್ ವ್ಯವಹಾರದೊಂದಿಗೆ ಇ–ಸ್ಟ್ಯಾಂಪ್ ಇತರ ಸೇವಾ ಸೌಲಭ್ಯಗಳನ್ನು ನೀಡಿ ಸರ್ವತೋಮುಖ ಪ್ರಗತಿಯನ್ನು ಸಾಧಿಸಿರುವುದನ್ನು ಗಮನಿಸಿ ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು.

ಸಹಕಾರಿಯ ಅಧ್ಯಕ್ಷರಾದ ಶ್ರೀ ಅಶೋಕ್ ಕುಮಾರ್ ಶೆಟ್ಟಿ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಚರಣ್ ಶೆಟ್ಟಿಯವರು ಎಸ್‌ಸಿಡಿಸಿಸಿ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀಯುತ ಡಾ.ಎಮ್.ಎನ್ ರಾಜೇಂದ್ರ ಕುಮಾರ್‌ರವರಿಂದ ಪ್ರಶಸ್ತಿ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರಾದ ಶ್ರೀ ಕೆ. ರವಿರಾಜ್ ಹೆಗ್ಡೆ, ಶ್ರೀಮತಿ ಜಾನಕಿ ಹಂದೆ ಮತ್ತು ಶ್ರೀಮತಿ ವಂದನಾ ಸದಾಶಿವ ಶೆಟ್ಟಿಯವರು ಉಪಸ್ಥಿತರಿದ್ದರು.

## ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಗೆ ಮಾನ್ಯ ಸಚಿವರ ಹಾಗೂ ಸಂಸದರ ಭೇಟಿ,



**ಬೀದರ:** ದಿನಾಂಕ 25 ಸೆಪ್ಟೆಂಬರ್ 2019ರ ಗುರುವಾರ ದಂದು ಬೀದರ ನಗರದಲ್ಲಿನ ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿ., ಕರ್ನಾಟಕ ರಾಜ್ಯ ಸರ್ಕಾರದ ಮಹಿಳಾ ಮತ್ತು ಮಕ್ಕಳ ಸಚಿವೆ ಶ್ರೀಮತಿ ಶಶಿಕಲಾ ಜೋಲ್ಲೆ ಹಾಗೂ ಸಂಸತ ಸದಸ್ಯರಾದ ಶ್ರೀ ಅಣ್ಣಾಸಾಹೇಬ ಜೋಲ್ಲೆ ಭೇಟಿ ನೀಡಿದರು. ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಮಹಾಮಂಡಳದ ರಾಜ್ಯಾಧ್ಯಕ್ಷರು ಹಾಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಅವರು ಮಾನ್ಯ ಸಚಿವರಿಗೆ ಆತ್ಮೀಯವಾಗಿ ಸ್ವಾಗತ ಕೋರಿದರು.

ಸಹಕಾರಿಯ ಆಡಳಿತ ಮಂಡಳಿಯ ವತಿಯಿಂದ ಮಾನ್ಯ ಸಚಿವರಿಗೆ ಹಾಗೂ ಸಂಸದರಿಗೆ ಆತ್ಮೀಯವಾಗಿ ಸನ್ಮಾನಿಸಲಾಯಿತ್ತು. ಮಾನ್ಯ ಸಚಿವರಾದ ಶ್ರೀಮತಿ ಶಶಿಕಲಾ ಜೋಲ್ಲೆ ಸನ್ಮಾನ ಸ್ವೀಕರಿಸಿ ಮಾತನಾಡಿ ಇಂದು ಶಾಸಕ, ಸಂಸತ ಸದಸ್ಯ ಹಾಗೂ ಸಚಿವ ಸ್ಥಾನ ಸಿಕ್ಕಿರುವುದು ಸಹಕಾರ ಕ್ಷೇತ್ರದಲ್ಲಿನ ಸೇವೆ ಹಾಗೂ ಸಾಮಾಜಿಕ ಸೇವೆಯ ಕಾರಣ ಎಂದು ನುಡಿದರು. ಸಹಕಾರಿ ಕ್ಷೇತ್ರವು ಪವಿತ್ರವಾಗಿದೆ. ಇದರ ಮೂಲಕ ಆರ್ಥಿಕವಾಗಿ ಹಿಂದುಳಿದ ಜನರನ್ನು ಮುಖ್ಯವಾಹಿನಿಗೆ ತರುವಲ್ಲಿ ಪ್ರಮುಖ ಸೇವೆ ಇದಾಗಿದೆ ಎಂದರು. ಬೀದರ ಜನತೆಗೆ ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯು ಆರ್ಥಿಕವಾಗಿ ಹಿಂದುಳಿದ ಜನರಿಗೆ ಉತ್ತಮ ಸೇವೆ ನೀಡಿ ಸದಸ್ಯರ ಮೆಚ್ಚುಗೆಗೆ ಪಾತ್ರವಾಗಿದೆ. ಸಹಕಾರಿಯ ಅಧ್ಯಕ್ಷರಾದ ಗುರುನಾಥ ಜ್ಯಾಂತಿಕರ್ ಸಹಕಾರಿಯ ಕ್ಷೇತ್ರಕ್ಕೆ ಅನನ್ಯ ಕೊಡುಗೆ ನೀಡಿದಾರೆ. ರಾಜ್ಯದಲ್ಲಿ ಸಹಕಾರಿಯ ಬೆಳವಣಿಗೆಯಲ್ಲಿ ಅವರ ಪರಿಶ್ರಮ ಅಡಗಿದೆ ಎಂದರು. ಸಹಕಾರಿಗೆ ಕರೆಸಿ ಆತ್ಮೀಯ ಸ್ವಾಗತಿಸಿ ಸನ್ಮಾನಿಸದ ಅಧ್ಯಕ್ಷರಿಗೆ ಆಡಳಿತ ಮಂಡಳಿಗೆ ಧನ್ಯವಾದಗಳು ತಿಳಿಸಿದರು. ಸಚಿವರ ಭೇಟಿಯ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಬಸವರಾಜ ಸ್ವಾಮಿ, ನಿರ್ದೇಶಕರಾದ ಶ್ರೀ ಚಂದ್ರಪ್ಪ ಬಿರಾದರ, ಶ್ರೀ ರಾಜಕುಮಾರ ಧೂಮನ್ನಸೂರೆ, ಮತ್ತು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ್, ನಿರ್ದೇಶಕರಾದ ಶ್ರೀ ಶಿವಾನಂದ ಮಂಠಾಳಕರ್ ಶ್ರೀ ಶಿವಬಸಪ್ಪ ಚನ್ನಮಲ್ಲೆ, ಶ್ರೀ ಜಗನಾಥ ಕರಂಜೆ, ಶ್ರೀ ಸಂ–ಜಯ ಕ್ಯಾಸಾ, ಶ್ರೀಮತಿ ಸವಿತಾ ಜಿ.ಕೆ. ಶ್ರೀ ಸೂರ್ಯಕಾಂತ ಮಠಪತಿ, ಶ್ರೀ ಬಾಬುರಾವ ಕಾರಬಾರಿ, ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಅಮೃತ ಹೊಸಮನಿ ಹಿರಿಯ ಸಹಕಾರಿಗಳು ಮತ್ತು ಸಹಕಾರಿಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದರು

## ಆಯುಷ್ಮಾನ್ ಕಾರ್ಡ್



**ಮೂಡಬಿದಿರೆ:** ಶ್ರೀ ಪಂಚಶಕ್ತಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮೂಡಬಿದಿರೆ ಸಹಕಾರಿಯ ವತಿಯಿಂದ ಸ್ವ ಸಹಾಯ ಸಂಘದ ಸದಸ್ಯರಿಗೆ ಕೇಂದ್ರ ಸಹಕಾರದ ಆಯುಷ್ಮಾನ್ ಕಾರ್ಡ್ ಉಚಿತವಾಗಿ ವಿತರಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಉಮನಾಥ ಕೋಟ್ಯಾನ್ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ರಂಜಿತ್ ಪೂಜಾರಿ ವಹಿಸಿದರು. ಮೂಡಬಿದಿರೆ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಶಶಿಕಲಾ ಆಯುಷ್ಮಾನ್ ಕಾರ್ಡ್‌ನ ಸೌಲಭ್ಯದ ಬಗ್ಗೆ ಮಾಹಿತಿ ನೀಡಿದರು. ಬ್ರಹ್ಮಶ್ರೀ ಗುರುನಾರಾಯಣ ಸ್ವಾಮಿ ಸೇವಾ ಸಂಘದ ಅಧ್ಯಕ್ಷ ಶ್ರೀ ಪಿ.ಕೆ. ಪೂಜಾರಿ, ಸಹಕಾರಿಯ ಶಾಖಾಧಿಕಾರಿ ರಾಜಶೇಖರ ಮಧ್ಯಸ್ಥ ಅವರು ಉಪಸ್ಥಿತರಿದ್ದರು. ಸ್ವ ಸಹಾಯ ಸಂಘದ ಒಟ್ಟು 500 ಮಂದಿ ಸದಸ್ಯರಿಗೆ ಉಚಿತವಾಗಿ ಕಾರ್ಡ್ ವಿತರಿಸಲಾಯಿತು.

## ಉದ್ಘಾಟನಾ ಕಾರ್ಯಕ್ರಮ



**ಗೌರಿಬಿದನೂರು** : ದಿನಾಂಕ 09.09.2019 ರಂದು ಶೈವ ಸೌಹಾರ್ದ ಸಹಕಾರಿ ನಿ,. ಗೌರಿಬಿದನೂರು ಇದರ ಉದ್ಘಾಟನಾ ಕಾರ್ಯಕ್ರಮ ನಡೆಯಿತು, ಕಾರ್ಯಕ್ರಮದ ಉದ್ಘಾಟನೆಯನ್ನು ಡಾ. ಶ್ರೀ ಶ್ರೀ ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳು ನೆರವೇರಿಸಿದರು, ಅಧ್ಯಕ್ಷತೆಯನ್ನು ಶ್ರೀ ಎಸ್,ಎಚ್ ಶಿವಶಂಕರ ರೆಡ್ಡಿ, ಮಾಜಿ ಕೃಷಿ ಸಚಿವರು ಹಾಗೂ ಶಾಸಕರು ಗೌರಿಬಿದನೂರು ಕ್ಷೇತ್ರ ಮತ್ತು ಶ್ರೀ ಹರೀಶ್, ಅಧ್ಯಕ್ಷರು ಶೈವ ಸೌಹಾರ್ದ ಸಹಕಾರಿ ನಿ,. ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಶ್ರೀ ಬಿ,ಎಸ್ ಪರಮಶಿವಯ್ಯ, ಅಧ್ಯಕ್ಷರು ವೀರಶೈವ ಸಹಕಾರಿ ಬ್ಯಾಂಕ್ ನಿ,. ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ,ಎಸ್ ರವರು ಭಾಗವಹಿಸಿದ್ದರು.

# ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

ಶ್ರೀ ಪಂಚಶಕ್ತಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,
ಮೂಡುಬಿದಿರೆ



ಶ್ರೀ ರಂಜಿತ್ ಪೂಜಾರಿ
ಅಧ್ಯಕ್ಷರು



ಶ್ರೀಮತಿ ಉಷಾ
ಉಪಾಧ್ಯಕ್ಷರು

ಬಾಗಲಕೋಟೆ ಬಸವಶ್ರೀ ಪತ್ತಿನ ಸೌಹಾರ್ದ ಸಹಕಾರಿ ನಿ.,
ಬಾಗಲಕೋಟೆ



ಶ್ರೀ ರಾಜಶೇಖರ
ಶಿ.ಪಾಟೀಲ
ಅಧ್ಯಕ್ಷರು



ಶ್ರೀ ಸಂಜಯ (ರಾಜು)
ವ್ಹಿ ಪಲ್ಲೇದ
ಉಪಾಧ್ಯಕ್ಷರು



ಗದಗ: ಶಿವಸಂಗಮ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿಯಮಿತ ಗದಗ ಇದರ ನೂತನ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಸಹಕಾರಿಯ ಅಧ್ಯಕ್ಷರಾಗಿ ಶ್ರೀ ಶ್ರೀ ವೀರಯ್ಯ ಎಸ್ ಶಿವಕಾಳಿಮಠ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಮಹೇಶ ಜಿ ಗಾಣಿಗೇರ ಇವರು ಆಯ್ಕೆಯಾಗಿದ್ದಾರೆ. ನಿರ್ದೇಶಕರುಗಳಾಗಿ ಶ್ರೀ ಎಮ್ ಬಿ ಅಂಗದಾಳ, ಶ್ರೀ ಜಿ ಬಿ ಗಾಣಿಗೇರ, ಶ್ರೀ ಪಿ ಜೆ ದೇಸಾಯಿಮಠ, ಶ್ರೀ ಸುರೇಶ ಎಮ್ ಸರ್ವಿ, ಶ್ರೀ ಪಿ ಎಮ್ ಅಂಗದಾಳ, ಶ್ರೀಮತಿ ಸರೋಜಾ ಎಮ್ ಲಂಗದಾಳ, ಶ್ರೀಮತಿ ಶೋಭಾ ಎಸ್ ಶಿವಕಾಳಿಮಠ, ಶ್ರೀಮತಿ ಗೀತಾ ಜಿ ಪಲ್ಲೆದ, ಶ್ರೀಮತಿ ಕವಿತಾ ಪಿ ದೇಸಾಯಿಮಠ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

ದಿ ಪ್ರವರ್ತನ ಸೌಹಾರ್ದ ಪತ್ತಿನ ಸಹಕಾರಿ ನಿ., ಕೋಲಾರ



ಶ್ರೀ ಜೀವನ್ ಪ್ರಕಾಶ್ ಎನ್
ಅಧ್ಯಕ್ಷರು



ಮಂಜುಳ ಸಿ.ಆರ್
ಉಪಾಧ್ಯಕ್ಷರು



ದಾವಣಗೆರೆ: ಸನ್ಮತಿ ಸೌಹಾರ್ದ ಸಹಕಾರಿ ನಿಯಮಿತ, ದಾವಣಗೆರೆ ಇದರ ಸಂಸ್ಥಾಪಕ ಅಧ್ಯಕ್ಷರಾದ ಟಿ.ಎಮ್.ಪಾಲಾಕ್ಷ ರವರು ದಾವಣಗೆರೆ ಜಿಲ್ಲಾ ಸೌಹಾರ್ದ ಒಕ್ಕೂಟ ನಿಯಮಿತ, ಇದರ ನಿರ್ದೇಶಕರಾಗಿ ಆಯ್ಕೆಯಾಗಿರುತ್ತಾರೆ. ಇವರನ್ನು ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಸನ್ಮಾನಿಸಿದರು.




ಮೈಸೂರು: ಮೈಸೂರು ಜಿಲ್ಲಾ ಛಾಯಾ ಸ್ನೇಹ ಸೌಹಾರ್ದ ಸಹಕಾರಿ ನಿಯಮಿತ ಇದರ ನೂತನ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಸಹಕಾರಿಯ ಅಧ್ಯಕ್ಷರಾಗಿ ಶ್ರೀ ಎಂ.ಎಸ್. ರಾಜೇಂದ್ರ ಕುಮಾರ್ ಮತ್ತು ಉಪಾಧ್ಯಕ್ಷರಾಗಿ ಶ್ರೀ ಸಿ. ಅಭಿನಂದನ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ನಿಮ್ಮ ಪ್ರಶ್ನೆ



## ನಮ್ಮ ಉತ್ತರ

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ.

– ಸಂಪಾದಕರು

### ವೃತ್ತಿಪರ ನಿರ್ದೇಶಕರ ಹಕ್ಕು ಬಾಧ್ಯತೆಗಳು

ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 24(1) ರನ್ವಯ ಪ್ರತಿಯೊಂದು ಸಹಕಾರಿಯು ಬ್ಯಾಂಕಿಂಗ್, ವ್ಯವಸ್ಥಾಪನೆ, ಹಣಕಾಸು, ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಹಕಾರಿಯು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರ ಯಾವುದೇ ಕ್ಷೇತ್ರದಲ್ಲಿ ಪರಿಣಿತಿಯನ್ನು ಹೊಂದಿರುವ ವ್ಯಕ್ತಿಗಳನ್ನು, ಅಂಥ ಸಹಕಾರಿಯ ಮಂಡಲಿಯ ಸದಸ್ಯರನ್ನಾಗಿ ಸಹಮತದಿಂದ ಸೇರಿಸತಕ್ಕದ್ದು. ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರು ಅಂತಹ ಸದಸ್ಯರ ಸ್ಥಾನ ಬಲದಿಂದ ಸಹಕಾರಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುವುಳ್ಳವರಾಗಿತಕ್ಕದ್ದಲ್ಲ ಅಥವಾ ಮಂಡಲಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ.

**1. ವೃತ್ತಿಪರ ನಿರ್ದೇಶಕರನ್ನು ಸಹಕಾರಿಯ ಆಡಳಿತ ಮಂಡಲಿಯ ಸಭೆಗೆ ಆಹ್ವಾನಿಸಬಹುದೇ.?**

ಉತ್ತರ: ಸಹಕಾರಿಯ ಆಡಳಿತ ಮಂಡಲಿಯ ಸಭೆಗೆ ವೃತ್ತಿಪರ ನಿರ್ದೇಶಕರನ್ನು ಆಹ್ವಾನಿಸಬಹುದಾಗಿದೆ

**2. ವೃತ್ತಿಪರ ನಿರ್ದೇಶಕರಿಗೆ ಆಡಳಿತ ಮಂಡಲಿ ಸಭೆಯ ವಿಷಯ ಸೂಚಿಯನ್ನು ನೀಡಬೇಕಾಗಿರುತ್ತದೆಯೇ.?**

ಉತ್ತರ: ಆಡಳಿತ ಮಂಡಲಿ ಸಭೆಯ ವಿಷಯಸೂಚಿಯನ್ನು ವೃತ್ತಿಪರ ನಿರ್ದೇಶಕರಿಗೆ ನೀಡಬೇಕಾಗಿರುತ್ತದೆ.

**3. ವೃತ್ತಿಪರ ನಿರ್ದೇಶಕರನ್ನು ಸಹಕಾರಿಯ ಉಪಸಮಿತಿಗಳಿಗೆ ಸೇರಿಸಿಕೊಳ್ಳಬಹುದೇ.?**

ಉತ್ತರ: ವೃತ್ತಿಪರ ನಿರ್ದೇಶಕರನ್ನು ಸಹಕಾರಿಯ ಉಪಸಮಿತಿಗಳಿಗೆ ಸೇರಿಸಿಕೊಳ್ಳಬಹುದು.

**4. ವೃತ್ತಿಪರ ನಿರ್ದೇಶಕರಿಗೆ ಸಭಾ ಭತ್ಯೆ/ ಪ್ರಯಾಣ ಭತ್ಯೆ ನೀಡಬೇಕಾಗಿರುತ್ತದೆಯೇ. ?**

ಉತ್ತರ: ವೃತ್ತಿಪರ ನಿರ್ದೇಶಕರಿಗೆ ಸಭಾ ಭತ್ಯೆ/ ಪ್ರಯಾಣ ಭತ್ಯೆ ನೀಡಬೇಕಾಗಿರುತ್ತದೆ.

**– ಶ್ರೀ ಭಾರತೀ ಸೌಹಾರ್ದ ಸಹಕಾರಿ ನಿ.,**

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ:–6,979, ಬೆಂಗಳೂರು:–1,496, ಮೈಸೂರು:–772 ಹಾಗೂ ಕಲಬುರಗಿ :–1812 ವಿಭಾಗಗಳಿಂದ ದಾಖಲಾದ ದಾವಾ ಪ್ರಕರಣಗಳ ಒಟ್ಟು 11,059 ಆಗಿರುತ್ತದೆ. ಇವುಗಳ ಪೈಕಿ 5,392 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 5,667.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2,065 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 203 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 141 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 1721 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 977 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 80 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 82 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 815 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

## ಶಾಸನಾತ್ಮಕ ಕಾರ್ಯಚಟುವಟಿಕೆಗಳು :

**1. ಕೊಡಗು ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಡಿಕೇರಿ (ಎಮ್‌ಡಿಕೆ–0001)**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಾಯ್ದೆ ಕಲಂ 25(1)(ಇ) ಪ್ರಾವದಾನದಂತೆ ಯಾವುದೇ ಸಮಯದಲ್ಲಿ ನಿರ್ದೇಶಕರು ತಾನು ತೆಗೆದು ಕೊಂಡಿದ್ದ ಸಾಲದ ಯಾವುದೇ ಕಂತನ್ನು ಮರು ಸಂದಾಯ ಮಾಡಲು ತಪ್ಪಿರುವ ಹಾಗೂ ಸಾಲದ ನಿರಂತರ ಮೂರು ಕಂತುಗಳನ್ನು ಮರು ಸಂದಾಯ ಮಾಡಲು ತಪ್ಪಿದ್ದ ಸಾಲಗಾರನೊಬ್ಬನಿಗೆ ಜಾಮೀನುದಾರರಾಗಿರುವ ಹಿನ್ನಲೆಯಲ್ಲಿ ಸಹಕಾರಿಯ ಮಾಜಿ ಅಧ್ಯಕ್ಷರು ಹಾಗೂ 06 ಆಡಳಿತ ಮಂಡಲಿಯ ನಿರ್ದೇಶಕರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯ ನಿರ್ಣಯದಂತೆ ಅನರ್ಹತೆಯ ಆದೇಶ ಮಾಡಲಾಗಿದೆ

**2. ಶ್ರೀ ಬಸವೇಶ್ವರ ವಿವಿಧ ಉದ್ದೇಶಗಳ ಸೌಹರ್ದ ಸಹಕಾರಿ ನಿ., ಚಿಕ್ಕೋಡಿ. (ಬಿಜಿಎಮ್–0473)**

ಸಹಕಾರಿಯ ವಿರುದ್ದ ಠೇವಣಿದಾರರು ತಮ್ಮ ಠೇವಣಿ ಹಣವನ್ನು ಮರುಪಾವತೀಸದ ಕುರಿತು ಸಂಯುಕ್ತ ಸಹಕಾರಿಗೆ ಸಲ್ಲಿಸಿರುವ ದೂರಿನನ್ವಯ ಸಂಯುಕ್ತ ಸಹಕಾರಿಯಿಂದ ದಿನಾಂಕ:26.06.2019ರಂದು ಮಾನ್ಯ ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಕ್ಕೋಡಿಯಲ್ಲಿ ಹಾಗೂ ಪೊಲೀಸ್ ಠಾಣೆಯಲ್ಲಿ CC.No.238/2019 ದಾಖಲಿಸಿರುವ ಪ್ರಕರಣವನ್ನು ಪ್ರಸ್ತುತ ಹಾಗೂ ಹಳೆಯ ಆಡಳಿತ ಮಂಡಲಿ ಹಾಗೂ ಸಿಬ್ಬಂದಿಯನ್ನೂಳಗೊಂಡ 48 ಸದಸ್ಯರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.

# ಪಾಲು ಬಂಡವಾಳ ಸಂಗ್ರಹಿಸದೆ, ಒಂದು ಸಹಕಾರ ಸಂಸ್ಥೆಯನ್ನು ನೋಂದಾಯಿಸಬಹುದೇ? – ಒಂದು ವಿಮರ್ಷೆ

– ಸಿ.ಎನ್.ಪರಶಿವಮೂರ್ತಿ

ಸದಸ್ಯರೇ ಸಹಕಾರ ಸಂಸ್ಥೆಯ ಬಂಡವಾಳ, ಸದಸ್ಯರ ಪಾಲು ಬಂಡವಾಳವೇ ಸಹಕಾರ ಸಂಸ್ಥೆ ಜೀವಾಳ, ಪಾಲು ಬಂಡವಾಳವೇ ಸಂಸ್ಥೆಯ ಆರ್ಥಿಕ ಸಬಲತೆಗೆ ಆಧಾರ ದುಡಿಯುವ ಬಂಡವಾಳವೇ ಸಹಕಾರ ಸಂಸ್ಥೆಯ ಶಕ್ತಿಸದಸ್ಯರ ಹಕ್ಕು ಭಾದ್ಯತೆ ಚಲಾಯಿಸಲು, ಆ ಸಹಕಾರ ಸಂಸ್ಥೆಯ ಹಕ್ಕು ಜವಾಬ್ದಾರಿ ನಿರ್ವಹಿಸಲುಮತ್ತು ಸಂಸ್ಥೆಯ ಸೌಲತ್ತುಗಳನ್ನು ಪಡೆಯಲು ಪಾಲು ಬಂಡವಾಳವೇ ಆಧಾರ ಸದಸ್ಯರ ಪಾಲು ಬಂಡವಾಳವಿಲ್ಲದ ಸಂಸ್ಥೆ ಅಸ್ತಿತ್ವ ಸಹಕಾರ ತತ್ವಕ್ಕೆ ವಿರುದ್ಧ.

ಸಹಕಾರ ಸಂಸ್ಥೆಯ, ಮೂಲ ಉದ್ದೇಶ "ಎಲ್ಲರಿಗಾಗಿ ನಾನು, ನನಗಾಗಿ ಎಲ್ಲರೂ" ಎಂಬ ಮೂಲ ತತ್ವದ ಜೊತೆಗೆ "ಸಮಾನ ಮನಸ್ಕರು, ತಮ್ಮ ಅತ್ಯಲ್ಪ ಸಂಪನ್ಮೂಲವನ್ನು ಕ್ರೋಢೀಕರಿಸಿ, ತಮ್ಮ ಆರ್ಥಿಕ ಬೆಳವಣಿಗೆಗಾಗಿ ರಚಿಸಿಕೊಂಡ ಒಂದು ಸಂಸ್ಥೆ". ಅಂದರೆ ಒಂದು ಸಹಕಾರ ಸಂಸ್ಥೆ ಧರ್ಮ ಸಂಸ್ಥೆಯಲ್ಲಿ, ಅದು ಒಂದು ಆರ್ಥಿಕ ಸಂಸ್ಥೆ. ಇದಕ್ಕೆ ಪೂರಕವಾಗಿ ಅಂತರ ರಾಷ್ಟ್ರೀಯ ಸಹಕಾರ ಒಕ್ಕೂಟ ಪ್ರಾರಂಭದಲ್ಲಿ ಆರು ಸಹಕಾರ ತತ್ವಗಳನ್ನು ರೂಪಿಸಿದೆ. ಅದರಂತೆ (1) ಸ್ವಯಂ ಪ್ರೇರಿತ ಮುಕ್ತ ಸದಸ್ಯತ್ವ (2) ಪ್ರಜಾಸತ್ತಾತ್ಮಕ ನಿಯಂತ್ರಣ (3) ಸಮಾನ ಲಾಭ ಹಂಚಿಕೆ (4) ಬಂಡವಾಳದ ಮೇಲೆ ಮಿತವಾದ ಬಡ್ಡಿ (5) ಸಹಕಾರ ಶಿಕ್ಷಣ (6) ಸಹಕಾರಿಗಳಲ್ಲಿ ಸಹಕಾರ. ಏಳನೇ ತತ್ವವಾಗಿ 1995 ರಲ್ಲಿ ಸಮಾಜಿಕ ಕಳಕಳಿ ಎಂಬ ತತ್ವವನ್ನು ಅಂತರ ರಾಷ್ಟ್ರೀಯ ಸಹಕಾರ ಒಕ್ಕೂಟ ಸೇರಿಸಿದೆ.

ಈ ಲೇಖನದ ಉದ್ದೇಶಕ್ಕಾಗಿ ಮೊದಲು ಸಹಕಾರಿ ತತ್ವಗಳನ್ನು ಪರಿಶೀಲಿಸೋಣ. (1) ಸ್ವಯಂ ಪ್ರೇರಿತ ಮತ್ತು ಸದಸ್ಯತ್ವ – ವ್ಯಕ್ತಿಯ ಅವಶ್ಯಕತೆಯನ್ನು ಪಡೆಯಲು ಮತ್ತು ಯಾರ ಒತ್ತಡಕ್ಕೂ ಒಳಗಾಗದೆ ಸೇವೆ ಪಡೆಯಲು ಸದಸ್ಯತ್ವ ಪಡೆದ ವ್ಯಕ್ತಿ. ಸದಸ್ಯತ್ವವೆಂದರೆ ಒಂದು ಸಹಕಾರ ಸಂಸ್ಥೆಯ ಸದಸ್ಯತ್ವಕ್ಕೆ ನಿಗದಿ ಪಡಿಸಿದ ಪಾಲು ಬಂಡವಾಳ, ಸಹಕಾರ ಸಂಘಗಳ ನಿಯಮ 1960ರ, ನಿಯಮ 5(1)(ಡಿ) ಅಡಿ ಗರಿಷ್ಟ ಪ್ರಮಾಣದ ಪಾಲುಬಂಡವಾಳ ನಿಗದಿ ಪಡಿಸಲು ಸೂಚಿಸಿದೆ. (ಕರ್ನಾಟಕ ಸೌಹಾರ್ದ ಕಾಯಿದೆ 1997ರ ಕಲಂ.10 2(XI) ಮತ್ತು (XVII) ರಲ್ಲಿ ಪಾಲು ಬಂಡವಾಳದ ಬಿನ್ನ ಉಲ್ಲೇಖ ಇದೆ.) ಕನಿಷ್ಠ ಒಂದು ಷೇರನ್ನಾದರೂ ಪಡೆದಿರಬೇಕೆಂಬ ಶರತ್ತುಗೊಳಪಟ್ಟ ಸಹಕಾರ ಸಂಘಗಳ ಕಾಯಿದೆ 1959ರ ಕಲಂ.4, 6, 7 ನೋಂದಣಿ ಮತ್ತು ಕಲಂ.16 ಮತ್ತು 17ರಲ್ಲಿ ಸದಸ್ಯತ್ವಕ್ಕೆ ಅರ್ಹತೆ ಮತ್ತು ಅನರ್ಹತೆ ನಿಗದಿ ಪಡಿಸಿದೆ. ಸೌಹಾರ್ದ ಕಾಯಿದೆ 1997ರ ಕಲಂ.4 ಮತ್ತು 5 ರಲ್ಲಿ ನೋಂದಾವಣೆಗೆ ಸಲ್ಲಿಸುವ ಅರ್ಜಿಯಲ್ಲಿ ಸದಸ್ಯರು ಪಾಲುಬಂಡವಾಳದ ಬಗ್ಗೆ ಉಲ್ಲೇಖ ಇದೆ.

ಈ ಎಲ್ಲಾ ಅವಕಾಶಗಳಲ್ಲಿ ಒಂದು ಸಹಕಾರ ಸಂಸ್ಥೆ ಸ್ಥಾಪಿಸಲು/ನೋಂದಾಯಿಸಲು ಪ್ರತಿ ಸದಸ್ಯ ಪಾಲು ಬಂಡವಾಳ ಹೂಡತಕ್ಕದ್ದು ಅಂದರೆ, ಸದಸ್ಯತ್ವ ಪಡೆಯಲು ಪ್ರತಿಯೊಬ್ಬ ಸದಸ್ಯನಿಗೂ ಪಾಲುಬಂಡವಾಳದ ಕನಿಷ್ಠ ಒಂದು ಷೇರು ಹೊಂದಿರಬೇಕು. ಸದಸ್ಯತ್ವ ನೀಡುವಾಗ ಪ್ರತಿ ಸಹಕಾರ ಸಂಸ್ಥೆ ಷೇರು ಬಂಡವಾಳ ಸ್ವೀಕರಿಸಿ ಆಡಳಿತ ಮಂಡಳಿ ಒಪ್ಪಿಗೆ ನೀಡಿದ ನಂತರವೇ ಸದಸ್ಯತ್ವ ನೀಡಲಾಗುತ್ತಿದೆ. (ಇದಕ್ಕೆ ಪೂರ್ವದಲ್ಲಿ ನೋಂದಾವಣೆಗೆ ಸಲ್ಲಿಸುವ ಅರ್ಜಿಯಲ್ಲಿ ಸಹಿ ಮಾಡಿದ ವ್ಯಕ್ತಿಗಳು ನೋಂದಾವಣೆ ಆದ ದಿನಾಂಕದಂದೇ ಸದಸ್ಯರಾಗಿದ್ದಾರೆಂದು ಭಾವಿಸತಕ್ಕದೆಂದು ಕಾಯಿದೆ ಅವಕಾಶ ಕಲ್ಪಿಸಿದೆ.)

ಈ ಉದ್ದೇಶಕ್ಕಾಗಿ ನಿಬಂಧಕರು ಪ್ರತಿಯೊಂದು ವರ್ಗದ ಸಹಕಾರ ಸಂಸ್ಥೆಗಳ ನೋಂದಾವಣೆಗೆ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿ, ನೋಂದಾವಣೆ ಮಾಡುವ ಅಧಿಕಾರಿಗಳಿಗೆ ಸೂಚಿಸಿದೆ. ಇದು ಕಾಯಿದೆಯಲ್ಲಿ 10 ವಿವಿಧ ಕುಟುಂಬಗಳಿಗೆ ಸೇರಿದ ಬಿಡಿ ಸದಸ್ಯರು ಸಾಕೆಂದಿದ್ದರೂ, ಈ ಮೇಲ್ಕಂಡ ನಿಬಂಧಕರ ಸುತ್ತೋಲೆಯನ್ನು ಕೆಳಮಟ್ಟದ ಅಧಿಕಾರಿಗಳು ಪಾಲಿಸುತ್ತಿದ್ದಾರೆ. ಈ ಮಾರ್ಗದರ್ಶಿ ಸುತ್ತೋಲೆಯಲ್ಲಿ ಪ್ರತಿಯೊಂದು ಸಹಕಾರ ಸಂಸ್ಥೆಯು ಪ್ರಸ್ತಾವನೆ ಸ್ವೀಕರಿಸಿದಾಗ ಕನಿಷ್ಠ ಪ್ರಮಾಣದ ಸದಸ್ಯರು ಮತ್ತು ಕನಿಷ್ಟ ಪ್ರಮಾಣದ ಪಾಲು ಬಂಡವಾಳ ಸಂಗ್ರಹಿಸಲು ಸೂಚಿಸುತ್ತಾರೆ. ಅದರಂತೆ ಬಂದ ಪ್ರಸ್ತಾವನೆಗಳನ್ನು ಮಾತ್ರ ನೋಂದಾಯಿಸಲಾಗುತ್ತಿದೆ. ಷರತ್ತು ಪೂರೈಸಲಾಗದಿದ್ದರೆ, ಅವಧಿಯನ್ನು ವಿಸ್ತರಿಸಲಾಗುತ್ತಿದೆ. ನೋಂದಾವಣೆ ಆದ ನಂತರದ ವಿಮರ್ಷೆ ಈ ಲೇಖನದ ಉದ್ದೇಶ ಇಲ್ಲ.

ನಮ್ಮ ರಾಜ್ಯದಲ್ಲಿ – ರಾಷ್ಟದ ಬಹುರಾಜ್ಯಗಳಲ್ಲಿ ಕೆಲವು ವರ್ಗದ ಸಹಕಾರ ಸಂಸ್ಥೆಗಳನ್ನು ಸದಸ್ಯತ್ವ ನೀಡದೆ, ಪಾಲು ಬಂಡವಾಳ ಸಂಗ್ರಹಿಸದೇ ನೋಂದಾಯಿಸಲಾಗುತ್ತಿದೆ. ಈ ಬಗ್ಗೆ ಈ ಲೇಖನದಲ್ಲಿ ವಿಮರ್ಷೆ ಮಾಡಲು ಕೆಲವು ಉದಾಹರಣೆಗಳನ್ನು ತೆಗೆದುಕೊಳ್ಳಲಾಗಿದೆ. ರಾಜ್ಯ ಮಟ್ಟದಲ್ಲಿ ಪಟ್ಟಣ ಬ್ಯಾಂಕ್ಗಳು ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಸೌಹಾರ್ದ ಕಾಯಿದೆಯ ಸಂಯುಕ್ತ ಸಹಕಾರಿ. ಇದರ ಜೊತೆಗೆ ಕೆಲವು ವಿದ್ಯಾಸಂಸ್ಥೆಗಳು ಮತ್ತು ಆರೋಗ್ಯ ಸೇವಾ ಸಂಸ್ಥೆಗಳನ್ನು ಸೇರಿಸಬಹುದು. ಈ ಸಹಕಾರ ಸಂಸ್ಥೆಗಳನ್ನು ನೋಂದಾಯಿಸಲು ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಿ ಸಹಕಾರ ವಿದ್ಯಾ ಸಂಸ್ಥೆಗಳು, ಸಹಕಾರಿ ಆ ಸೂತ್ರಗಳು ವ್ಯಕ್ತಿಗತ ಸದಸ್ಯರನ್ನು ಹೊಂದಿರುವ ಸಹಕಾರ

ಸಂಸ್ಥೆಗಳು. ಸಂಸ್ಥೆಗಳಲ್ಲಿ ಸದಸ್ಯತ್ವ ಪಡೆದಿರುವಂತಹ ಸಹಕಾರಿ ಸಂಸ್ಥೆಗಳೆಂದರೆ ಜಿಲ್ಲಾ ಸಹಕಾರಿ ಒಕ್ಕೂಟ, ರಾಜ್ಯ ಸಹಕಾರ ಮಹಾಮಂಡಳ, ರಾಜ್ಯ ಪಟ್ಟಣ ಬ್ಯಾಂಕ್ಗಳ ಮಹಾಮಂಡಳ. ಈ ಮೂರು ಸಂಸ್ಥೆಗಳ ಸದಸ್ಯತ್ವ ಸಹಕಾರ ಸಂಸ್ಥೆಗಳಿಗೆ ಮಾತ್ರ ಅರ್ಹತೆ ಇದೆ. ಈ ಸಹಕಾರ ಸಂಸ್ಥೆಗಳು ವ್ಯಕ್ತಿಗತ ಸದಸ್ಯತ್ವ ನೀಡುವುದಿಲ್ಲ. ಕರ್ನಾಟಕ ರಾಜ್ಯ ಸಹಕಾರ ಸಕ್ಕರೆ ಕಾರ್ಖಾನೆಗಳ ಮಹಾಮಂಡಳದಲ್ಲಿ ವಾರ್ಷಿಕ ಚಂದಾ ನಿಗದಿ ಪಡಿಸಿದ್ದರೂ, ಆ ಹಣವನ್ನು ಸಂಸ್ಕರಿಸಿದ ಪ್ರಮಾಣದನ್ವಯ ನಿಗದಿ ಪಡಿಸಿದ್ದರೂ, ಅದನ್ನು ಪಾವತಿಸದೇ ಇದ್ದರೂ, ಕ್ರಮಜರುಗಿಸಲಾರದ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲವು ಸಂದರ್ಭದಲ್ಲಿ ವ್ಯವಹಾರಕ್ಕೆ ಪೂರಕವಾಗಿ ನಾಮಮಾತ್ರ ಸದಸ್ಯತ್ವ ನೀಡಿರಬಹುದು. ಅಂದರೆ ಈ ಮೇಲ್ಕಂಡ ಸಂಸ್ಥೆಗಳು ಸದಸ್ಯತ್ವ ನೀಡುವಾಗ ಅವರು ಪಾವತಿಸಬೇಕಾದ ಪಾಲು ಬಂಡವಾಳದ ಅವಕಾಶವನ್ನು ತನ್ನ ಉಪನಿಯಮಗಳಲ್ಲಿ ಅಳವಡಿಸಿಕೊಂಡಿಲ್ಲ. ಅವರ ಉಪನಿಯಮಗಳಲ್ಲಿ ವಾರ್ಷಿಕ ಚಂದಾ ಹಣ ನಿಗದಿ ಪಡಿಸಿದೆ. ಪಟ್ಟಣ ಬ್ಯಾಂಕ್ ಮತ್ತು ಸಂಯುಕ್ತ ಸಹಕಾರಿ ಸದಸ್ಯ ಸಹಕಾರಿಗಳ ವ್ಯವಹಾರದ ಆಧಾರದ ಮೇಲೆ ವಾರ್ಷಿಕ ಶುಲ್ಕ ನಿಗದಿ ಪಡಿಸಿದೆ. ಆದರೆ ಅವರ ಸದಸ್ಯರ ಹೆಸರಿನಲ್ಲಿ ಪಾಲು ಬಂಡವಾಳವಿಲ್ಲ. ಈ ವಾರ್ಷಿಕ ಚಂದಾ ಪಾವತಿಸದಿದ್ದರೆ ಮತದಾನದ ಹಕ್ಕನ್ನು ನೀಡುವುದಿಲ್ಲ (ಚುನಾವಣೆಯೂ ಸೇರಿ). ಇದು ಕಲಂ.20ಕ್ಕೆ ಬಾಕಿ ಎಂದು ಪರಿಗಣಿಸಿ ಮತದಾನದ ಹಕ್ಕು ನೀಡುವುದಿಲ್ಲ. ಇದರ ಜೊತೆಗೆ ಎಲ್ಲಾ ಮೇಲ್ಕಂಡ ಸಹಕಾರ ಸಂಸ್ಥೆಗಳು ಸದಸ್ಯತ್ವ ನೀಡಬೇಕಾದರೆ, ಸಂಬಂಧಪಟ್ಟ ಸಂಸ್ಥೆಯಿಂದ ಅರ್ಜಿ ಸ್ವೀಕರಿಸಿ, ಮಂಡಳಿ ತೀರ್ಮಾನವಾದ ನಂತರ ಸದಸ್ಯತ್ವ ನೀಡಲಾಗುತ್ತಿದೆ. ಇದಕ್ಕೆ ಪ್ರವೇಶ ಶುಲ್ಕ ಮತ್ತು ಅರ್ಜಿ ಶುಲ್ಕ ಪಡೆಯುತ್ತಾರೆ.

ಈ ವಿಮರ್ಷೆ ಮಾಡುವಾಗ ಕರ್ನಾಟಕ ಸೌಹಾರ್ದ ಕಾಯಿದೆಯಲ್ಲಿ ಶಾಸನಬದ್ದವಾಗಿ ರಚಿಸಿದ ಸಂಯುಕ್ತ ಸಹಕಾರಿಯೂ ಸಹ ವಾರ್ಷಿಕ ಚಂದಾ ನಿಗದಿ ಪಡಿಸಿ ಪಡೆಯುತ್ತಿದೆ. ಇದಕ್ಕೆ ಮೂಲ ಕಾರಣ ಕರ್ನಾಟಕ ಸೌಹಾರ್ದ ಕಾಯಿದೆ 1997ರ ಕಲಂ.53(1) ರಲ್ಲಿನ ಅವಕಾಶ.

"ರಾಜ್ಯದಲ್ಲಿ ಒಂದು ಸಂಯುಕ್ತ ಸಹಕಾರಿ ಇರತಕ್ಕದ್ದು. ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತವಾದ ಎಲ್ಲಾ ಸಹಕಾರಿಗಳು ಅಂಥ ಸಂಯುಕ್ತ ಸಹಕಾರಿಯು ಸದಸ್ಯರಾಗಿರತಕ್ಕದ್ದು."

ಈ ಮೇಲ್ಕಂಡ ಅವಕಾಶದಂತೆ, ಸೌಹಾರ್ದ ಕಾಯಿದೆಯಲ್ಲಿ ನೋಂದಾಯಿತವಾದ ಸಹಕಾರಿ, ಸಂಯುಕ್ತ ಸಹಕಾರಿ ಸದಸ್ಯತ್ವವನ್ನು ಅದೇ ದಿನಾಂಕದಂದು ಪಡೆಯುತ್ತಿದೆ. ಇದಕ್ಕೆ ಸದಸ್ಯತ್ವಕ್ಕೆ ಅರ್ಜಿ ನೀಡಬೇಕಾಗಿಲ್ಲ ಮತ್ತು ಯಾವುದೇ ಶುಲ್ಕ ಪಾವತಿಸಬೇಕಾಗಿಲ್ಲ. ಅದಕ್ಕಾಗಿಯೇ ಸಂಯುಕ್ತ ಸಹಕಾರಿ ಸದಸ್ಯ ಸಹಕಾರಿಗಳಿಗೆ ವಾರ್ಷಿಕ ಚಂದಾ ನಿಗದಿ ಪಡಿಸಲು ಅವಕಾಶ ನೀಡಿದೆ. ಇದಕ್ಕೆ ಪೂರಕವಾಗಿ ಸೌಹಾರ್ದ ಕಾಯಿದೆ ಕಲಂ.53ರಲ್ಲಿ ನಿಬಂಧಕರು ನಿರ್ವಹಿಸಬೇಕಾದ ಹಲವಾರು ಅಧಿಕಾರ/ಪ್ರಕಾರ್ಯಗಳನ್ನು ಈ ಸಂಯುಕ್ತ ಸಹಕಾರಿಗೆ ನೀಡಿದೆ. ಅವುಗಳೆಂದರೆ

(ಎ) ಸಹಕಾರಿಗಳನ್ನು ಪ್ರವರ್ತಿಸುವುದು ಹಾಗೂ ಸಂಘಟಿಸುವುದು ಮತ್ತು ಈ ಉದ್ದೇಶಕ್ಕಾಗಿ ಮಾದರಿ ಉಪವಿಧಿಗಳನ್ನು ರಚಿಸುವುದು ಹಾಗೂ ಸಹಕಾರಿ ತತ್ವಗಳಿಗನುಸಾರವಾಗಿ ಸಹಕಾರಿಗಳಿಗಾಗಿ ವಿವಿಧ ಕಾರ್ಯನೀತಿಗಳನ್ನು ರಚಿಸಲು ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸುವುದು;

(ಬಿ) ಸಹಕಾರಿ ತರಬೇತಿ, ಶಿಕ್ಷಣ ಹಾಗೂ ತಿಳುವಳಿಕೆ ನೀಡುವುದು ಮತ್ತು ಸಹಕಾರ ತತ್ವಗಳನ್ನು ಪ್ರಚಾರ ಮಾಡುವುದು;

(ಸಿ) ಸಂಶೋಧನೆ ಹಾಗೂ ಮೌಲ್ಯಮಾಪನವನ್ನು ಕೈಗೊಳ್ಳುವುದು ಮತ್ತು ಸದಸ್ಯ ಸಹಕಾರಿಗಳಿಗಾಗಿ ಯಥಾದೃಷ್ಟ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಲು ನೆರವಾಗುವುದು;

(ಡಿ) ಸದಸ್ಯ ಸಹಕಾರಿಗಳ ನಡುವೆ ಸೌಹಾರ್ದ ಸಂಬಂಧವನ್ನು ಕಲ್ಪಿಸುವುದು;

[(ಇ) *****]

(ಎಫ್) ಅಗತ್ಯವಿರುವಾಗ ಮಂಡಳಿಯ ಸಭೆಗಳಲ್ಲಿ ಭಾಗವಹಿಸುವುದೂ ಸೇರಿದರಂತೆ ಸದಸ್ಯ ಸಹಕಾರಿಗಳಿಗೆ ವ್ಯವಸ್ಥಾಪನಾ ಅಭಿವೃದ್ಧಿ ಸೇವೆಗಳನ್ನು ಕಲ್ಪಿಸುವುದು;

(ಜಿ) ಸದಸ್ಯ ಸಹಕಾರಿಗಳಿಗಾಗಿ ನಡತೆ ಸಂಹಿತೆಯನ್ನು ರೂಪಿಸುವುದು;

(ಹೆಚ್) ಸದಸ್ಯ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳನ್ನು ರೂಪಿಸುವುದು;

(ಐ) ಸದಸ್ಯ ಸಹಕಾರಿಗಳಿಗೆ ಕಾನೂನು ನೆರವು ಹಾಗೂ ಸಲಹೆ ಒದಗಿಸುವುದು;

(ಜೆ) ಸದಸ್ಯ ಸಹಕಾರಿಗಳ ಅಗತ್ಯದ ಮೇರೆಗೆ ಯಾವುದೇ ಇತರ ಸೇವೆಗಳನ್ನು ಒದಗಿಸುವುದು;

(ಕೆ) ಹೊಸ ರೂಪದ ಸಹಕಾರಿ ಉದ್ದಿಮೆಗಳನ್ನು ಉತ್ತೇಜಿಸುವುದು;

(ಎಲ್) ಸಹಕಾರಿ ಶಿಕ್ಷಣ ನಿಧಿಯನ್ನು ರಚಿಸಿ ನಿರ್ವಹಿಸುವುದು;

(ಎಂ) ಸಹಕಾರಿ ವಿಚಾರ ಧಾರೆಯನ್ನು ಅನ್ವಯಿಸುವಂಥ ಪ್ರಾಯೋಗಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು;

(ಎನ್) ಸಹಕಾರಿಗಳ ಪರವಾಗಿ ಮತ್ತು ಸಹಕಾರಿಗಳ ಮಧ್ಯೆ ಪರಸ್ಪರ ಸಂಪರ್ಕ ಕಲ್ಪಿಸುವುದು;

(ಒ) ಸಹಕಾರಿಗಳ ಅಂಕಿ ಅಂಶಗಳ ಬ್ಯಾಂಕ್ನಂತೆ ವರ್ತಿಸುವುದು;

(ಪಿ) ಸದಸ್ಯ ಸಹಕಾರಿಗಳ ಹಿತಾಸಕ್ತಿಯನ್ನು ಪ್ರತಿನಿಸುವುದು;

(ಕ್ಯೂ) ಗೊತ್ತುಪಡಿಸಿದ ಅವಧಿಯೊಳಗಾಗಿ ಅದರ ಸದಸ್ಯ ಸಹಕಾರಿಗಳ ಲೆಕ್ಕ ಪರಿಶೋಧನೆ, ಚುನಾವಣೆಗಳು, ಸಾಮಾನ್ಯ ಸಭೆಗಳು ನಡೆಯುವುದನ್ನು ಖಚಿತಪಡಿಸಿಕೊಳ್ಳುವುದು;

(ಆರ್) ಸದಸ್ಯ ಸಹಕಾರಿಗಳ ಪರವಾಗಿ ವ್ಯವಹಾರ ಹಾಗೂ ಸೇವೆಗಳನ್ನು ಕೈಗೊಳ್ಳುವುದು;

(ಎಸ್) 30ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ, ಒಂದು ಸದಸ್ಯ ಸಹಕಾರಿಯು ನಡೆಸಲು ತಪ್ಪಿದ ವಿಶೇಷ ಸಾಮಾನ್ಯ ಸಭೆಯನ್ನು ನಡೆಸುವುದು;

[(ಟಿ) ******]

[(ಯು) ಸದಸ್ಯ ಸಹಕಾರಿಗಳ ಪರಿವೀಕ್ಷಣೆಯ ಅಧಿಕಾರ ಹೊಂದಿರುವುದು: ಪರಂತು, ಒಂದು ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ರಿಜರ್ವ್ ಬ್ಯಾಂಕಿನ ಅನುಮೋದನೆ ಇದ್ದ ಹೊರತು, ಈ ಖಂಡದ ಅಡಿಯಲ್ಲಿ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.]

ಈ ಮೇಲ್ಕಂಡ ಅವಕಾಶದಂತೆ ಸಂಯುಕ್ತ ಸಹಕಾರಿ ಒಂದು ಶಾಸನ ಬದ್ಧ ಪ್ರಕಾರ್ಯ ನಿರ್ವಹಿಸುವುದರಿಂದ ಮತ್ತು ನಿಬಂಧಕರ ಅಧಿಕಾರ ನಿರ್ವಹಿಸುತ್ತಿರುವುದರಿಂದ, ಆ ಸಂಸ್ಥೆಯು ಕಾರ್ಯಾಲಯ ನಿರ್ವಹಣೆಗೆ ವಾರ್ಷಿಕ ಚಂದಾ ನಿಗದಿ ಪಡಿಸುವುದರಲ್ಲಿ ತೊಡಕಿಲ್ಲ. ಆದರೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರಲ್ಲಿ, ಇಂತಹ ಅವಕಾಶ ಇಲ್ಲದೇ ಇರುವುದರಿಂದ, ಈ ಎಲ್ಲಾ ಒಕ್ಕೂಟ ಮತ್ತು ಮಹಾಮಂಡಳಗಳ ನೋಂದಾವಣೆ ಮಾಡುವಾಗ, ಈ ಎಲ್ಲಾ ಸಂಸ್ಥೆಗಳ ಆರ್ಥಿಕ ಸಂಸ್ಥೆಗಳು ಮತ್ತು ಅದರ ವ್ಯವಹಾರಿಕವಾಗಿ ಕಾರ್ಯನಿರ್ವಹಿಸಬೇಕಾದರೆ, ಸದಸ್ಯರಿಂದ ಪಾಲುಬಂಡವಾಳ ಸ್ವೀಕರಿಸಲೇಬೇಕು. ಇದರ ಜೊತೆಗೆ ಪಾಲು ಬಂಡವಾಳ ಹೂಡಿ ಆ ಸಂಸ್ಥೆಯ ಮಾಲೀಕನಾದಾಗ ಮಾತ್ರ ಅದರ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿ ನಿರ್ವಹಿಸಲು ಅರ್ಹ. ಸದಸ್ಯನಲ್ಲದವನಿಗೆ ಯಾವ ಶರತ್ತನ್ನು ನಿಗದಿ ಪಡಿಸಲಾಗದು. ಇದರ ಜೊತೆಗೆ ಕೆಲವು ಸಂದರ್ಭದಲ್ಲಿ ಸದಸ್ಯನಾಗಿದ್ದರೂ ಮತದಾನದ ಹಕ್ಕನ್ನು ಕಳೆದುಕೊಳ್ಳುವ ಬಗ್ಗೆ ಕಲಂ.20(ಬಿ)(3) ರಲ್ಲಿ ನಿರ್ಬಂದ ವಿಧಿಸಿರುವುದನ್ನು ಗಮನಿಸಿದಾಗ ಸದಸ್ಯತ್ವದ ಮಹತ್ವ ತಿಳಿಯುತ್ತದೆ. ಆದ್ದರಿಂದ ಯಾವುದೇ ಸಹಕಾರ ಸಂಸ್ಥೆಯಲ್ಲಿ ಸದಸ್ಯತ್ವ ಪಡೆಯಲು ಪಾಲು ಬಂಡವಾಳದ ಅವಶ್ಯಕತೆ ಇದೆ. ಇದರ ಆಧಾರದ ಮೇಲೆಯೇ ಷೇರು ವರ್ಗಾವಣೆ, ಷೇರು ಮೌಲ್ಯಮಾಪನ, ಷೇರು ಹೊಂದಾಣಿಕೆ ಬಗ್ಗೆ ಕಾಯಿದೆಯಲ್ಲಿ ಸೇರಿಸಿದೆ.

ಇದಕ್ಕೆ ಮತ್ತೊಂದು ವಿವರಣೆ ಅವಶ್ಯಕ, ಒಂದು ಜಿಲ್ಲಾ ಸಹಕಾರ ಒಕ್ಕೂಟ, ಆ ಜಿಲ್ಲೆಯಲ್ಲಿರುವ ಎಲ್ಲಾ ಸಹಕಾರ ಸಂಸ್ಥೆಗಳನ್ನು ಸದಸ್ಯರನ್ನಾಗಿ ಸೇ-ರಿಸಿಕೊಳ್ಳುವುದಿಲ್ಲ. ಅರ್ಜಿ ನೀಡಿದರೂ, ಸದಸ್ಯತ್ವ ನೀಡುವುದಿಲ್ಲ, ಚುನಾವಣೆ ಸಂದರ್ಭದಲ್ಲಿ, ಅವರಿಗೆ ಅನುಕೂಲವಲ್ಲದ ಸಹಕಾರ ಸಂಸ್ಥೆಗಳಿಗೆ ಸದಸ್ಯತ್ವ ನೀಡಿದರೆ ಚುನಾವಣೆಯಲ್ಲಿ ತೊಡಕಾಗುತ್ತದೆ ಎಂದು. ಒಂದು ಉದಾಹರಣೆ ನೀಡುವುದಾದರೆ, ಒಂದು ಜಿಲ್ಲೆಯಲ್ಲಿ ನೋಂದಾಯಿತ ಸಹಕಾರ ಸಂಘಗಳು 1200 ಇದ್ದರೂ ಜಿಲ್ಲಾ ಸಹಕಾರ ಒಕ್ಕೂಟದ ಸದಸ್ಯರು 250 ಮಾತ್ರ. ಸದಸ್ಯತ್ವ ಸ್ವೀಕರಿಸುವುದು, ಆಡಳಿತ ಮಂಡಳಿ ಅಧಿಕಾರವಿದ್ದರೂ, ಮುಕ್ತ ಮತ್ತು ಸ್ವಯಂ ಪ್ರೇರಿತ ಸದಸ್ಯತ್ವಕ್ಕೆ ವಿರುದ್ದವಾಗಿದ್ದರೂ, ಇಂತಹ ಒಕ್ಕೂಟಗಳು ಈಗಲೂ ಅಸ್ತಿತ್ವದಲ್ಲಿದೆ. ಈ ಸಂಸ್ಥೆಗಳೂ ಲಾಭ, ನಷ್ಟ ಖಾತೆಯನ್ನು ನಿರ್ವಹಿಸುವುದಿಲ್ಲ, ಹಾಗೂ ಆದಾಯ ಮತ್ತು ಖರ್ಚು ಮಾತ್ರ ನಿರ್ವಹಿಸುತ್ತವೆ. ಆದರೆ ಸಹಕಾರ ಸಂಸ್ಥೆಗಳು ಒಂದು ಆರ್ಥಿಕ ಸಂಸ್ಥೆ ಎಂಬ ತತ್ವಕ್ಕೆ ವಿರುದ್ದವಾಗಿ ಇವು ಕೆಲಸ ನಿರ್ವಹಿಸುತ್ತಿವೆ. ಇದನ್ನು ನಿಬಂಧಕರು ನಿಯಂತ್ರಿಸಲೇಬೇಕು. ಇಲ್ಲವಾದರೆ ಇಂತಹ ಸಂಸ್ಥೆಗಳಿಗೆ ಸಹಕಾರ ಸಂಘಗಳ ಕಾಯಿದೆ ಕಲಂ.120ರಡಿ ನೋಂದಾವಣೆ ಶರತ್ತುಗಳಲ್ಲಿ ವಿನಾಯ್ತಿ ನೀಡಬೇಕು. ಕಲಂ.120 ಈ ಕೆಳಕಂಡಂತೆ ಅವಕಾಶ ಕಲ್ಪಿಸಿದೆ.

"ಕಲಂ.120 ನೋಂದಣಿ ಶರತ್ತುಗಳಿಂದ ಸಂಘಗಳಿಗೆ ವಿನಾಯಿತಿಯನ್ನು ನೀಡುವ ಅಧಿಕಾರ.

"ಈ ಕಾಯ್ದೆಯಲ್ಲಿ ಏನೇ ಅಡಕವಾಗಿದ್ದರೂ, ರಾಜ್ಯ ಸರ್ಕಾರವು, ಪ್ರತಿ ಸಂದರ್ಭದಲ್ಲಿಯೂ ರಾಜ್ಯ ಪತ್ರದಲ್ಲಿ ವಿಶೇಷ ಆದೇಶವನ್ನು ಪ್ರಕಟಿಸುವುದರ ಮೂಲಕ ಮತ್ತು ರಾಜ್ಯ ಸರ್ಕಾರವು ವಿಧಿಸಬಹುದಾದಂತಹ ಷರತ್ತುಗಳೇನಾದರೂ ಇದ್ದಲ್ಲಿ, ಅಂತಹ ಷರತ್ತುಗಳಿಗೊಳಪಟ್ಟು, ನೋಂದಣಿಗೆ ಸಂಬಂಧಿಸಿದಂತೆ ಈ ಕಾಯ್ದೆಯಲ್ಲಿ ವಿಧಾಯಕ ಮಾಡಿರತಕ್ಕವುಗಳ ಪೈಕಿ ಯಾವುದೇ ಅಗತ್ಯಗಳಿಂದ ಯಾವುದೇ ಸಹಕಾರ ಸಂಘವನ್ನು ವಿನಾಯ್ತಿಗೊಳಿಸಬಹುದು."

ಈ ಅಧಿನಿಯಮದಲ್ಲಿ ಏನೇ ಇದ್ದರೂ ಸಹ ಅಥವಾ ಕಲಂ.121 ರಲ್ಲಿ ಈ ಕಾಯಿದೆಯ ಕೆಲವು ಶರತ್ತುಗಳು ಅನ್ವಯವಾಗುವುದಿಲ್ಲವೆಂದು ವಿನಾಯ್ತಿ ನೀಡಬಹುದು. ಕಲಂ.121 ಈ ಕೆಳಕಂಡಂತೆ ಇದೆ.

"ರಾಜ್ಯ ಸರ್ಕಾರವು ರಾಜ್ಯ ಪತ್ರದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶವನ್ನು ಪ್ರಕಟಿಸುವ ಮೂಲಕ ಯಾವುದೇ ಸಹಕಾರ ಸಂಘವನ್ನು ಅಥವಾ ಯಾವುದೇ ಸಹಕಾರ ಸಂಘಗಳ ವರ್ಗಗಳನ್ನು ಈ ಕಾಯ್ದೆಯ ಯಾವುದೇ ಉಪಬಂಧಗಳಿಂದ ವಿನಾಯ್ತಿಗೊಳಿಸಬಹುದು ಅಥವಾ ಅಂತಹ ಉಪಬಂಧಗಳು ಅಂತಹ ಸಂಘಕ್ಕೆ ಅಥವಾ ಸಂಘಗಳ ವರ್ಗಗಳಿಗೆ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ಮಾರ್ಪಾಡುಗಳೊಂದಿಗೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು."

### ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997ರ

"ಸಂಯುಕ್ತ ಸಹಕಾರಿ" ಹೊರತು ಪಡಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರಲ್ಲಿ ನೋಂದಾವಣೆಯಾದ ಪ್ರತಿಯೊಂದು ಸಹಕಾರಿ ಸಂಸ್ಥೆಯೂ ಸದಸ್ಯರಿಂದ ಪಾಲು ಬಂಡವಾಳ ಪಡೆದು ಸದಸ್ಯತ್ವ ನೀಡದೆ ಇದ್ದರೆ, ಅದನ್ನು ಸಹಕಾರ ಸಂಸ್ಥೆ ಎಂದು ಕರೆಯಲಾಗದು. ಸಹಕಾರ ಸಂಸ್ಥೆಗಳು ಆರ್ಥಿಕ ಸಂಸ್ಥೆಗಳು, ಧರ್ಮ ಸಂಸ್ಥೆಗಳಲ್ಲವೆಂದು ತಿಳಿಯಬೇಕು ಮತ್ತು ಹಾಗೇ ಮಾಡಲೇಬೇಕಾದರೆ ಮೇಲೆ ತಿಳಿಸಿದಂತೆ ಕಲಂ.120 ಮತ್ತು 121ರಲ್ಲಿ ಅಧಿಸೂಚನೆ ಮೂಲಕ ಮಾತ್ರ ಕಾರ್ಯನಿರ್ವಹಿಸಬಹುದು.

# ವೋಟರ್ ಐಡಿ ತಿದ್ದುಪಡಿ ಸುಲಭ

– ಸಂಗ್ರಹ

ಇನ್ನು ಮುಂದೆ ಸಾರ್ವಜನಿಕರು ಮತದಾರರ ಪಟ್ಟಿ ತಿದ್ದುಪಡಿಗಾಗಿ ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಯಾವುದೇ ಸರಕಾರಿ ಕಚೇರಿಯಲ್ಲಿ ಕ್ಯೂ ನಿಲ್ಲಬೇಕಿಲ್ಲ. ಮನೆಯಲ್ಲಿಯೇ ಕುಳಿತು ಈ ಎಲ್ಲಾ ಬದಲಾವಣೆ ಮಾಡಿಕೊಳ್ಳಬಹುದಾಗಿದೆ.

ಮತದಾರರ ಪಟ್ಟಿಯಲ್ಲಿನ ಭಾವಚಿತ್ರ ಬದಲಾವಣೆ(ಬಣ್ಣದ ಭಾವಚಿತ್ರ ಸೇರ್ಪಡೆ) ತಪ್ಪಾಗಿರುವ ಜನ್ಮ ದಿನಾಂಕ, ವಿಳಾಸ ಬದಲಾವಣೆಗೆ ಭಾರತೀಯ ಚುನಾವಣಾ ಆಯೋಗ ಈಗ ಸಾರ್ವಜನಿಕರಿಗೆ ನೇರ ಅವಕಾಶ ಒದಗಿಸಿದೆ. ವೋಟರ್ ಹೆಲ್ಪ್ ಲೈನ್ ಆಪ್ ಡೌನ್ಲೋಡ್ ಮಾಡಿಕೊಂಡು ನಾವೇ ಸ್ವಹಿತಬೇಕಾದ ಅಲ್ಲದೇ ಕುಟುಂಬದವರ ಹೆಸರು ಬೇರೆ ಬೇರೆ ಮತಗಟ್ಟೆಯಲ್ಲಿ ದಾಖಲಾಗಿದ್ದು, ಮತದಾನ ಮಾಡಲು ಬೇರೆ ಬೇರೆ ಕಡೆ ತೆರಳುವ ಸಮಸ್ಯೆಯಲ್ಲಿದ್ದು, ಅದಕ್ಕೂ ಈ ಆಪ್‌ನಲ್ಲಿ ಅವಕಾಶವಿದೆ. ಫ್ಯಾಮಿಲಿ ಗ್ರೋಪ್‌ಗಳಿಗೆ ಸಹ ಅವಕಾಶ ನೀಡಿದ್ದು, ಬೇರೆ ಬೇರೆ ಮತಗಟ್ಟೆಯಲ್ಲಿರುವ ಒಂದೇ ಕುಟುಂಬದ ಸದಸ್ಯರನ್ನು ಒಂದೇ ಮತಗಟ್ಟೆಯಲ್ಲಿ ಒಂದೇ ಭಾಗದಲ್ಲಿ ಸೇರ್ಪಡೆ ಮಾಡಬಹುದಾಗಿದೆ.

ಸಾರ್ವಜನಿಕರು ಮಾಡಬೇಕಿರುವುದೇನು? ನಿಮ್ಮ ಮೊಬೈಲ್ ಪ್ಲೇ ಸ್ಟೋರ್‌ನಲ್ಲಿ ವೋಟರ್ ಹೆಲ್ಪ್‌ಲೈನ್ ಆಪ್ ಡೌನ್‌ಲೋಡ್ ಮಾಡಿಕೊಳ್ಳಿ, ಅದರಲ್ಲಿ ಬರುವ ಸೂಚನೆಗಳನ್ನು ಪಾಲಿಸಿ, ನೆಕ್ಸ್ಟ್ ಒತ್ತಿ, ನಂತರ ಬರುವ ಸ್ಕ್ರೀನ್‌ನಲ್ಲಿ ಇವಿಪಿ ಎಂಬುದನ್ನು ಪ್ರೆಸ್ ಮಾಡಿ, ನಿಮ್ಮ ಮೊಬೈಲ್ ಸಂಖ್ಯೆ ನೀಡಿ, ನಂತರ ಬರುವ ಒಟಿಪಿ ದಾಖಲಿಸಿದಾಗ ನಿಮ್ಮ ವೋಟರ್ ಐಡಿಯ ಸಂಖ್ಯೆಗೆ ನಿಮ್ಮ ಮೊಬೈಲ್ ಸಂಖ್ಯೆಯನ್ನು ಲಿಂಕ್ ಮಾಡಲು ಸೂಚನೆ ಬರುತ್ತದೆ, ಇದನ್ನು ಪಾಲಿಸಿದ ನಂತರ ಬರುವ ಸ್ಕ್ರೀನ್‌ನ್ನಲ್ಲಿರುವ ವಿವರಗಳನ್ನು ನಮೂದಿಸಿ, ಮತದಾರರ ಪಟ್ಟಿಯಲ್ಲಿನ ನಿಮ್ಮ ಹೆಸರನ್ನು ಹುಡುಕಿದಾಗ, ನಿಮ್ಮ ಭಾವಚಿತ್ರ ಸಹಿತ ಮಾಹಿತಿ ಬರಲಿದೆ.

ಈ ಭಾವಚಿತ್ರ ಸಹಿತ ಮಾಹಿತಿಯಲ್ಲಿ ನಿಮ್ಮ ಭಾವಚಿತ್ರ, ಹೆಸರು, ವಯಸ್ಸು, ಲಿಂಗ, ತಂದೆ, ಪತಿ ಹೆಸರು, ವಿಳಾಸ ಇವುಗಳ ಮುಂದೆ ಪೆನ್ಸಿಲ್ ಐಕಾನ್ ಇದ್ದು ನೀವು ಯಾವುದನ್ನು ಬದಲಾವಣೆ ಮಾಡಬೇಕೋ ಅದನ್ನು ಒತ್ತಿದಾಗ, ಆ ಬದಲಾವಣೆ ಪೂರಕ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೋರುತ್ತದೆ. ಸಂಬಂಧ ಪಟ್ಟ ದಾಖಲೆಗಳನ್ನು ಅಪ್ ಲೋಡ್ ಮಾಡಿದಲ್ಲಿ ಮತದಾರರ ಗುರುತು ಚೀಟಿಯಲ್ಲಿ ನೀವು ಕೋರಿದ ಬದಲಾವಣೆ ಸಾಧ್ಯವಾಗಲಿದೆ. ಭಾರತೀಯ ಚುನಾವಣಾ ಆಯೋಗ, ಮತದಾರರಿಗೆ ನೀಡಿರುವ ಈ ಸದಾವಕಾಶ ಅಕ್ಟೋಬರ್ 15ರ ಮಾತ್ರ ದೊರೆಯಲ್ಲಿದ್ದು, ಆ ನಂತರ ನೀವು ಬದಲಾವಣೆ ಮಾಡಿರುವ ಹೊಸ ವೋಟರ್ ಐಡಿ ಕಾರ್ಡ್‌ನೀಡುವ ಪ್ರಕ್ರಿಯೆ ಆರಂಭಗೊಳ್ಳಲಿದೆ.

ಮತದಾರರ ಬಹುಕಾಲದ ಬೇಡಿಕೆಯಾದ ತಮ್ಮ ಭಾವಚಿತ್ರ ತಿದ್ದುಪಡಿಗಲನ್ನು ಮತದಾರರೇ ಮಾಡಿಕೊಳ್ಳಲು ಚುನಾವಣಾ ಆಯೋಗ ಸಿದ್ಧಪಡಿಸಿರುವ ಈ ವೋಟರ್ ಹೆಲ್ಪ್ ಲೈನ್ ಆಫ್ ಅತ್ಯಂತ ಸರಳವಾಗಿದ್ದು, ಬಳಕೆದಾರರ ಸ್ನೇಹಿಯಾಗಿ ರೂಪಿಸಲಾಗಿದೆ. ಈ ಆಪ್ ಬಳಕೆ ಬಗ್ಗೆ ಯಾವುದೇ ಸಮಸ್ಯೆಗಳಿದ್ದಲ್ಲಿ, ಜಿಲ್ಲಾಧಿಕಾರಿ ಕಛೇರಿಯಲ್ಲಿರುವ ಜಿಲ್ಲಾ ಮತದಾರರ ಸಹಾಯವಾಣಿ ಕೇಂದ್ರ ಮತ್ತು ಎಲ್ಲಾ ತಾಲೂಕುಗಳ ತಹಸೀಲ್ದಾರ್ ಕಚೇರಿಗಳನ್ನು ಸಂಪರ್ಕಿಸಿ ಅಲ್ಲೂ ಸಹ ಬದಲಾವಣೆಗಳನ್ನು ಮಾಡಿಕೊಳ್ಳುವಂತೆ ಹಾಗೂ ಆಪ್ ಬಳಕೆ ಮತ್ತಿತರ ಮಾಹಿತಿಗಾಗಿ 24*7 ಮತದಾರರ ಉಚಿತ ಸಹಾಯವಾಣಿ ಸಂಖ್ಯೆ 1950 ಸಂಪರ್ಕಿಸಿ ಈ ಸದಾವಕಾಶವನ್ನು ಜಿಲ್ಲೆಯ ಎಲ್ಲಾ ಮತದಾರರೂ ಪಡೆದುಕೊಂಡು ತಮ್ಮ ಅಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳುವಂತೆ, ಉಡುಪಿ ಜಿಲ್ಲಾ ಚುನಾವಣಾ ಶಾಖೆಯ ಅಧೀಕ್ಷಕ ಸಂಪತ್ ಕುಮಾರ್ ತಿಳಿಸಿದ್ದಾರೆ.

# ಆಧಾರ್ ಕಾರ್ಡ್ ಅಪ್ಡೇಟ್ ಮಾಡಲು ಯಾವುದೇ ದಾಖಲೆಗಳ ಅಗತ್ಯವಿಲ್ಲ

– ಸಂಗ್ರಹ

ಆಧಾರ್ ಕಾರ್ಡ್ ನವೀಕರಣ ಇನ್ನು ಮುಂದೆ ಸುಲಭ ಅಗಲಿದೆ. ಯಾವುದೇ ದಾಖಲೆಗಳನ್ನು ಸಲ್ಲಿಸದೆ ನಿಮ್ಮ ಇತ್ತೀಚಿನ ಛಾಯಾಚಿತ್ರವನ್ನು ಆಧಾರ್ ಕಾರ್ಡ್ ನಲ್ಲಿ ನವೀಕರಿಸಬಹುದು. ಇದು ಮಾತ್ರವಲ್ಲದೆ, ಬಯೋಮೆಟ್ರಿಕ್ಸ್, ನೋಂದಾಯಿತ ಮೊಬೈಲ್ ಸಂಖ್ಯೆ ಮತ್ತು ಇಮೇಲ್ ಐಡಿಯಂತಹ ವಿವರಗಳನ್ನು ಸಹ ಯಾವುದೇ ತೊಂದರೆಯಿಲ್ಲದೆ ನವೀಕರಿಸಬಹುದು.

ನಿಮ್ಮ ಆಧಾರ್ ಕಾರ್ಡ್‌ನೊಂದಿಗೆ ನೀವು ಆಧಾರ್ ಕೇಂದ್ರಕ್ಕೆ ಕಾಲಿಡಬೇಕು. ಆಧಾರ್ ಕಾರ್ಡುದಾರರ ವೈಯಕ್ತಿಕ ಮಾಹಿತಿಯನ್ನು ನವೀಕರಿಸಲು ಯಾವುದೇ ದಾಖಲೆಗಳ ಅಗತ್ಯವಿಲ್ಲ ಎಂದು ಯುನಿಕ್ ಐಡೆಂಟಿಫಿಕೇಶನ್ ಅಥಾರಿಟಿ ಆಫ್ ಇಂಡಿಯಾ (ಯುಐಡಿಎಐ) ನೋಟಿಸ್ ನೀಡಿದೆ. ಛಾಯಾಚಿತ್ರ, ಬಯೋಮೆಟ್ರಿಕ್ಸ್, ಮೊಬೈಲ್ ಸಂಖ್ಯೆ ಅಥವಾ ಇಮೇಲ್ ಐಡಿಯಂತಹ ವಿವರಗಳನ್ನು ನವೀಕರಿಸಲು ಬಯಸುವ ಆಧಾರ್ ಕಾರ್ಡ್ ಬಳಕೆದಾರರು ಈಗ ಯಾವುದೇ ಅಧಿಕೃತ ಆಧಾರ್ ಸೇವಾ ಕೇಂದ್ರಕ್ಕೆ ಭೇಟಿ ನೀಡಿ ಅವರ ವಿವರಗಳನ್ನು ನವೀಕರಿಸಬೇಕಾಗುತ್ತದೆ. ನಿಮ್ಮ ಆಧಾರ್ ನಲ್ಲಿ ಛಾಯಾಚಿತ್ರ, ಬಯೋಮೆಟ್ರಿಕ್ಸ್, ಲಿಂಗ, ಮೊಬೈಲ್ ಸಂಖ್ಯೆ ಮತ್ತು ಇಮೇಲ್ ಐಡಿ ನವೀಕರಿಸಲು ಯಾವುದೇ ದಾಖಲೆಗಳ ಅಗತ್ಯವಿಲ್ಲ. ನಿಮ್ಮ ಆಧಾರ್ ಅನ್ನು ತೆಗೆದುಕೊಂಡು ಹತ್ತಿರದ ಯಾವುದೇ ಆಧಾರ್ ಕೇಂದ್ರಕ್ಕೆ ಭೇಟಿ ನೀಡಿ ಎಂದು ಯುಐಡಿಎಐ ಟ್ವೀಟ್ ಮಾಡಿದೆ.

ನಿಮ್ಮ ದಾಖಲೆಗಳನ್ನು ಆಧಾರ್ ಕೇಂದ್ರದಲ್ಲಿ ಸ್ಕ್ಯಾನ್ ಮಾಡಿ ಪುನಃ ವಾಪಸ್ ಕೊಡುತ್ತಾರೆ. ಯಾವುದೇ ನಕಲು ಪ್ರತಿಯನ್ನು ತೆಗೆದುಕೊಂಡು ಹೋಗುವ ಅವಶ್ಯಕತೆ ಇಲ್ಲ. ಅಪ್ಡೇಟ್ ಗೆ ಬೇಕಾಗುವಂತಹ ವಿಳಾಸ, ಹೆಸರು, ಜನ್ಮ ದಿನಾಂಕದಂತಹ ದಾಖಲೆಗಳನ್ನು ತಮ್ಮ ಬಳಿ ಇಟ್ಟುಕೊಂಡು ಹೋದರೆ ಸಾಕು. ಅವುಗಳನ್ನು ಅಲ್ಲಿಯೇ ಸ್ಕ್ಯಾನ್ ಮಾಡಿ ವಾಪಸ್ ಕೊಡಲಾಗುವುದು ಎಂದು ಹೇಳಿದೆ.

# ಭಾರತೀಯ ಸಹಕಾರ ಅಂದೋಲನದ ಪ್ರಗತಿ ಮತ್ತು ಅದರ ಸವಾಲುಗಳು (ಎನ್.ಸಿ.ಯು.ಐ. ನ ಅಧ್ಯಕ್ಷರಾದ ಡಾ.ಚಂದ್ರಪಾಲ್‌ಸಿಂಗ ಯಾದವ್ ರವರು ವಾರ್ಷಿಕ ಮಾಹಾಸಭೆಯಲ್ಲಿ ಮಾಡಿದ ಭಾಷಣದ ಪ್ರಮುಖ ಅಂಶಗಳು)



– ಅನುವಾದ : ಶ್ರೀಮತಿ ಮಾಧುರಿ ದೇಶಪಾಂಡೆ

ಭಾರತೀಯ ಕೃಷಿಯು ಶೇಕಡಾ 58 ಗ್ರಾಮೀಣ ಜನರ ಜೀವನವು ಕೃಷಿಯನ್ನು ಆಧರಿಸಿದೆ. ಹಾಗೆ ಭಾರತೀಯ ಆರ್ಥಿಕತೆಯನ್ನು ಅವಲೋಕಿಸಿದಾಗ ಶೇಕಡಾ 44ರಷ್ಟು ಕೃಷಿಯಿಂದಲೇ ಬರುವುದಾಗಿದೆ. ವಿಶ್ವದಲ್ಲಿ ಒಂದು ಶತಕೋಟಿ ಜನರ ಉದ್ಯೋಗವು ಕೃಷಿಯಾಗಿದೆ. ಭಾರತದಲ್ಲಿ ಪ್ರತಿ 4 ಜನರಲ್ಲಿ ಒಬ್ಬ ಕೃಷಿಕನು ಇರುತ್ತಾನೆ. ಸಂಖ್ಯೆಗಳನ್ನು ಖಚಿತವಾಗಿ ತಿಳಿಸುವ ವಿಷಯವೆಂದರೆ ಭಾರತದಲ್ಲಿ ಕೃಷಿಯು ಎಷ್ಟು ಮಹತ್ವವನ್ನು ಪಡೆದಿದೆ ಎಂಬುದನ್ನು ತಿಳಿಯಬಹುದಾಗಿದೆ.

ಭಾರತದಲ್ಲಿ ಸಹಕಾರ ಆಂದೋಲನದ ಆರಂಭವು ಕೃಷಿ ಮೂಲಕ ಆಗಿರುವುದು ಮತ್ತು ಇಂದು ಎಂಟು ಲಕ್ಷಕ್ಕೂ ಹೆಚ್ಚು ಸಹಕಾರಿ ಸಂಘಗಳು ಹಳ್ಳಿ ಹಳ್ಳಿಗಳಲ್ಲಿ ವ್ಯಾಪ್ತವಾಗಿದೆ, ಮತ್ತು ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಾದ ಹಾಲು ಉತ್ಪಾದನೆ, ಸಾಲ (ಕ್ರೆಡಿಟ್) , ಗೊಬ್ಬರ ಉತ್ಪಾದನೆ ಮತ್ತು ವಿತರಣೆ, ಮೀನು ಸಾಕಣೆ, ಸಕ್ಕರೆ, ವ್ಯಾಪಾರ (ಮಾರ್ಕೆಟಿಂಗ್) ಮುಂತಾದವುಗಳಲ್ಲಿ ಸಹಕಾರ ಅಂದೋಲನದ ಪಾತ್ರವು ಬಹಳ ಮುಖ್ಯವಾಗಿದೆ

ಭಾರತದಲ್ಲಿ 85 ಶೇಕಡಾ ಕೃಷಿಕರು ಸಣ್ಣ ಪ್ರಮಾಣದ ರೈತರು ಅವರ ಕೃಷಿ ಸೀಮಿತವಾದುದು, ರೈತರು ಅನೇಕ ಕಷ್ಟಗಳನ್ನು ಎದುರಿಸಬೇಕಾಗುತ್ತದೆ, ಉದಾಹರಣೆಗೆ ಕಡಿಮೆ ಇಳವರಿ, ಕಡಿಮೆ ಗುಣಮಟ್ಟದ ಪದಾರ್ಥಗಳು ಮುಂತಾದವುಗಳು ಇದೆಲ್ಲಕ್ಕಿಂತ ಹೆಚ್ಚಿನ ಸಮಸ್ಯೆಯೆಂದರೆ ಅವರ ಬೆಳೆಗಳಿಗೆ ಸರಿಯಾದ ಬೆಲೆಯು ದೊರೆಯುವುದಿಲ್ಲ. ಅವರ ಸಾಲವು ಹೆಚ್ಚುತ್ತಾ ಹೋಗುತ್ತದೆ ಅವರು ಋಣಭಾರದಿಂದ ಕುಗ್ಗುತ್ತಾ ಹೋಗುತ್ತಾರೆ. ನಬಾರ್ಡ್‌ನ ಒಂದು ಸಮೀಕ್ಷೆಯಲ್ಲಿ, ಇದನ್ನು ಪಂಜಾಬಿನ ಕೃಷಿ ವಿಶ್ವವಿದ್ಯಾಲಯ ಲುಧಿಯಾನದವರು ನಡೆಸಿರುವರು, ಅದರ ಅನುಸಾರ ಸರಕಾರವು 59 ಶೇಕಡಾ ಸಬ್ಸಿಡಿ ರೂಪದಲ್ಲಿ ದೊಡ್ಡ ಹಾಗೂ ಮಧ್ಯಮ ಪ್ರಮಾಣದ ರೈತರಿಗೆ ಕೊಡುತ್ತಾರೆ ಮತ್ತು ಸಣ್ಣ ಮತ್ತು ಸೀಮಿತ ವರ್ಗದ ರೈತರ ಮೇಲೆ ಋಣಭಾರವು ದೊಡ್ಡ ಹಿಡುವಳಿದಾರರಿಗೆ ಹೋಲಿಸದಾಗ 6 ಪಟ್ಟು ಹೆಚ್ಚಾಗಿದೆ. ಪ್ರಕೃತಿ ವಿಕೋಪಗಳು, ಬರ, ನೆರೆ ಮೊದಲಾದ ಸಮಸ್ಯೆಗಳು ಸ್ವಲ್ಪ ಸಮಯದಿಂದ ರೈತರ ಜೀವನವನ್ನು ಅಸ್ತವ್ಯಸ್ತವಾಗಿಸಿದೆ ಇದರ ಕಾರಣದಿಂದ ಆತ್ಮಹತ್ಯೆಗೆ ಮೊರೆ ಹೋಗುತ್ತಿರುವ ರೈತರ ಸಂಖ್ಯೆಯು ಬಹಳ ತೀವ್ರಗತಿಯಿಂದ ಹೆಚ್ಚುತ್ತಿದೆ, ಅದು ಈ ವರ್ಷವೂ ಕಡಿಮೆಯಾಗಿಲ್ಲ. ಸಾವಿರಾರು ಎಕರೆ ಜಮೀನು ಬರದ ಕಾರಣದಿಂದ ಒಣಗಿ ಹೋಗಿದೆ.

ಪ್ರಾಕೃತಿಕ ಬದಲಾವಣೆಗೆ ಸಂಬಂಧಿಸಿದಂತೆ ಒಂದು ಸದೃಢವಾದ ನೀತಿಯನ್ನು ರೂಪಿಸುವ ಅವಶ್ಯಕತೆ ಇದೆ. ಇದರಿಂದ ನೀರಾವರಿ ವ್ಯವಸ್ಥೆಯ ಸುಧಾರಣೆಯನ್ನು ಮಾಡುವ ಕೃಷಿಗೆ ನೀರಿನ ವ್ಯವಸ್ಥೆಯನ್ನು ಸಮೃದ್ಧವಾಗಿ ಮಾಡುವ ವ್ಯವಸ್ಥೆಯನ್ನು ಮಾಡುವ ಅವಶ್ಯಕತೆ ಇದೆ. ಈ ಹಾದಿಯಲ್ಲಿ ನೀರಿನ ವ್ಯವಸ್ಥೆಯನ್ನು ಮಾಡುವಲ್ಲಿ ಈ ಸಹಕಾರ ಸಂಘಗಳು ಒಳ್ಳೆಯ ಕೊಡುಗೆಯನ್ನು ಕೊಡಬಹುದಾಗಿದೆ. ಸರಕಾರವು ಕೃಷಿಕರ ಆಯವನ್ನು ದುಪ್ಪಟ್ಟು ಮಾಡುವ ವಿಷಯಕ್ಕೆ ಸಂಕಲ್ಪ ಬದ್ಧವಾಗಿದೆ, ಆದರೆ ಇದಕ್ಕೆ ಸಣ್ಣ ಮತ್ತು ಸೀಮಿತ ಹಿಡುವಳಿದಾರರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು ಅತೀ ಅವಶ್ಯಕವಾಗಿದೆ ಮತ್ತು ಪ್ರಕೃತಿ ವಿಕೋಪದಿಂದ ಉಂಟಾಗುವ ಹಾನಿಯಿಂದ ಹೊರಬರಲು ಸಾಧ್ಯವಾದಷ್ಟು ಸಹಾಯವನ್ನು ಮಾಡಬೇಕು. ಈ ರೈತರಿಗೆ ಒಳ್ಳೆಯ ಬೀಜ. ಉತ್ತಮ ಗೊಬ್ಬರ ಮತ್ತು ಬೆಳೆಗಳ ಸುರಕ್ಷತೆಗಾಗಿ ಉತ್ತಮ ಮಟ್ಟದ ಗೋದಾಮುಗಳ ನಿರ್ಮಾಣ ಮಾಡಬೇಕು. ಈ ಅಂದರೆ ಎಲೆಕ್ಟ್ರಾನಿಕ್ ವ್ಯವಸ್ಥೆಯ ಸಂಪರ್ಕ ಕಲ್ಪಿಸಬೇಕು, ಇದರಿಂದ ಅವರಿಗೆ ಅವರು ಬೆಳೆದ ಬೆಳೆಗಳ ಪ್ರಸ್ತುತ ಬೆಲೆಯ ಮಾಹಿತಿಯು ದೊರೆಯುತ್ತದೆ.

ಸರಕಾರವು ಅವರಿಗೆ ಸಾವಯವ ಕೃಷಿ ಮತ್ತು ಬೇರೆ ಬೇರೆ ಹೊಸ ಯೋಜನೆಗಳ ಬಗೆಗೆ, ರಾಷ್ಟ್ರೀಯ ಜೇನು ಸಾಕಣೆ ಮತ್ತು ಜೇನು ಮಿಶಲ್ ಇವುಗಳಿಗೆ ಒತ್ತು ಕೊಡುತ್ತೀವೆ. ಈ ಎಲ್ಲ ಕಾರ್ಯಗಳಲ್ಲಿ ಸಹಕಾರ ಆಂದೋಲನದ ದೊಡ್ಡ ಪ್ರಮಾಣದ ನೆಟ್‌ವರ್ಕ್ ಮತ್ತು ತಲುಪುವ ದೃಷ್ಟಿಯಿಂದ ಲಾಭದಾಯಕವಾಗುತ್ತದೆ. ತರಕಾರಿ, ಹಣ್ಣು, ಹೈನುಗಾರಿಕೆ, ಮೀನು ಸಾಕಣೆ ಮತ್ತು ಇತರೆ ಪದಾರ್ಥಗಳ ನೇರ ವಿತರಣೆ ಮಾರಾಟವು ಅವಶ್ಯಕವಾಗಿದೆ, ಇದರಿಂದ ಸಹಕಾರ ಆಂದೋಲನವು ರೈತರಿಗೆ ಸರಿಯಾದ ಬೆಲೆಯನ್ನು ನೀಡುವಲ್ಲಿ ಸಹಾಯಕವಾಗುತ್ತದೆ. ಭಾರತೀಯ ರಾಷ್ಟ್ರೀಯ ಸಹಕಾರ ಸಂಘದ ವತಿಯಿಂದ ಆಯೋಜಿಸಲಾದ ಮಧ್ಯ ಕ್ಷೇತ್ರದ ಸಹಕಾರ ಸಮ್ಮೇಳನದಲ್ಲಿ ನಾನು ಈ ವಿಷಯದ ಪ್ರಸ್ತಾಪನೆಯನ್ನು ಮಾಡಿದ್ದೆ, ಹಾಗೆ ನೋಡಿದರೆ ಸಹಕಾರ ಸಂಸ್ಥೆಗಳ ಸಹಕಾರದಿಂದ ರೈತರಿಗೆ ಕೃಷಿಗಾಗಿ ಬೀಜ,

ಗೊಬ್ಬರ ಮತ್ತು ಇತರ ಪದಾರ್ಥಗಳು ಸರಳವಾಗಿ ಸಿಗುವಂತೆ ನೋಡಿಕೊಳ್ಳಲಾಗುವುದು, ಆದರೆ ಬೆಳೆಗಳು ಬಂದ ಮೇಲೆ ಅವುಗಳ ಮಾರಾಟದ ಸಮಸ್ಯೆಯು ಎದುರಾಗುವುದು. ಈ ಸಹಕಾರಿ ಸಂಸ್ಥೆಗಳಿಂದ ಮಾತ್ರವೇ ರೈತರ ಬೆಳೆಗಳಿಗೆ ಸರಿಯಾದ ಬೆಲೆಯನ್ನು ದೊರಕುವಂತೆ ಮಾಡುವ ಸಾಮರ್ಥ್ಯವನ್ನು ಹೊಂದಿರುವ ಸಂಸ್ಥೆಯಾಗಿದೆ.

ಕೌಶಲ್ಯಾಭಿವೃದ್ಧಿ ಇಂದು ಸಹಕಾರಿ ಸಂಸ್ಥೆಗಳಿಂದ ವಾಣಿಜ್ಯೀಕರಣ ಮತ್ತು ಪದಾರ್ಥಗಳ ಗುಣಮಟ್ಟವನ್ನು ಕಾಪಾಡಿಕೊಳ್ಳುವಲ್ಲಿ ಬಹಳ ಅವಶ್ಯಕವಾಗಿದೆ ಇದರಿಂದ ಖಾಸಗಿ ಕ್ಷೇತ್ರದಲ್ಲಿ ಇರುವ ಸ್ಪರ್ಧೆಯಲ್ಲಿ ಸಕ್ಷಮವಾಗಿ ಭಾಗವಹಿಸಲು ಅನುಕೂಲಕಾರಿಯಾಗಿದೆ. ಮಧ್ಯಪ್ರದೇಶದ ಸಹಕಾರಿ ಸಂಘಗಳ ಕೆಲಸವು ಪ್ರಶಂಸನಾರ್ಹವಾಗಿದೆ. 2015 ರಿಂದ ರಾಜ್ಯ ಸರಕಾರವು ಕೌಶಲ ಭಾರತ ವಿಕಾಸ ಮಿಷನ್ ಅನ್ನು ಸಹಕಾರಿ ವಿಭಾಗದೊಂದಿಗೆ ಜೋಡಿಸಿದ್ದಾರೆ ಇದರೊಂದಿಗೆ ರಾಜ್ಯ ಸಹಕಾರ ಸಂಘಗಳು ಅವರ ನೋಡಲ್ ಏಜೆಂನ್ಸಿ ರೂಪದಲ್ಲಿ ಕೆಲಸ ಮಾಡಲು ಸೂಚಿಸಲಾಗಿದೆ. ಇದಲ್ಲದೆ ಸಹಕಾರಿ ವಿಭಾಗದೊಳಗೆ ಆಜೀವ ಪರ್ಯಂತರ ಮಿಷನ್‌ನೊಳಗೆ ರಾಜ್ಯ ಮಹಿಳಾ ಸ್ವಯಂ ಸಹಾಯ ಸಮೂಹದೊಂದಿಗೆ ಸೇರಿಸಲಾಗಿದೆ ಜೊತೆಗೆ ಇವರಿಗೆ ಸಹಕಾರಿ ಸಮಿತಿಗಳೊಳಗೆ ಪರಿವರ್ತನೆ ಮಾಡಿ ಅವರಿಗೆ ತರಬೇತಿ ನೀಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಈ ತರಹದ ಕ್ರಮಗಳನ್ನು ಬೇರೆ ರಾಜ್ಯಗಳ ಸರಕಾರಗಳೂ ಮಾಡಬೇಕು

ಭಾರತೀಯ ರಾಷ್ಟ್ರೀಯ ಸಹಕಾರಿ ಸಂಘವು ಸ್ವಲ್ಪ ಸಮಯಕ್ಕೆ ಮೊದಲು ರಾಷ್ಟ್ರೀಯ ಮಟ್ಟದಲ್ಲಿ ಕೌಶಲ್ಯ ಅಭಿವೃದ್ಧಿ ಬಗೆಗೆ ಒಂದು ಕಾರ್ಯಾಗಾರವನ್ನು ಆಯೋಜಿಸಿತ್ತು ಅದರಲ್ಲಿ ದೇಶದ ಅನೇಕ ಕೌಶಲ್ಯಾಭಿವೃದ್ಧಿ ಸಂಸ್ಥೆಗಳು ಪಾಲ್ಗೊಂಡಿದ್ದವು. ಅಲ್ಲಿ ಪಾಲ್ಗೊಂಡ ಸಂಸ್ಥೆಗಳೆಲ್ಲರ ಅಭಿಪ್ರಾಯದಲ್ಲಿ ಈ ಎಲ್ಲ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಈ ಸಹಕಾರಿ ಸಂಸ್ಥೆಗಳು ಸೂಕ್ತವಾದ ಮಾಧ್ಯಮವೆಂದು ಹೇಳಿರುವವು ಮತ್ತು ಅವರುಗಳು ಭಾರತೀಯ ರಾಷ್ಟ್ರೀಯ ಸಹಕಾರಿ ಸಂಘದೊಂದಿಗೆ ಸೇರಿ ಕೆಲಸ ಮಾಡುವ ಆಸಕ್ತಿಯನ್ನು ಹೊಂದಿರುವುದಾಗಿ ತಮ್ಮ ಇಂಗಿತವನ್ನು ವ್ಯಕ್ತ ಪಡಿಸಿದರು.

ಸರಕಾರಿ ನೀತಿಗಳಲ್ಲಿ ಸಹಕಾರಿ ಕ್ಷೇತ್ರಕ್ಕೆ ಪ್ರಾಮುಖ್ಯತೆಯನ್ನು ಕೊಡಿಸಲು ಭಾರತೀಯ ರಾಷ್ಟ್ರೀಯ ಸಹಕಾರಿ ಸಂಘವು ನೀತಿ ಆಯೋಗದೊಂದಿಗೆ ನಿರಂತರವಾಗಿ ಸಂಪರ್ಕವನ್ನು ಇಟ್ಟುಕೊಂಡಿದೆ. ನಾವು ಬಹಳಷ್ಟು ಸಲ ನೀತಿ ಆಯೋಗದ ಸದಸ್ಯರೊಂದಿಗೆ ಸಹಕಾರಿ ಕ್ಷೇತ್ರದ ಅಧಿಕಾರಿಗಳೊಂದಿಗೆ ಹೋಗಿ ಸಹಕಾರಿ ಕ್ಷೇತ್ರದ ಸಮಸ್ಯೆಗಳ ಬಗೆಗೆ ಮಾಹಿತಿಯನ್ನು ನೀಡಿದ್ದಲ್ಲದೇ ನೀತಿ ಆಯೋಗದ ಪ್ರಮುಖರಾದ ವೈಕುಂಠ ಭಾಯಿ ಮೆಹತಾ ಭಾಷಣ ಮಾಡಲು ಭಾರತೀಯ ರಾಷ್ಟ್ರೀಯ ಸಂಘಕ್ಕೆ ಬಂದಿದ್ದರು ಆಗ ಅವರ ಮುಂದೆ ಸಹಕಾರಿ ಆಂದೋಲನದ ಸಾಧನೆಗಳು ಸಹಕಾರಿ ಆಂದೋಲನದ ಮುಂದಿರುವ ಸವಾಲುಗಳನ್ನು ಸಮಸ್ಯೆಗಳನ್ನು ಸವಿವರವಾಗಿ ಕೂಲಂಕಷವಾಗಿ ಚರ್ಚೆ ಮಾಡಲಾಯಿತು

ಪ್ರಾಥಮಿಕ ಸಹಕಾರಿ ಸಮಿತಿ, ಇದು ಕೃಷಿಕರಿಗೆ ಸಂಬಂಧಿಸಿದ ಸಂಸ್ಥೆಗಳಾಗಿವೆ, ಅವರ ಪರಿಸ್ಥಿತಿ ದಿನದಿಂದ ದಿನಕ್ಕೆ ಕಷ್ಟಕರವಾಗುತ್ತಿದೆ ಅವರ ಸಮಸ್ಯೆಗಳನ್ನು ಬೆಳಕಿಗೆ ತಂದು ಅವುಗಳನ್ನು ಪರಿಹರಿಸಲು ಮತ್ತು ಅವರನ್ನು ಸಶಕ್ತರನ್ನಾಗಿ ಮಾಡಲು ಹೊಸ ವಿಚಾರ ಮತ್ತು ಹೊಸ ನೀತಿಗಳನ್ನು ಮಾಡಲು ಒತ್ತು ನೀಡಲಾಗಿದೆ. ನಾವು ಹೇಳಿದ್ದೇವೆ ದೇಶದ ಪ್ರತಿಯೊಂದು ಬ್ಲಾಕ್ ಮಟ್ಟದಲ್ಲಿ ಪ್ರತಿಯೊಂದು ಸ್ಥಳದಲ್ಲಿ ಒಂದು ಪ್ರಾಥಮಿಕ ಸಹಕಾರಿ ಸಮಿತಿಗೆ ನೋಡಲ್ ಏಜೆನ್ಸಿಯಾಗಿ ಪರಿವರ್ತಿತಗೊಳಿಸಬೇಕು, ಮತ್ತು ಅವರಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಅನುಕೂಲತೆಗಳನ್ನು ಮಾಡಿಕೊಡಬೇಕು, ಮತ್ತು ಇವುಗಳನ್ನು ಸರಕಾರಿ ಯೋಜನೆಗಳೊಂದಿಗೆ ಸೇರಿಸಬೇಕು, ಇದರಿಂದ ರೈತರಿಗೆ ಉತ್ತಮ ಸೌಲಭ್ಯಗಳು ದೊರಕುತ್ತವೆ. ಇಂದು ಸರಕಾರವು 68000 ಪೈಕ್ಸ್‌ಗಳ ಕಂಪ್ಯೂಟರೀಕರಣ ಮಾಡಲು ಆರ್ಥಿಕ ಸಹಾಯವನ್ನು ಮಾಡುತ್ತಲಿದೆ ಅದರಂತೆಯೇ ಈ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಮತ್ತಷ್ಟು ಸಶಕ್ತ ಮಾಡಲು ನಮ್ಮ ನಂಬಿಕೆಯಂತೆ ಭಾರತೀಯ ರಾಷ್ಟ್ರೀಯ ಸಹಕಾರಿ ಸಂಘದ ಪ್ರಸ್ತಾವನೆಗೆ ಮಹತ್ವವನ್ನು ನೀಡುತ್ತದೆ. ಎಷ್ಟೋ ಕೃಷಿಪತ್ತಿನ ಸಹಕಾರ ಸಂಘಗಳಿಗೆ ವರಮಾನ ತೆರಿಗೆ ಅಧಿಕಾರಿಗಳು ಹಸ್ತಕ್ಷೇಪದಿಂದ ಎಷ್ಟೊಂದು ಸಮಸ್ಯೆಗಳನ್ನು ಎದುರಿಸಬೇಕಾದ ಸಂದರ್ಭವು ಬಂದೊದಗಿದೆ, ಈ ವಿಷಯವನ್ನು ಗಂಭೀರತೆಯಿಂದ ಪರಿಗಣಿಸಿ ನಾವು ಸರಕಾರಕ್ಕೆ ಇವರಿಗೆ ಇರುವ ಸಮಸ್ಯೆಯನ್ನು ತಿಳಿಸಿದ್ದೇವೆ.

**ಸರಕಾರವು ರೈತರ ವರಮಾನವನ್ನನು ದುಪ್ಪಟ್ಟು ಮಾಡಲು ಸಂಕಲ್ಪವನ್ನು ಮಾಡಿದೆ, ಆದರೆ ಇದಕ್ಕೆ ಮೊದಲು ಸಣ್ಣ ಮತ್ತು ಸೀಮಿತ ಹಿಡುವಳಿದಾರರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕಾಗಿದೆ ಮತ್ತು ಅವರಿಗೆ ಪ್ರಾಕೃತಿಕ ವಿಕೋಪದಿಂದ ಉಂಟಾಗುವ ವಿಪತ್ತಿನಿಂದ ಹಾನಿಯಿಂದ ಹೊರಬರಲು ಸಾಧ್ಯವಾದ ಮಟ್ಟಿಗೆ ಸಹಾಯವನ್ನೂ ಮಾಡಬೇಕಾಗಿದೆ.**

ನಮಗೆ ಈ ವರ್ಷ ಬಜೆಟ್ಟಿನಲ್ಲಿ ನಿಶ್ಚಿತವಾಗಿ ಸಹಕಾರಿ ಸಮಿತಿಗಳಿಗೆ ಸಂಬಂಧಿಸಿದಂತೆ ಮತ್ತು ಅವುಗಳ ಸಮಸ್ಯೆಗಳ ಬಗೆಗೆ ಯಾವುದಾದರೊಂದು ಯೋಜನೆಯನ್ನು ಮಾಡುವರೆಂಬ ಆಸೆ ಇದ್ದಿತು, ಆದರೆ ನಮಗೆ ವಿಷಾದವೆನಿಸುತ್ತಿದೆ ಏಕೆಂದರೆ ಈ ವರ್ಷ ಬಜೆಟ್ಟಿನಲ್ಲಿ ಸಹಕಾರಿ ಸಂಘಗಳ ಬಗೆಗೆ ಯಾವುದೇ ಯೋಜನೆಯನ್ನು ಚರ್ಚಿಸಿಲ್ಲ. ಫಾರ್ಮ್ ಪ್ರೊಡ್ಯೂಸರ್ ಆರ್ಗನೈಸೆಷನ್ (ಎಫ್‌ಪಿಒಗಳು)ಗಳ ಜೊತೆಗೆ ಸಹಕಾರಿ ಸಂಘಗಳನ್ನು ಮಾಡಲು ಮತ್ತು ಅವುಗಳಿಗೆ ಪ್ರಾಥಮಿಕತೆಯನ್ನು ನೀಡಲು ಮತ್ತು ಹಲವು ಸೌಲಭ್ಯಗಳನ್ನು ನೀಡುವ ಅವಶ್ಯಕತೆ ಇದೆ. ಫಾರ್ಮ್ ಪ್ರೊಡ್ಯೂಸರ್ ಆರ್ಗನೈಸೆಷನ್ (ಎಫ್‌ಪಿಒಗಳು) ಮತ್ತು ಸಹಕಾರಿ ಸಂಘಗಳು ಜೊತೆಗೂಡಿ ಕೆಲಸ ಮಾಡುವ ಅವಶ್ಯಕತೆ ಇದೆ, ಇದರಿಂದ ದೇಶದ ಆರ್ಥಿಕ ಪರಿಸ್ಥಿತಿಯು ಸದೃಢವಾಗಲು ಸಹಾಯಕವಾಗುತ್ತದೆ.

ಸಹಕಾರಿ ಸಂಘಗಳಿಗೆ ವರಮಾನ ತೆರಿಗೆಯಿಂದ ಮುಕ್ತಿ ನೀಡಲು ಬಹಳ ವರ್ಷಗಳಿಂದ ಬೇಡಿಕೆಯನ್ನು ಇಡಲಾಗುತ್ತಿದೆ ಆದರೆ ಇನ್ನುವರೆಗೂ ಸರಕಾರವು ಈ ಪ್ರಸ್ತಾಪಕ್ಕೆ ಸಮ್ಮತಿಯನ್ನು ನೀಡಿರುವುದಿಲ್ಲ. ಹೀಗಿರುವಾಗ ಖಾಸಗಿ ಕ್ಷೇತ್ರಗಳಿಗೆ ಎಲ್ಲ ಸೌಲಭ್ಯಗಳು ದೊರೆಯುತ್ತಿರುವಾಗ, ಸಹಕಾರಿ ಕ್ಷೇತ್ರದಂತಹ

ಪ್ರಮುಖ ವಿಷಯದ ಬಗೆಗೆ ಸರಕಾರವು ಏತಕ್ಕಾಗಿ ಈ ರೀತಿಯ ಉದಾಸೀನ ಭಾವವನ್ನು ತಾಳಿದೆ ಎಂದು ತಿಳಿಯದಾಗಿದೆ. ಇದೊಂದು ಎಲ್ಲ ಕೋ ಆಪರೇಟಿವ್ ಬ್ಯಾಂಕ್‌ಗಳು, ಅದರಲ್ಲಿ ನಗರ ಸಾಲ ಸಹಕಾರಿ ಬ್ಯಾಂಕ್‌ಗಳು ಕೂಡ ಸೇರಿ ಒಂದು ಅಂಬ್ರೆಲ್ಲಾ ಸಂಸ್ಥೆಯನ್ನು ಸ್ಥಾಪಿಸುವ ಅವಶ್ಯಕತೆ ಇದೆ, ಇದರಿಂದ ಸಹಕಾರಿ ಬ್ಯಾಂಕ್‌ಗಳ ಕೆಲಸ ಸುಲಲಿತವಾಗಿ ನಡೆಯಬಹುದಾಗಿದೆ. ನಾವು ರಿಸರ್ವ್ ಬ್ಯಾಂಕ್‌ನ ಗವರ್ನರ್ ಅವರಿಗೆ ಪತ್ರವನ್ನು ಬರೆದಿರುತ್ತೇವೆ ಅದರ ಒದಲು ಸ್ಥಾಪಿಸಿದ ಕೋ ಆಪರೇಟಿವ್ ಬ್ಯಾಂಕ್ ಆಫ್ ಇಂಡಿಯಾ (ಸಿಒಬಿಐ)ಯನ್ನು ಸದೃಢವಾಗಿಸುವ ಅವಶ್ಯಕತೆ ಇದೆ ಮತ್ತು ಅದಕ್ಕೆ ಪರವಾನಗೆಯನ್ನು ನೀಡಿದಲ್ಲಿ ಅದು ತನ್ನ ಕೆಲಸವನ್ನು ಸುಲಲಿತವಾಗಿ ಮಾಡಿಕೊಳ್ಳಲು ಸಶಕ್ತವಾಗುತ್ತದೆ.

ಇಂದು ಸಮಯದ ಬೇಡಿಕೆ ಏನೆಂದರೆ ಸಹಕಾರಿ ಕ್ಷೇತ್ರದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಲು ಮುಂದೆ ಬರಬೇಕು ಈ ಹಾದಿಯಲ್ಲಿ ಕೃಷಿಯ ಉತ್ಪಾದನೆಗಳ ರಫ್ತು ಮಾಡಲು ಬಹಳ ದೊಡ್ಡ ಪ್ರಮಾದಲ್ಲಿ ನಮ್ಮ ಸಹಯೋಗವನ್ನು ಕೊಡಬಹುದಾಗಿದೆ. ಭಾರತೀಯ ರಾಷ್ಟ್ರೀಯ ಸಹಕಾರ ಸಂಘವು ಈ ಕ್ಷೇತ್ರದಲ್ಲಿ ಮುಂದೆ ಬರುವ ಆಸಕ್ತಿಯನ್ನು ಹೊಂದಿದೆ, ಆದ್ದರಿಂದ ಈ ವಿಷಯವಾಗಿ ನಾವು ಸರಕಾರಕ್ಕೆ ಪತ್ರವನ್ನೂ ಬರೆದಿದ್ದೇವೆ. ಅದರಂತೆಯೇ ಇಂದಿನ ಯುಗ ಉದ್ದಿಮೆಗಳ ಯುಗವಾಗಿದೆ. ಇಂದು ಎಲ್ಲ ಕ್ಷೇತ್ರಗಳಲ್ಲೂ ಕೆಲಸದ ಅಭಾವ ಉಂಟಾಗುತ್ತಿರುವ ಕಾರಣ ಸರಕಾರವು ಸ್ವಂತ ಉದ್ದಿಮೆಗಳಿಗೆ ಮಹತ್ವವನ್ನು ನೀಡುತ್ತಲಿದೆ, ಇದರಿಂದ ಯುವಜನತೆಗೆ ತಮ್ಮ ಸ್ವಂತ ಉದ್ದಿಮೆಯನ್ನು ಸ್ಥಾಪಿಸಿ ಸ್ವಾವಲಂಬಿಗಳಾಗಬೇಕೆಂದು ಸರಕಾರದ ಆಶಯವಾಗಿದೆ. ಸ್ಟಾರ್ಟ್ ಅಪ್ ಉದ್ಯಮಗಳನ್ನು ಬೆಳೆಸಲು ಸರಕಾರವು ಅನೇಕ ಯೋಜನೆಗಳನ್ನು ಆರಂಭಿಸಿದೆ. ಸಹಕಾರ ಸಂಘಗಳೂ ಕೂಡ ಒಂದು ರೀತಿಯ ಸ್ಟಾರ್ಟ್ ಅಪ್ ಉದ್ಯಮವೇ ಆಗಿದೆ, ಆದರೆ ಖಾಸಗಿ ಸಂಸ್ಥೆಗಳಂತೆ ಕೇವಲ ಲಾಭದ ಆಧಾರದ ಮೇಲೆ ಕೆಲಸವನ್ನು ನಿರ್ವಹಿಸುವುದಿಲ್ಲ. ಮತ್ತು ಸಹಕಾರಿ ಸಂಘಗಳ ಉದ್ದೇಶ ಒಂದು ಸಿದ್ಧಾಂತದ ಆಧಾರದ ಮೇಲೆ ನಿಂತಿದ್ದು ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯತ್ತ ಸಾಗುವುದಾಗಿದೆ, ಈ ನಿಟ್ಟಿನಲ್ಲಿ ಭಾರತ ಸರಕಾರವು 1000 ಕೋಟಿ ಮೊತ್ತದ ಒಂದು ಯೋಜನೆಯನ್ನು ರೂಪಿಸಿದ್ದಾರೆ, ಇದನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿಯನ್ನು ರಾಷ್ಟ್ರೀಯ ಸಹಕಾರಿ ವಿಕಾಸ ನಿಗಮಕ್ಕೆ ಈ ಕೆಲಸವನ್ನು ನಡೆಸುತ್ತಲಿದೆ. ಈ ಯೋಜನೆಯ ಸಫಲತೆಗಾಗಿ ಎಲ್ಲ ಸಹಕಾರಿ ಸಂಸ್ಥೆಗಳು ಒಟ್ಟಾಗಿ ಕೆಲಸವನ್ನು ಮಾಡಬೇಕಾಗಿದೆ, ಇಂತಹ ಯೋಜನೆಗಳಲ್ಲಿ ಯುವಜನತೆ ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸಿ ಸರಕಾರದ ಸಹಾಯದೊಂದಿಗೆ ಸಹಕಾರಿ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡಬಹುದಾಗಿದೆ ಇದರಿಂದ ಸಮಾಜದ ಉನ್ನತಿಯೂ ಆಗುತ್ತದೆ. ಭಾರತೀಯ ರಾಷ್ಟ್ರೀಯ ಸಹಕಾರಿ ಸಂಘ, ಹಿಂದಿನ ಕೆಲವು ವರ್ಷಗಳಿಂದ ಶಾಲಾ ಕಾಲೇಜು ಹಾಗೂ ವಿಶ್ವ ವಿದ್ಯಾಲಯಗಳಲ್ಲಿ ಸಹಕಾರಿ ಶಿಕ್ಷಣದ ಪ್ರಚಾರದಿಂದ ಅದನ್ನು ಲೋಕಪ್ರಿಯ ಮಾಡಲು ಬಹಳ ಪ್ರಯತ್ನವನ್ನು ನಡೆಸಿದೆ, ಮುಂದಿನ ವರ್ಷಗಳಲ್ಲಿ ಈ ಸಂಸ್ಥೆಗಳು ಸಹಕಾರಿಉದ್ದಿಮೆಗಳ ಬಗೆಗೆ ಒಂದು ಹೊಸ ತರಬೇತಿಯ ಮಾದರಿಯನ್ನು ವಿಕಸಿತಗೊಳಿಸುವವರಿದ್ದಾರೆ ಇದರಿಂದ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ತಮ್ಮ ಔದ್ಯೋಗಿಕ ಭವಿಷ್ಯವನ್ನು ಸಹಕಾರಿ ಸಮಿತಿಗಳನ್ನು ಸ್ಥಾಪನೆ ಮಾಡುವುದರ ಮೂಲಕ ಆರಂಭಿಸಲು ಸಹಾಯವಾಗುತ್ತದೆ ಮತ್ತು ನಿರುದ್ಯೋಗದ ಸಮಸ್ಯೆ ತನ್ನಿಂದ ತಾನೇ ಪರಿಹಾರವಾದಂತಾಗುತ್ತದೆ.

ಸಹಕಾರಿ ಕ್ಷೇತ್ರದಲ್ಲಿ ಸರಕಾರದ ಮಟ್ಟದಲ್ಲಿ ಅದಕ್ಕೆ ಪೂರ್ಣ ರೂಪದ ಮಾನ್ಯತೆಯನ್ನು ಕೊಡಿಸಲು ಅದರ ಪರವಾದವನ್ನು ಮತ್ತು ಅಭಿಪ್ರಾಯ ಸಂಗ್ರಹಣೆಯನ್ನು ಮಾಡಬೇಕು, ಸಮರ್ಥನೆಯನ್ನು ಹೆಚ್ಚಿಸಕೊಳ್ಳಬೇಕು ಮತ್ತು ಇದಕ್ಕೆ ಅವಶ್ಯಕವಾದ ಅಂಶವೆಂದರೆ ಸಹಕಾರಿ ಸಿದ್ಧಾಂತದ 6ನೇ ಸಿದ್ಧಾಂತವಾಗಿದೆ "ಸಹಕಾರಿ ಸಂಘಗಳ ನಡುವೆ ಸಹಯೋಗ" ಇದನ್ನು ಅಳವಡಿಸಿಕೊಳ್ಳಬೇಕು, ಅಂತಾರಾಷ್ಟ್ರೀಯ ಸಹಕಾರಿ ನಕ್ಷೆಯಲ್ಲಿ "ಸಹಕಾರಿ ಸಂಘಗಳ ನಡುವೆ ಸಹಯೋಗ" ದ ಸಹಾಯವು ಬಹಳ ವೇಗದಿಂದ ಉದಯಿಸುತ್ತಿದೆ ಮತ್ತು ಇಂದು ಇದರ ಮಹತ್ವವು ಭಾರತೀಯ ಸಹಕಾರಿ ಸಂಘಗಳ ದೃಷ್ಟಿಕೋನದಿಂದ ಬಹಳ ಹೆಚ್ಚಿನ ಮಹತ್ವವನ್ನು ಪಡೆದಿದೆ. ನಾವು ಒಂದಾಗಿ ಸೇರಿ ಆರ್ಥಿಕ ಹಾಗೂ ಸಾಮಾಜಿಕ ಶಕ್ತಿಯನ್ನು ಹೆಚ್ಚಿಸಲು ಪ್ರಯತ್ನಿಸಬೇಕು ಮತ್ತು ಒಂದು ಹೊಸದಾದ ವೇದಿಕೆಯಲ್ಲಿ ಒಂದಾಗಿ ನಮ್ಮ ಸಮಸ್ಯೆಗಳನ್ನು ಸರಕಾರಕ್ಕೆ ಮುಟ್ಟಿಸಬೇಕು ಇದರಿಂದ ನಮ್ಮ ಧ್ವನಿಯು ಮತ್ತಷ್ಟು ಗಟ್ಟಿಯಾಗುತ್ತದೆ.

ಇತ್ತೀಚಿಗೆ ಪಂಜಾಬ್‌ನ ಸಹಕಾರಿ ಮಂತ್ರಿಯವರು ರಾಷ್ಟ್ರೀಯ ಸಹಕಾರ ಮಂತ್ರಿಗಳ ಫೋರಮ್‌ನ್ನು ಮಾಡುವ ವಿಚಾರವನ್ನು ಹೇಳಿದ್ದರು, ಈ ವಿಚಾರವು ನಿಶ್ಚಯವಾಗಿ ವಿಚಾರಣೀಯವಾದ ಅಂಶವಾಗಿದೆ. ಸಹಕಾರದ ವಿಚಾರವು ರಾಜ್ಯಗಳ ವಿಚಾರವಾದ್ದರಿಂದ ಎಲ್ಲ ರಾಜ್ಯಗಳ ಸಹಕಾರ ಮಂತ್ರಿಗಳು ಮತ್ತು ಸಂಸದರನ್ನು ಹೊಂದಿರುವ ಒಂದು ವೇದಿಕೆಯ ಮೇಲೆ ಒಟ್ಟಾಗಿ ತರುವುದು, ಇದರಿಂದ ಸರಕಾರಕ್ಕೆ ನಮ್ಮ ಸಮಸ್ಯೆಯನ್ನು ತಲುಪಿಸಲು ಸರಳವಾಗುತ್ತದೆ ಮತ್ತು ಸರಕಾರವು ನಮ್ಮ ಸಮಸ್ಯೆಗೆ ಪರಿಹಾರವನ್ನು ಕಂಡು ಹಿಡಿಯುತ್ತಾರೆ. ಇಂದಿನ ಸಮಾಜದಲ್ಲಿ ಪರಸ್ಪರ ಸಹಕಾರದಿಂದಲೇ ಸಮಸ್ಯೆಗಳ ಪರಿಹಾರದ ಕಾಲವಾಗಿದೆ ಮತ್ತು ಬೇರೆ ಬೇರೆ ಕ್ಷೇತ್ರಗಳಲ್ಲಿ ಬೇರೆ ಬೇರೆ ಸಂಸ್ಥೆಗಳು ಪರಸ್ಪರ ಎಮ್‌ಒಯು ಮೂಲಕ ತಮ್ಮ ವ್ಯವಹಾರವನ್ನು ವ್ಯಾಪಾರವನ್ನು ತಮ್ಮ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಸಹಕಾರಿ ಕ್ಷೇತ್ರವು ಈ ವಿಷಯದಲ್ಲಿ ಹಿಂದೆ ಬೀಳಬಾರದು, ಅವರು ಕೂಡ ಸಹಕಾರಿ ಹೊರಗಿರುವ/ ಅಂತಾರಾಷ್ಟ್ರೀಯ ಸಂಸ್ಥೆಗಳಿಂದ ವಿಭಿನ್ನ ಕೆಲಸಗಳಿಗೆ ಎಮ್‌ಒಯು ಮಾಡಿಕೊಳ್ಳಬೇಕು, ಆದರೆ ಎಲ್ಲಕ್ಕಿಂತ ಹೆಚ್ಚಾಗಿ ಅವರು ತಮ್ಮ ಸಹಕಾರಿ ಸಂಸ್ಥೆಯ ಸಾಮರ್ಥ್ಯವನ್ನು ಮೊದಲಿಗೆ ತಿಳಿದುಕೊಳ್ಳಬೇಕು ಮತ್ತು ಪರಸ್ಪರ ಹೊಂದಾಣಿಕೆಯಿಂದ ಕೆಲಸವನ್ನು ಮಾಡಿಕೊಳ್ಳಬೇಕು ಈ ಮನಃಸ್ಥಿತಿಯನ್ನು ಬೆಳೆಸಿಕೊಳ್ಳಬೇಕು, ಪರಸ್ಪರ ಹೊಂದಾಣಿಕೆಯ ಮನೋಭಾವವನ್ನು ಪ್ರೋತ್ಸಾಹಿಸಬೇಕು.

# ಸಹಕಾರಿ ಸಂಘಗಳು ಗ್ರಾಮೀಣ ಭಾರತದ ಹೃದಯದ ಮಿಡಿತವಾಗಿವೆ

– ಅರವಿಂದ ಕುಮಾರ ಸಿಂಗ್

– ಮೂಲ ಅನುವಾದ : ಶ್ರೀಮತಿ ಮಾಧುರಿ ದೇಶಪಾಂಡೆ

**ಸರಕಾರದ ದೃಷ್ಟಿ 2022ರವರೆಗೆ ಎಲ್ಲ ರೈತರ ಆದಾಯನ್ನು ದುಪ್ಪಟ್ಟ ಮಾಡುವದಾಗಿದೆ. ಈ ಇಚ್ಚಿನಲ್ಲಿ ಸಾಧ್ಯವಾದ ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಸಹಕಾರಿ ಕ್ಷೇತ್ರವು ಸರಕಾರದ ಈ ಕನಸಿಗೆ ಮತ್ತಷ್ಟು ಚಿತ್ತಾರವನ್ನು ಮೂಡಿಸಬಹುದಾಗಿದೆ.**

ಆರ್ಥಿಕ ಉದಾರೀಕರಣದ ನಂತರ ಬಂದ ಎಲ್ಲ ಸವಾಲುಗಳನ್ನು ಎದು–ರಿಸುತ್ತಾ ಭಾರತೀಯ ಸಹಕಾರಿ ಆಂದೋಲನವು ವಿಶ್ವ ಮಟ್ಟದಲ್ಲಿ ತನ್ನದೇ ಆದ ಒಂದು ಉನ್ನತ ಸ್ಥಾನವನ್ನು ಪಡೆಯಿತು. ವಿಶ್ವದ ಸಹಕಾರಿ ಆಂದೋಲನ ಕ್ಷೇತ್ರದಲ್ಲಿ ಬಹಳ ದೊಡ್ಡ ಹೆಸರನ್ನು ಪಡೆದಿದೆ. ಭಾರತದಲ್ಲಿ ಎಲ್ಲ ಕ್ಷೇತ್ರಗಳಲ್ಲಿ, ಎಲ್ಲ ಮಟ್ಟಗಳಲ್ಲಿ ಒಟ್ಟಾರೆ ಆರು ಲಕ್ಷ ಸಹಕಾರಿ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ, ಇವುಗಳ ಸದಸ್ಯರು 25 ಕೋಟಿ ಜನರಿಗೂ ಹೆಚಾಗಿದ್ದಾರೆ. ಸಹಕಾರಿ ಸಂಸ್ಥೆಗಳ ವ್ಯಾಪ್ತಿಯು ಶೇಕಡಾ 100ರಷ್ಟು ಹಳ್ಳಿಗಳಲ್ಲಿ ಮತ್ತ 97 ಶೇಕಡಾ ಗ್ರಾಮೀಣ ಪರಿವಾರಗಳವರೆಗೆ ಹಬ್ಬಿದೆ. ಬಹಳಷ್ಟು ಪ್ರತಿಸ್ಪರ್ಧೆ ಮತ್ತು ಏಳುಬೀಳುಗಳು ನಡುವೆಯೂ ಸಹಕಾರಿ ಆಂದೋಳಲನವು ಗ್ರಾಮೀಣ ಪ್ರದೇಸದ ಹೃದಯದ ಬಡಿತವಾಗಿದೆ.

ಭಾರತದ ಸಹಕಾರಿ ಕ್ಷೇತ್ರದಲ್ಲಿ ಭಾರತೀಯ ರಾಷ್ಟ್ರಭಾಷೆ ಹಿಂದಿಯ ಜೊತೆಗೆ ಇತರ ಭಾರತೀಯ ಭಾಷೆಗಳ ಉನ್ನತಿಯಲ್ಲೂ ಪ್ರಮುಖ ಪಾತ್ರ ವಹಿಸುತ್ತಿದೆ. ಎಲ್ಲ ಕ್ಷೇತ್ರಗಳಲ್ಲೂ ಸಹಕಾರಿ ಸಮಿತಿಗಳು ಇದ್ದು ಆ ಪ್ರದೇಶದ ಕ್ಷೇತ್ರೀಯ ಭಾಷೆಯಲ್ಲೇ ವ್ಯವಹಾರವನ್ನು ನಡೆಸಲಾಗುತ್ತಿದೆ. ದೇಶದ ಸಹಕಾರಿ ಆಂದೋಲನದ ಪ್ರತಿನಿಧಿತ್ವವನ್ನು ಮಾಡುತ್ತಿರುವ ಅತ್ಯುನ್ನತ ಸಂಸ್ಥೆಯಾದ ಭಾರತೀಖಯ ರಾಷ್ಟ್ರೀಯ ಸಹಕಾರಿ ಸಂಘವು ಹಿಂದಿಯ ಪ್ರಚಾರ ಮತ್ತು ಪ್ರಸಾರವನ್ನು ಮಾಡುತ್ತದೆ ಮತ್ತು ಹೀಗೆ ಪ್ರೋತ್ಸಾಹ ನೀಡುವಲ್ಲು ಅಗ್ರ ಸ್ಥಾನದಲ್ಲಿದೆ ಇದಲದಲಿ ಇನ್ನು ಅನೇಕ ಸಹಕಾರಿ ಸಂಸ್ಥೆಗಳೂ ರಾಷ್ಟ್ರ ಭಾಷೆ ಹಿಂದಿಯ ಬೆಳವಣಿಗೆಗೆ ತಮ್ಮ ಪ್ರಮುಖ ಕೊಡುಗೆಯನ್ನು ನೀಡುತ್ತಲಿವೆ

ಆಧುನಿಕ ಸಹಕಾರಿ ಸಂಸ್ಥೆಗಳ ವಿಕಾಸಕ್ಕೂ ಮೊದಲು ಪ್ರಾಚೀನ ಭಾರತದಲ್ಲಿ ಸಹಕಾರದ ಭಾವ ಮೊದಲೇ ಇತ್ತು. ಸಹಕಾರಿ ಶಬ್ದದ ಉಗಮವೇ ಸಹಕಾರದಿಂದ ಆಗಿರುತ್ತದೆ, ಇದರ ಅರ್ಥ ಎಲ್ಲರೂ ಜೊತೆಗೂಡಿ ಕೆಲಸ ಮಾಡುವುದು ಎಂದಾಗಿದೆ. ಭಾರತದಲ್ಲಿ ಹಸಿರು ಮತ್ತು ಶ್ವೇತ ಕ್ರಾಂತಿಯಲ್ಲಿ ಸಹಕಾರಿ ಕ್ಷೇತ್ರವು ಐತಿಹಾಸಿಕವಾದ ಪಾತ್ರವನ್ನು ನಿರ್ವಹಿಸಿದೆ. ಸಹಕಾರಿ ಕ್ಷೇತ್ರವು ದೇಶದ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ, ಆದರೆ ಗ್ರಾಮೀಣ ಭಾರತದ ಸಾಮಾಜಿಕ ಆರ್ಥಿಕದ ಉನ್ನತಿಯಲ್ಲಿ ಸಹಕಾರಿ ಕ್ಷೇತ್ರದ ಕೊಡುಗೆ ಬಹಳ ದೊಡ್ಡ ಪ್ರಮಾಣದ್ದಾಗಿದೆ. ಈ ಕ್ಷೇತ್ರವು ಬಹಳ ದೊಡ್ಡ ಪ್ರಮಾಣದಲ್ಲಿ ಜನರಿಗೆ ಉದ್ಯೋಗದ ಅವಕಾಶವನ್ನು ನೀಡುದರ ಜೊತೆಗೆ ಸಮಾಜದ ಅತೀ ಕೆಳಮಟ್ಟದಲ್ಲಿರುವ ಜನರಿಗೆ ಆಶ್ರಯವನ್ನು ನೀಡಿ ಆಧಾರವಾಗಿದೆ. ಮೀನು ಸಾಕಣೆ, ಕೂಲಿ, ಕೈಮಗ್ಗ ಕೇತ್ರಗಳಲ್ಲಿ ಮತ್ತು ಮಹಿಳಾ ಸಹಕಾರಿ ಕ್ಷೇತ್ರದಲ್ಲಿ ಇದರೊಂದಿಗೆ ಬುಡಕಟ್ಟಿನ ಜನರ ಸಹಕಾರ ಕ್ಷೇತ್ರದಲ್ಲೂ ಸಹ ಪಾತ್ರ ವಹಿಸಿದೆ. ವಾಸಸ್ಥಳದ ಸಹಕಾರಿ ಕ್ಷೇತ್ರದಲ್ಲಿ ಬಡವರ ಮನೆಯನ್ನು ಕಟ್ಟುವ ಕನಸನ್ನು ನನಸಾಗಿಸುವಲ್ಲಿ ಬಹಳ ಸಹಾಯವನ್ನು ಮಾಡಿದೆ.

ನಾವು ರಾಷ್ಟ್ರಪಿತ ಮಹಾತ್ಮಾ ಗಾಂಧಿಜೀ ಅವರ 150ನೇ ಜನ್ಮ ಶತಮಾನೋತ್ಸವವನ್ನು ಆಚರಿಸುತ್ತಿದ್ದೇವೆ, ಅದರಲ್ಲಿ ಸಹಕಾರಿ ಕ್ಷೇತ್ರದಲ್ಲಿ ಆಂದೋಲನವನ್ನು ಪ್ರೇರೆಪಿಸಿ ಪ್ರೋತ್ಸಾಹಿಸುತ್ತದ್ದೇವೆ. ಸ್ವಾತಂತ್ರ್ಯದ ನಂತರ ಅವರು ಅವರ ಅನುಯಾಯಿಗಳಿಗೆ ಕರೆ ನೀಡಿದ್ದರು ಹಳ್ಳಿಗಳಲ್ಲಿ ಇದ್ದು ಮತ್ತು ಸಹಕಾರಿ ಕ್ಷೇತ್ರಕ್ಕೆ ಮಹತ್ವವನ್ನು ನೀಡಿ ಎಂದು ಹೇಳಿದ್ದರು. ಅವರು ಜೀವಂತವಾಗಿದ್ದರೆ ಗ್ರಾಮೀಣ ಭಾರತದ ಉತ್ಥಾನಕ್ಕಾಗಿ ಅವರು ತಮ್ಮ ಯೋಜನೆಯ ಮಾದರಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಸಹಕಾರಿ ಕ್ಷೇತ್ರವನ್ನು ಮುನ್ನಡೆಸುತ್ತಿದ್ದರು. ಮಹಾನ್ ನಾಯಕರಾದ ಸರದಾರ ವಲ್ಲಭ ಭಾಯಿ ಪಟೇಲರು ಸಹಕಾರಿ ಕ್ಷೇತ್ರದಲ್ಲಿ ಸ್ವತಃ ಸಫಲವಾದ ಪ್ರಯತ್ನವನ್ನು ಮಾಡಿ ತೋರಿಸಿದ್ದರು. ಬಾರಡೋಲಿಯ ಸಕ್ಕರೆ ಕಾರ್ಖಾನೆಯಲ್ಲಿ ಸಹಕಾರಿ ಕ್ಷೇತ್ರದಲ್ಲಿ ಅವರ ಒಂದು ಬಹಳ ದೊಡ್ಡ ಸಫಲತೆಯ ಕತೆಯನ್ನು ಹೇಳುವ ಕಾರ್ಯವು ಇಂದಿಗೂ ಪ್ರಸ್ತುತವಾಗಿದೆ. ಇದು ಮಧ್ಯವರ್ತಿಯ ಪಾತ್ರವನ್ನು ಮುಗಿಸಿ ವ್ಯಾಪಕವಾಗಿ ಕ್ಷೇತ್ರೀಯ ವಿಕಾಸದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ.

ಸರದಾರ ಪಟೇಲರವರ ದೃಷ್ಟಿಯಲ್ಲಿ ದೇಶದ ಸಹಕಾರಿ ಸಮಿತಿಗಳ ಸಹಾಯದಿಂದ ರೈತರನ್ನು ಬಲಶಾಲಿಗಳನ್ನಾಗಿ ಮಾಡಬಹುದಾಗಿದೆ ಎಂಬುದಾಗಿತ್ತು. ಅವರ ವಿಚಾರದಲ್ಲಿ ರೈತರು ಭಾರತದ ಬೆನ್ನೆಲುಬಾಗಿ ಮತ್ತು ಸಹಕಾರಿ ಕ್ಷೇತ್ರವು ಭಾರತದ ಆತ್ಮವಾಗಿ ಕಂಡಿದ್ದರು. ಇದನ್ನೇ ದೃಷ್ಟಿಯಲ್ಲಿಟ್ಟುಕೊಂಡು ಮುಂದೆ ಸಹಕಾರಿ ಕ್ಷೇತ್ರದ ನೀತಿಗಳು ರೂಪಿವಾದವು. ದೇಶದ ಮೊದಲ ಪ್ರಧಾನ ಮಂತ್ರಿಗಳಾದ ಜವಹರಲಾಲ ನೆಹರುರವರು ಈ ಕ್ಷೇತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದರು. ಶ್ರೀ ವೈಕಂಠ ಭಾಯಿ ಮೆಹತಾರವರು ಈ ಕ್ಷೇತ್ರದ ವಿಇಕಾಸಕ್ಕೆ ಸಂಪೂರ್ಣ ಜೀವನವನ್ನೇ ಮೀಸಲಾಗಿಟ್ಟರು. ಭಾರತೀಯ ಸಹಕಾರ ಕ್ಷೇತ್ರದಲ್ಲಿ ಲಕ್ಷ್ಮಣರಾವ ಇನಾಮ್‌ದಾರ, ವರ್ಗೀಜ್ ಕುರಿಯನ್, ಮಧುಸೂಧನ ದಾಸ, ವೀ. ರಾಮದಾಸ ಪಂತುಲು, ತ್ರಿಭುವನ ದಾಸ ಪಟೇಲ್‌ರಿಂದ ಹಿಡಿದು ಉತ್ತರ ಪ್ರದೇಸದ ಬಾಬು ಬನಾರಸೀದಾಸ ಮತ್ತು ಸಾವಿರಾರು ಕ್ಷೇತ್ರೀಯ ವ್ಯಕ್ತಿಗಳು, ನಾಯಕರು ಸಹಕಾರಿ ಕ್ಷೇತ್ರದ ಮೂಲವನ್ನು ಭದ್ರ ಪಡೆಸಿದ್ದಾರೆ ಇದರ ಕಾರಣದಿಂದ ರೈತರು ಸಶಕ್ತರಾಗುವುದರ ಜೊತೆಗೆ ಕೃಷಿ ಕ್ಷೇತ್ರದ ವಿಕಾಸಕ್ಕೆ ಹೆಚ್ಚಿನ ಸಹಕಾರವು ದೊರೆತಿದೆ.

ಮುಂದುವರೆಯುತ್ತದೆ.

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2017-19 RNI NO. KARBIL-2004/18001/Pages 36

# ಜಿಎಸ್‌ಟಿ ಕೌನ್ಸಿಲ್ ಸಭೆ : ಯಾವುದು ಅಗ್ಗ, ಯಾವುದು ದುಬಾರಿ ಹಾಗೂ ಯಾವುದಕ್ಕಿದೆ ವಿನಾಯಿತಿ?

– ಸಂಗ್ರಹ




ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಯು ಗೋವಾದಲ್ಲಿ ಶುಕ್ರವಾರ 37ನೇ ಸಭೆ ನಡೆಸಿದ್ದು, ಕೆಲವೊಂದು ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಹಲವಾರು ವಸ್ತುಗಳ ದರ ಕಡಿತವನ್ನು ಘೋಷಿಸಿಲಾಗಿದ್ದು, ಪರಿಷ್ಕೃತ ಜಿಎಸ್‌ಟಿ ದರಗಳು ಅಕ್ಟೋಬರ್ 1 ರಿಂದ ಜಾರಿಗೆ ಬರಲಿವೆ ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ವಾಹನ ಉದ್ಯಮ ಹಾಗೂ ಬಿಸ್ಕಿಟ್ ಉದ್ಯಮಗಳ ಜಿಎಸ್‌ಟಿ ಇಳಿಕೆ ಮಾಡಬಹುದು ಎಂಬ ನಿರೀಕ್ಷೆಯಿತ್ತು. ಆದರೆ ಜಿಎಸ್‌ಟಿ ಸಭೆಯಲ್ಲಿ ಈ ಎರಡು ವಲಯಗಳ ಜಿಎಸ್‌ಟಿ ದರ ಇಳಿಕೆ ಮಾಡಿ ಜಿಎಸ್‌ಟಿ ಮಂಡಳಿ ಸಭೆಯ ನಂತರ ದುಬಾರಿ, ಅಗ್ಗ, ವಿನಾಯಿತಿ ನೀಡಲಾಗಿರುವ ಸರಕುಗಳ ಪಟ್ಟಿ ಇಲ್ಲಿ ನೀಡಲಾಗಿದೆ.

ಹೋಟೆಲ್ ಕೊಠಡಿ ಸುಂಕಗಳು ಆತಿಥ್ಯ ಉದ್ಯಮ ಮತ್ತು ಪ್ರವಾಸೋದ್ಯಮವನ್ನು ಉತ್ತೇಜಿಸುವ ಸಲುವಾಗಿ ಹೋಟೆಲ್ ಕೊಠಡಿ ಮೇಲಿನ ಸುಂಕ ತೆರಿಗೆ ಇಳಿಸಲಾಗಿದೆ. ಪ್ರತಿ ರಾತ್ರಿಗೆ ರೂ. 1,000 ವರೆಗೆ ಸುಂಕವನ್ನು ಹೊಂದಿರುವ ಹೋಟೆಲ್ ಕೊಠಡಿಗಳ ಮೇಲೆ ಜಿಎಸ್‌ಟಿ ಇಲ್ಲ. ಇದಲ್ಲದೆ, ಹೋಟೆಲ್ ಕೊಠಡಿ ದರವನ್ನು ಪ್ರತಿ ರಾತ್ರಿಗೆ ರೂ. 1,001 ರಿಂದ 7,500 ರೂ. ಗಳವರೆಗೆ ಈಗಿರುವ ಶೇಕಡಾ 18 ಜಿಎಸ್‌ಟಿ ದರದಿಂದ ಶೇಕಡಾ 12ಕ್ಕೆ ಕಡಿತಗೊಳಿಸಲಾಗಿದೆ. ಅಲ್ಲದೆ, ರೂ. 7,500 ಗಿಂತ ಹೆಚ್ಚಿನ ಮೊತ್ತದ ಕೋಣೆಯ ಮೇಲಿನ ತೆರಿಗೆಯನ್ನು ಈಗಿರುವ ಶೇಕಡಾ 28 ರಿಂದ ಶೇಕಡಾ 18ಕ್ಕೆ ಇಳಿಸಲಾಗಿದೆ.

ಅಗ್ಗದ ಸರಕುಗಳು ಭಾರತದಲ್ಲಿ ಉತ್ಪಾದಿಸದ, ವಿದೇಶಗಳಿಂದ ಆಮದು ಮಾಡಿಕೊಳ್ಳುವ ರಕ್ಷಣಾ ಉತ್ಪನ್ನಗಳ ಜಿಎಸ್‌ಟಿ ಬೆಲೆಯನ್ನು ಇಳಿಕೆ ಮಾಡಲಾಗಿದೆ. ವಜ್ರ ಉದ್ಯಮದ ಕೆಲಸದ ಮೇಲಿನ ತೆರಿಗೆ ದರವನ್ನು ಶೇ. 5 ರಿಂದ ಶೇ. 1.5 ಗೆ ಇಳಿಕೆ ಮಾಡಲಾಗಿದೆ. ಒಣಗಿದ ಹುಣಸೆ ಹಣ್ಣಿನ ಮೇಲಿನ ಜಿಎಸ್‌ಟಿ ಶೇ.5 ರಿಂದ ಶೂನ್ಯಗೊಳಿಸಲಾಗಿದೆ. ಪರಿಸರ ಸ್ನೇಹಿ ವಸ್ತು ಹಾಗೂ ಎಲೆಗಳಿಂದ ಮಾಡಿದ ಕಪ್, ಪ್ಲೇಟ್ ಮೇಲಿನ ಜಿಎಸ್‌ಟಿ ದರವನ್ನು ಶೇ. 5 ರಿಂದ ಶೂನ್ಯಕ್ಕೆ ಇಳಿಕೆ ಮಾಡಲಾಗಿದೆ. ಪಾಲಿಪ್ರೊಪಿಲೀನ್ / ಪಾಲಿಥಿಲೀನ್ ನಿಂದ ನೇಯ್ದ ಮತ್ತು ಸರಕುಗಳ ಪ್ಯಾಕಿಂಗ್ಗೆ ಬಳಸುವ ನೇಯದ ಚೀಲಗಳು ಮತ್ತು ಚೀಲಗಳ ಮೇಲೆ ಏಕರೂಪದ ಜಿಎಸ್‌ಟಿ ದರವನ್ನು ಪ್ರಸ್ತುತ ದರಗಳ ಪ್ರಕಾರ ಕ್ರಮವಾಗಿ 5 ಪ್ರತಿಶತ / 12 ಶೇಕಡಾ / 18 ರಂತೆ ವಿಧಿಸಲಾಗುತ್ತದೆ.

ಪ್ರಯಾಣಿಕರ ವಾಹನಗಳು 13 ಸೀಟುಗಳ 1200 ಸಿಸಿ ಪೆಟ್ರೋಲ್ ವಾಹನ ಹಾಗೂ 1500 ಸಿಸಿ ಇಂಜಿನ್ ಹೊಂದಿರುವ ಡೀಸೆಲ್ ವಾಹನದ ಸೆಸ್ ದರವನ್ನು ಕಡಿತಗೊಳಿಸಿ ಶೇ.12ಕ್ಕೆ ಇಳಿಕೆ ಮಾಡಲಾಗಿದೆ.

ದುಬಾರಿ ಸರಕುಗಳು ಮಾಲ್ ನಲ್ಲಿ ಪ್ಯಾಕಿಂಗ್‌ಗೆ ಬಳಸುವ ಪಾಲಿಪ್ರೊಪಿಲೀನ್ ಚೀಲಗಳಿಗೆ ಶೇ. 12ರಷ್ಟು ಜಿಎಸ್‌ಟಿ ವಿಧಿಸಲಾಗುವುದು. ಕೆಫಿನ್ ಹೊಂದಿರುವ ಪಾನೀಯಗಳ ಮೇಲೆ ಶೇ. 18ರಷ್ಟು ಜಿಎಸ್‌ಟಿ ಜೊತೆ ಶೇ. 12ರಷ್ಟು ಸೆಸ್ ವಿಧಿಸಲಾಗುವುದು. ರೈಲ್ವೆ ವ್ಯಾಗನ್, ಬೋಗಿಗಳ ಮೇಲಿನ ಜಿಎಸ್‌ಟಿ ದರವನ್ನು ಶೇ.5 ರಿಂದ ಶೇ.12ಕ್ಕೆ ಹೆಚ್ಚಿಸಲಾಗಿದೆ.

ವಿನಾಯಿತಿಗಳು ನಿರ್ಮಲಾ ಸೀತಾರಾಮನ್ ಅವರು ನಿಗದಿತ ಆಮದು ಮಾಡಲಾಗುವ ದೇಶೀಯಾವಾಗಿ ಉತ್ಪಾದಿಸಲಾಗದ ರಕ್ಷಣಾ ಸರಕುಗಳನ್ನು ಮೇಲೆ ವಿನಾಯಿತಿ ನೀಡಿದ್ದಾರೆ. ಭಾರತದಲ್ಲಿ 17 ವರ್ಷದೊಳಗಿನ ಮಹಿಳಾ ಫುಟ್ಬಾಲ್ ವಿಶ್ವಕಪ್ ಆಯೋಜಿಸಲು ಫಿಫಾಗೆ ಸರಕು ಮತ್ತು ಸೇವೆಗಳ ಪೂರೈಕೆ, ಮತ್ತು ನಿರ್ದಿಷ್ಟಪಡಿಸಿದ ಆಹಾರದ ಮೇಲೆ ಜಿಎಸ್‌ಟಿ ವಿನಾಯಿತಿ ನೀಡಲಾಗಿದೆ. ಕೃಷಿ ಸಂಸ್ಥೆ (ಎಫ್‌ಎಒ) ಗೆ ಸರಬರಾಜು ಮಾಡಲಾಗುವ ಸರಕುಗಳ ಮೇಲೆ ಜಿಎಸ್‌ಟಿ ವಿನಾಯಿತಿ ಇದೆ. ಮೀನುಗಾರಿಕೆ ಮತ್ತು ಕೃಷಿ ಯಂತ್ರೋಪಕರಣಗಳ ಇತರ ಭಾಗಗಳ ಮೇಲೆ ನಿರ್ದಿಷ್ಟ ಅವಧಿಗೆ ಜಿಎಸ್‌ಟಿ ಯಿಂದ ವಿನಾಯಿತಿ ನೀಡಿದೆ. ಪರವಾನಗಿ ನೀತಿಯಡಿಯಲ್ಲಿ ತೈಲ ಮತ್ತು ಅನಿಲ ಪರಿಶೋಧನೆ ಮತ್ತು ಉತ್ಪಾದನೆಗೆ ಬಳಸುವ ನಿರ್ದಿಷ್ಟ ಸರಕುಗಳ ಮೇಲೆ 5 ಪ್ರತಿಶತ ಜಿಎಸ್‌ಟಿ ಅನ್ವಯವಾಗುತ್ತದೆ.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಫೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪ್ರಾಂತೀಯ ಕಛೇರಿ: ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ–585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010